ಕನ್ನಡ ಕಾದಂಬರಿಗಳಲ್ಲಿ ಮನೋವೈಜ್ಞಾನಿಕ ಪರಿಕಲ್ಪನೆಗಳು

ಪಿಹೆಚ್.ಡಿ ಪದವಿಗಾಗಿ ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿರುದ

ಮಹಾಪ್ರಬಂಧದ ಅಂತಿಮ ಸಾರಲೇಖ

ಸಂಶೋಧಕರು

ಮೈತ್ರಿ ಭಟ್

ಮಾರ್ಗದರ್ಶಕರು

ಡಾ. ನಾಗಪ್ಪ ಗೌಡ ಆರ್.

ಸಹ ಪ್ರಾಧ್ಯಾಪಕರು

ಎಸ್. ವಿ. ಪಿ. ಕನ್ನಡ ಅಧ್ಯಯನ ಸಂಸ್ಥೆ

ಮಂಗಳೂರು ವಿಶ್ವವಿದ್ಯಾನಿಲಯ

ಮಂಗಳಗಂಗೋತ್ರಿ – ೫೭೪೧೯೯

೨೦೨೧

ಕನ್ನಡ ಕಾದಂಬರಿಗಳಲ್ಲಿ ಮನೋವೈಜ್ಞಾನಿಕ ಪರಿಕಲ್ಪನೆಗಳು

ಪ್ರಸ್ತಾವನೆ

- ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ
- ಅಧ್ಯಯನದ ವೈಧಾನಿಕತೆ
- ವಿಷಯಾಧಾರಿತ ಸಾಹಿತ್ಯ ಸಮೀಕ್ಷೆ
- ಅಧ್ಯಯನದ ಪ್ರಸ್ತುತತೆ

ಅಧ್ಯಾಯ ೧ : ಸಾಹಿತ್ಯ ಮತ್ತು ಮನೋವಿಜ್ಞಾನ

೧.೧ ಪಾಶ್ಚಾತ್ಯ ಮನೋವಿಜ್ಞಾನಿಗಳು ಕಂಡಂತೆ ಸಾಹಿತ್ಯ

೧.೨ ಪಾಶ್ಚಾತ್ಯ ಕಾವ್ಯಮೀಮಾಂಸಕರು ಮತ್ತು ಕವಿಗಳು ಕಂಡಂತೆ ಸಾಹಿತ್ಯ

೧.೩ ಭಾರತೀಯ ಕಾವ್ಯಮೀಮಾಂಸಕರು ಕಂಡಂತೆ ಸಾಹಿತ್ಯ

೧.೪ ಕನ್ನಡ ಸಾಹಿತಿಗಳು ಕಂಡಂತೆ ಸಾಹಿತ್ಯ

ಅಧ್ಯಾಯ ೨ : ಕನ್ನಡದಲ್ಲಿ ಮನೋವೈಜ್ಞಾನಿಕ ಕಾದಂಬರಿಗಳು

೨.೧ ಮನೋವೈಜ್ಞಾನಿಕ ವಸ್ತುವನ್ನೊಳಗೊಂಡ ಕಾದಂಬರಿಗಳು

೨.೨ ಮನೋವೈಜ್ಞಾನಿಕ ಅಂಶಗಳನ್ನೊಳಗೊಂಡ ಕಾದಂಬರಿಗಳು

೨.೩ ಪ್ರಜ್ಞಾಪ್ರವಾಹ ತಂತ್ರವಿರುವ ಕಾದಂಬರಿಗಳು

ಅಧ್ಯಾಯ ೩ : ಕನ್ನಡ ಕಾದಂಬರಿಗಳಲ್ಲಿ ಅಂತಃಕೇಂದ್ರೀಯ ವ್ಯಕ್ತಿತ್ವದ ನೆಲೆಗಳು

೩.೧ ವ್ಯಕ್ತಿತ್ವ ಸಿದ್ಧಾಂತಗಳು

೩.೨ ಭಾರತೀಯ ಕಲ್ಪನೆಯಲ್ಲಿ ವ್ಯಕ್ತಿತ್ವ

೩.೩ ಕನಸುಗಳ ವಿಶ್ಲೇಷಣೆ

೩.೪ ಮಾನಸಿಕ ಆರೋಗ್ಯ ಮತ್ತು ರಕ್ಷಣಾ ತಂತ್ರಗಳು

ಅಧ್ಯಾಯ ೪: ಕನ್ನಡ ಕಾದಂಬರಿಗಳಲ್ಲಿ ಅಂತರ್‌ವ್ಯಕ್ತಿ ಸಂಬಂಧದ ನೆಲೆಗಳು

೪.೧ ಅಂತರ್‌ವ್ಯಕ್ತಿ ಸಂಬಂಧಗಳು

೪.೨ ವ್ಯಕ್ತಿತ್ವ ಭಿನ್ನತೆಗಳು/ವ್ಯಕ್ತಿತ್ವ ದೋಷಗಳು

೪.೩ ಗಂಡು-ಹೆಣ್ಣಿನ ಸಂಬಂಧ

ಅಧ್ಯಾಯ ೫: ಕನ್ನಡ ಕಾದಂಬರಿಗಳಲ್ಲಿ ಸಾಮಾಜಿಕ ಸಂಬಂಧದ ಮನೋವೈಜ್ಞಾನಿಕ ನೆಲೆಗಳು

೫.೧ ಸಾಮಾಜಿಕ ಸಂಬಂಧಗಳ ಸ್ವರೂಪ ಮತ್ತು ಸಂಬಂಧಗಳ ಮೇಲೆ ಸಾಮಾಜಿಕ ಅಂಶಗಳ ಪ್ರಭಾವ

೫.೨ ಸಾಮಾಜಿಕ ದೂರ (Social distance)

೫.೩ ಸಾಮಾಜಿಕ ಅಸ್ಮಿತೆ (Social identity)

ಸಮಾರೋಪ

- ಫಲಿತಗಳು
- ಹೊಸ ಸಾಧ್ಯತೆಗಳು

ಅನುಬಂಧ: ಗ್ರಂಥಋಣ

- ಮೂಲ ಪಠ್ಯಗಳು (ಕಾದಂಬರಿಗಳು)
- ಕನ್ನಡ ಕೃತಿಗಳು
- ಕನ್ನಡ ಲೇಖನಗಳು
- ಇಂಗ್ಲಿಷ್ ಕೃತಿಗಳು
- ಇಂಗ್ಲಿಷ್ ಲೇಖನಗಳು

ಕನ್ನಡ ಕಾದಂಬರಿಗಳಲ್ಲಿ ಮನೋವೈಜ್ಞಾನಿಕ ಪರಿಕಲ್ಪನೆಗಳು

ಪ್ರಸ್ತಾವನೆ

ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದ ಪ್ರಮುಖ ಪ್ರಕಾರವಾದ ಕಾದಂಬರಿಯು ಪ್ರಮಾಣ ಮತ್ತು ಪರಿಣಾಮಗಳ ದೃಷ್ಟಿಯಿಂದ ಮೊದಲ ಸ್ಥಾನದಲ್ಲಿದೆ. ಸುಮಾರು ೧೨೦ ವರ್ಷಗಳಲ್ಲಿ ಸಮೃದ್ಧ ಹಾಗೂ ವೈವಿಧ್ಯಮಯ ಹರಹನ್ನು ಹೊಂದಿ ಓದುಗರ ಆಶೋತ್ತರಗಳಿಗೆ ದನಿಯಾಗುತ್ತ, ಆಯಾ ಕಾಲಘಟ್ಟದ ನಿಲುವುಗಳಿಗೆ ಸ್ಪಂದಿಸುತ್ತ ವಿಸ್ತಾರವಾಗಿ ಬೆಳೆದಿದೆ. ಸಾಮಾಜಿಕ, ಐತಿಹಾಸಿಕ, ಪ್ರಾದೇಶಿಕ ಮೊದಲಾದ ರೀತಿಯಲ್ಲಿ ವರ್ಗೀಕರಣಗೊಂಡ ಕಾದಂಬರಿಯ ಬಗೆಗಿನ ಅಧ್ಯಯನವು ಅನೇಕ ವೈಚಾರಿಕ ಮಾನದಂಡ ಹಾಗೂ ಪರಿಕಲ್ಪನಾತ್ಮಕ ನೆಲೆಗಳನ್ನು ಆಧರಿಸಿ ನಡೆದಿದೆ.

ಸಾಹಿತ್ಯವು ಸಮಾಜದ ಗತಿಬಿಂಬ. ಅದು ಬದುಕನ್ನು ಚರಿತ್ರೆಯಂತೆ ಕಾಲಾನುಕ್ರಮದಲ್ಲಿ ದಾಖಲಿಸದೆ ಹೋದರೂ ಕಲಾತ್ಮಕವಾಗಿ ಹಿಡಿದಿಡುವುದರೊಂದಿಗೆ ಬದುಕಿನ ಎಲ್ಲ ಮಗ್ಗುಲುಗಳ ಸೂಕ್ಷ್ಮ ದರ್ಶನವನ್ನು ಒಳಗೊಂಡಿದೆ. ಅದರಲ್ಲೂ ಬದುಕಿನ ಎಳೆಎಳೆಯನ್ನು ಅಖಂಡವಾಗಿ ಹಿಡಿದಿಡುವ ಕಾದಂಬರಿಯ ವಸ್ತು ವಾಸ್ತವ ಜೀವನಕ್ಕೆ ಬಹಳ ಹತ್ತಿರವಾಗಿದ್ದು, ಮನುಷ್ಯ ಸ್ವಭಾವ ಹಾಗೂ ಮಾನವ ಸಂಬಂಧದ ಮೂಲರೂಪಗಳ ವಿಪುಲ ಮಾದರಿಗಳನ್ನು ಒದಗಿಸುತ್ತದೆ. ಕಾದಂಬರಿಯ ಮುಖ್ಯವಸ್ತು ಏನೇ ಇದ್ದರೂ, ಗಂಡು–ಹೆಣ್ಣಿನ ಸಂಬಂಧ, ಮನುಷ್ಯ ಸ್ವಭಾವದ ವಿಶ್ಲೇಷಣೆ, ಜೀವನದ ಅರ್ಥದ ಶೋಧನೆ, ಮನುಷ್ಯ ಸಹಜ ಹಂಬಲ, ತೊಳಲಾಟ, ಅನಿಸಿಕೆ, ಭಾವನೆ, ದ್ವಂದ್ವ, ಸಂಘರ್ಷ, ನೋವು–ನಲಿವು, ತಿರಸ್ಕಾರ, ಕನಸುಗಳ ಮೂಲಕ ಬೃಹದಾಕಾರವಾಗಿ ಬೆಳೆಯುವ ಪಾತ್ರ ಹಾಗೂ ಸನ್ನಿವೇಶಗಳನ್ನು ಕಾಣಬಹುದಾಗಿದೆ.

ಮನುಷ್ಯನ ಪ್ರತಿಯೊಂದು ಚಟುವಟಿಕೆಯೂ ಮನಸ್ಸನ್ನು ಅವಲಂಬಿಸಿದೆ. ಮಾನವನ ಸುಂದರ ಕಲಾಭಿವ್ಯಕ್ತಿಗಳಲ್ಲಿ ಒಂದಾದ ಸಾಹಿತ್ಯ ರಚನೆಯು ಒಂದು ಸಂಕೀರ್ಣ ಸೃಜನಾತ್ಮಕ ಮಾನಸಿಕ ಪ್ರಕ್ರಿಯೆ. ಮಾನವನ ಬದುಕಿನ ಅತ್ಯಂತ ನಿಕಟ ಹಾಗೂ ಮೂರ್ತವಾದ ಅನುಭವದ ಎಲ್ಲಾ ಸ್ತರಗಳನ್ನು ಒಳಗೊಂಡ ಸಾಹಿತ್ಯವು ಮಾನವನ ಬೌದ್ಧಿಕ, ಭಾವನಾತ್ಮಕ, ಧಾರ್ಮಿಕ ಹಾಗೂ ದಾರ್ಶನಿಕ ಚಿಂತನೆಗಳ ಸುಂದರ ಶಾಬ್ದಿಕ ಹಾಗೂ ಲೇಖಕನ ಮನಃಸ್ಥಿತಿಯ ವ್ಯಕ್ತಿತ್ವ ವಿನ್ಯಾಸದ ಕಲ್ಪನಾಪ್ರಧಾನ ಅಭಿವ್ಯಕ್ತಿ.

ಜನಸಮೂಹದ ಬದುಕಿನ ಗರ್ಭದಲ್ಲಿಯೇ ರೂಪುತಳೆಯುವ ಸಾಹಿತ್ಯವು ಸುಪ್ತ ಹಾಗೂ ಗುಪ್ತವಾಗಿರುವ ಅಂತರಂಗದ ಅವಸ್ಥೆಯನ್ನು ಅನಾವರಣಗೊಳಿಸುತ್ತದೆ. ಯಾವುದೇ ಆದರ್ಶ ಮೌಲ್ಯಗಳನ್ನು ತನ್ನೊಡಲಿನಲ್ಲಿ ತುಂಬಿಕೊಂಡಿದ್ದರೂ ನೆಲದ ಬದುಕಿನಲ್ಲಿಯೇ ನಿಂತಿರುತ್ತದೆ.

ಅದರಲ್ಲೂ ಕಾದಂಬರಿಗಳು ಒಳಗೊಂಡಿರುವ ಅನುಭವದ್ರವ್ಯ ಅಗಾಧವಾಗಿದ್ದು, ಮನುಷ್ಯ ಸ್ವಭಾವ, ಮನುಷ್ಯ ಸಂಬಂಧಗಳು, ಸಾಮಾಜಿಕ–ಆರ್ಥಿಕ–ರಾಜಕೀಯ–ಸಾಂಸ್ಕೃತಿಕ–ಮನೋವೈಜ್ಞಾನಿಕ–ಆಧ್ಯಾತ್ಮಿಕ ಸಮಸ್ಯೆಗಳ ಜಿಜ್ಞಾಸೆ, ಜಾತಿ–ವರ್ಗ–ಲಿಂಗ ಅಸಮಾನತೆಗಳ ಶೋಧ, ಅಸ್ಮಿತೆಯ ಪ್ರಶ್ನೆ, ಸಾಮಾಜಿಕ ನ್ಯಾಯದ ನಿರ್ವಚನ, ಪಲ್ಲಟಗೊಳ್ಳುತ್ತಿರುವ ಜೀವನಕ್ರಮಗಳ ಅವಲೋಕನ, ಚಲನಶೀಲ ಇತಿಹಾಸದ ದಿಕ್ಕು–ದೆಸೆ–ಗತಿಗಳ ಪ್ರತಿಫಲನ ಹೀಗೆ ಮನುಷ್ಯನ ಹಲವು ಮುಖಗಳ ದರ್ಶನವನ್ನು ಒಳಗೊಂಡಿರುತ್ತವೆ. ಇವುಗಳೊಂದಿಗೆ ಕಾದಂಬರಿಯು ಜೀವನಕ್ಕೆ ಪ್ರತ್ಯಕ್ಷವಾಗಿ ಸಂಬಂಧವುಳ್ಳದ್ದಾಗಿದ್ದು, ಬದುಕಿನ ಸ್ಥಿತ್ಯಂತರಗಳು, ನಾಯಕ/ನಾಯಕಿಯ ಮನೋಬಯಕೆ, ನಿರೀಕ್ಷೆಗಳು, ಸಾಂಪ್ರದಾಯಿಕ ಚೌಕಟ್ಟಿನೊಳಗೆ ಸುಪ್ತವಾಗಿರುವ ವಿವರಗಳ ಅನಾವರಣ, ಸ್ತ್ರೀ–ಪುರುಷ ಸಂಬಂಧಗಳು, ಸ್ವಭಾವ, ಭಾವನೆ, ತುಮುಲ, ಆಸೆ–ನಿರಾಸೆ, ದುಃಖ–ಭರವಸೆ, ಹೊಯ್ದಾಟ–ಹೋರಾಟಗಳಿಂದೊಡಗೂಡಿರುತ್ತದೆ.

ಸಮಾಜವನ್ನು ಎಂದಿಗೂ ಬಿಡಿಬಿಡಿಯಾಗಿ ನೋಡುವುದು ಸಾಧ್ಯವಿಲ್ಲ. ಸಂಕೀರ್ಣ ಸಮಾಜವನ್ನು ಇತರ ಶಿಸ್ತುಗಳ ಮೂಲಕ ಸಮಗ್ರವಾಗಿ ನೋಡಬೇಕಾದ ಅನಿವಾರ್ಯತೆಯಿದೆ. ಮನೋವಿಜ್ಞಾನಕ್ಕೂ ಕಲೆ–ಸಾಹಿತ್ಯಕ್ಕೂ ಗಾಢವಾದ ಸಂಬಂಧವಿದೆ. ಏಕೆಂದರೆ ಕೃತಿಯ ನಿರ್ಮಾತೃ ಅಥವಾ ಲೇಖಕ ಹಾಗೂ ಅದರ ಓದುಗರು ಮನುಷ್ಯರೇ ಆಗಿದ್ದು, ಸಾಹಿತ್ಯವು ಒಂದು ರೀತಿಯಲ್ಲಿ ಮನುಷ್ಯನ ವರ್ತನೆಗಳಿಗೆ ನಿರೂಪಣೆಯನ್ನು ಕೊಡುವುದರಿಂದ ಎಲ್ಲ ಕೃತಿಗಳಲ್ಲಿಯೂ ಮನೋವಿಜ್ಞಾನದ ಚಹರೆ/ಕುರುಹುಗಳು ಇದ್ದೇ ಇರುತ್ತವೆ. ಮನುಷ್ಯನ ಮನಸ್ಸಿಗೂ ಸೃಜನಕಾರ್ಯಕ್ಕೂ ನಿಕಟವಾದ ಸಂಬಂಧವಿದೆ. ಬದುಕಿನ ಸಮಗ್ರತೆಯನ್ನು ತನ್ನದೇ ಆದ ಸಂಕೀರ್ಣ ಮಾರ್ಗದಲ್ಲಿ ಹಿಡಿದಿಡಲು ಯತ್ನಿಸುವ ಸಾಹಿತ್ಯವು ಮಾನವನ ಮಾನಸಿಕ ಸ್ಥಿತಿಯ ಪ್ರತಿಬಿಂಬ; ಅಂತರಂಗವನ್ನು ತೆರೆದು ತೋರುವ ಕೀಲಿಕೈ. ಸಾಹಿತ್ಯದಲ್ಲಿ ಮಾನವನ ಜಾಗೃತ ಮನಸ್ಸು ಮತ್ತು ಬಹಿರಂಗ ಜೀವನದ ಪ್ರತಿಬಿಂಬಗಳಷ್ಟೇ ಸ್ಪಷ್ಟವಾಗಿ ಒಳಮನಸ್ಸಿನ, ಅಜಾಗೃತ ಮನಸ್ಸಿನ ಚರ್ಯೆ–ಚೇಷ್ಟೆಗಳ ಬಿಂಬಗಳೂ ಅಭಿವ್ಯಕ್ತಗೊಳ್ಳುತ್ತವೆ.

ಮನೋವಿಜ್ಞಾನದ ಪ್ರಕಾರ ಸಾಹಿತ್ಯವು ಮನುಷ್ಯನ ಮನಸ್ಸಿನ ಬಹಳ ಸಹಜವಾದ ಕ್ರಿಯೆ ಹಾಗೂ ಪ್ರಕ್ರಿಯೆ. ಮಾನವನ ಮನಸ್ಸು ಸತತವಾಗಿ ಸೃಜನಕಾರ್ಯದಲ್ಲಿ ನಿರತವಾಗಿರುತ್ತದೆ. ಈ ಕಾರಣದಿಂದ ಸಾಹಿತ್ಯದ ಅಧ್ಯಯನಕ್ಕೆ ಮನೋವಿಜ್ಞಾನ ಜೊತೆಯಾದಾಗ ಒಂದು ಹೊಸ ನೋಟ, ಹೊಸ ಆಯಾಮ ದೊರಕುತ್ತದೆ. ಇದರೊಂದಿಗೆ ಆಧುನಿಕ ಮನೋವಿಜ್ಞಾನವು ಸಾಹಿತ್ಯಕ್ಷೇತ್ರಕ್ಕೆ ಅನೇಕ ಅಮೂಲ್ಯ ಒಳನೋಟಗಳನ್ನು ಕೊಟ್ಟಿದೆ ಹಾಗೂ ಕೊಡಬಲ್ಲುದು. ಕಾರಣ, ಸಾಹಿತ್ಯವು ಜೀವನದ ಸಂಘಟಿತ ಸಮಗ್ರ ಚಿತ್ರವನ್ನೊದಗಿಸಿದರೆ, ಮನೋವಿಜ್ಞಾನವು ಜೀವನದ ವಿಶ್ಲೇಷಿತ ಚಿತ್ರವನ್ನು ನೀಡುತ್ತದೆ.

ಅರಿಸ್ಟಾಟಲ್‌ನ 'ಶೋಧನೆ'(Catharsis) ಪರಿಕಲ್ಪನೆಯೇ ಸಾಹಿತ್ಯವಿಮರ್ಶೆ ಮತ್ತು ಮನೋವಿಜ್ಞಾನಕ್ಕೆ ಸಂಬಂಧವನ್ನು ಕಲ್ಪಿಸಿದರೂ, ಇಂದು ಪ್ರಚಲಿತವಾಗಿರುವ ಆಧುನಿಕ ಮನೋವಿಜ್ಞಾನ ೨೦ನೇ ಶತಮಾನದ ಕೊಡುಗೆ. ಸಾಹಿತ್ಯ ಅಧ್ಯಯನಕ್ಕೂ ಮನೋವಿಜ್ಞಾನಕ್ಕೂ ಇರುವ ಕೊಂಡಿ ಸುಮಾರು ಒಂದು ಶತಮಾನದ್ದು. ಸಿ. ಜಿ. ಯೂಂಗ್ 'ಮನೋವಿಜ್ಞಾನ ಮತ್ತು ಸಾಹಿತ್ಯ' ಎಂಬ ಲೇಖನದಲ್ಲಿ ಮನೋವೈಜ್ಞಾನಿಕ ಅಂಶಗಳಾದ ಗ್ರಹಿಕೆ ಮತ್ತು ಮೌಲ್ಯಮಾಪನಗಳು ವಿಮರ್ಶೆಗೆ ನೆಲೆ ಒದಗಿಸುವುದಾಗಿ ಹೇಳಿ ಸಾಹಿತ್ಯವು ಮನಸ್ಸಿನ ಕಾರ್ಯಗಳ ಪರಿಣಾಮವೆಂದು ಪ್ರತಿಪಾದಿಸುವುದರ ಮೂಲಕ ಸಾಹಿತ್ಯ ಹಾಗೂ ಮನೋವಿಜ್ಞಾನದ ನಡುವಿನ ಸಂಬಂಧವನ್ನು ಬೆಸೆದನು.

ಮನೋವಿಜ್ಞಾನವು ಮನುಷ್ಯನ ವರ್ತನೆ, ಅನುಭವಗಳನ್ನು ಅಧ್ಯಯನ ಮಾಡುತ್ತದೆ. ಸಾಹಿತ್ಯ ಮತ್ತು ಮನೋವಿಜ್ಞಾನದ ಸಂಬಂಧಗಳನ್ನು ಕುರಿತು ಅಧ್ಯಯನ ಮಾಡಬೇಕಾದಾಗ ಲೇಖಕನನ್ನು ಕುರಿತ ಮನೋವೈಜ್ಞಾನಿಕ ಅಧ್ಯಯನ, ಸೃಷ್ಟಿ ಪ್ರಕ್ರಿಯೆಯ ಅಧ್ಯಯನ, ಸಾಹಿತ್ಯ ಕೃತಿಗಳಲ್ಲಿ ಕಂಡುಬರುವ ಮನೋವೈಜ್ಞಾನಿಕ ಸಿದ್ಧಾಂತ ಮತ್ತು ಮಾದರಿಗಳ ಅಧ್ಯಯನ ಮತ್ತು ಓದುಗರ ಮೇಲೆ ಸಾಹಿತ್ಯದ ಪರಿಣಾಮಗಳನ್ನು ಅಧ್ಯಯನ ಮಾಡಬಹುದಾಗಿದೆ.

ಸಾಹಿತ್ಯದ ಮೂಲಕ ಸಾಹಿತಿಯನ್ನೂ, ಸಾಹಿತಿಯ ಮೂಲಕ ಸಾಹಿತ್ಯವನ್ನೂ ಗ್ರಹಿಸಬಹುದಾಗಿದೆ. ಸಾಹಿತ್ಯದ ಮನೋವೈಜ್ಞಾನಿಕ ಅಧ್ಯಯನದಲ್ಲಿ ಸಾಹಿತ್ಯಾಭಿವ್ಯಕ್ತಿಯು ಹೇಗೆ ನಡೆಯುತ್ತದೆ; ಯಾವ ಘಟಕಗಳು ಸಾಹಿತಿಯಲ್ಲಿ ಈ ಸೃಜನಾತ್ಮಕ ಕ್ರಿಯೆಯನ್ನು ಪ್ರೇರೇಪಿಸುತ್ತವೆ ಎಂಬುದನ್ನು ಅಧ್ಯಯನ ಮಾಡಬಹುದಾಗಿದೆ. ಕಲಾಸೃಷ್ಟಿಯಲ್ಲಿ ಜಾಗೃತ ಹಾಗೂ ಅಜಾಗೃತ ಪ್ರಜ್ಞೆಯ ಪಾತ್ರವನ್ನೂ ಗುರುತಿಸಬಹುದಾಗಿದೆ. ಅಂದರೆ ಜಾಗೃತ ಅಥವಾ ಪ್ರಜ್ಞಾಸ್ತರದಿಂದ ರೂಪುಗೊಳ್ಳುವ ವೈಚಾರಿಕತೆ ಹಾಗೂ ಅಜಾಗೃತ ಸ್ತರದಿಂದ ಅಥವಾ ಸುಪ್ತಾವಸ್ಥೆಯಿಂದ ರೂಪುಗೊಳ್ಳುವ ಭಾವನಾತ್ಮಕತೆಯನ್ನು ಅರಿಯಲು ಪ್ರಯತ್ನಿಸಬಹುದಾಗಿದೆ.

ಲೇಖಕನ ಮಾನಸಿಕ ಅಧ್ಯಯನದ ಮೂಲಕ, ಕೃತಿಯಲ್ಲಿ ಕೆಲವು ಪಾತ್ರಗಳ ಮೂಲಕ ವ್ಯಕ್ತವಾಗುವ ಕೃತಿಕಾರನ ನಂಬಿಕೆ, ಆಲೋಚನೆಯ ವಿವರಗಳನ್ನು ಗ್ರಹಿಸಬಹುದು. ಆದರೆ ಕೇವಲ ಕೃತಿಯಲ್ಲಿ ವ್ಯಕ್ತವಾದ ಘಟನೆಗಳನ್ನು ತೆಗೆದುಕೊಂಡರೆ ಸಾಲದು; ಪಾತ್ರ ಹಾಗೂ ಅದು ಸೃಷ್ಟಿಯಾದ ಸಂದರ್ಭವನ್ನು ಗಮನಿಸಬೇಕಾಗುತ್ತದೆ. ಕೆಲವೊಮ್ಮೆ ಕೃತಿಯಲ್ಲಿ ವಿರೋಧಿಸುವ ಅಂಶವನ್ನೂ ಪೋಷಿಸಬೇಕಾಗುತ್ತದೆ. ಆದರೂ ತಮ್ಮ ಅನಿಸಿಕೆಗಳಿಗೆ ಪೂರಕವಾಗುವ ಪಾತ್ರಸೃಷ್ಟಿ ಕವಿಯ ಅರಿವಿದ್ದು ಅಥವಾ ಅರಿವಿಲ್ಲದೆಯೇ ಆಗಿರುತ್ತದೆ.

ಯಾವುದಾದರೂ ಒಂದು ಪಾತ್ರದ ವ್ಯಕ್ತಿತ್ವ ಪರಿಶೀಲನೆಯ ಮೂಲಕ ಕೃತಿಯಲ್ಲಿ ಅಡಕವಾಗಿರುವ ಮೂಲಭೂತ ವೈಜ್ಞಾನಿಕ ಅಂಶಗಳು ಅಂದರೆ ಕೃತಿಯಲ್ಲಿರುವ ಮನೋವೈಜ್ಞಾನಿಕ

ಮಾದರಿಗಳು ಅಥವಾ ಅಂಶಗಳನ್ನು ವಿವೇಚಿಸಬಹುದಾಗಿದ್ದು, ಸಾಹಿತ್ಯಕೃತಿಯ ಮನೋವೈಜ್ಞಾನಿಕ ಅಧ್ಯಯನವು ಅಂತರ್‌ಶಿಸ್ತೀಯ ಅಧ್ಯಯನ ವಿಧಾನದ ಒಂದು ಮಾದರಿಯಾಗಿದೆ.

ಅಧ್ಯಯನದ ಉದ್ದೇಶ:

'ಕನ್ನಡ ಕಾದಂಬರಿಗಳಲ್ಲಿ ಮನೋವೈಜ್ಞಾನಿಕ ಪರಿಕಲ್ಪನೆಗಳು' ಎಂಬ ಈ ಅಧ್ಯಯನದಲ್ಲಿ ಆಧುನಿಕ ಕನ್ನಡ ಕಾದಂಬರಿಗಳಲ್ಲಿ ಬರುವ ಘಟನೆಗಳು ಮತ್ತು ಪಾತ್ರಗಳನ್ನು ವಿಶ್ಲೇಷಣೆಗೆ ಒಳಪಡಿಸುವ ಮೂಲಕ ಕಾದಂಬರಿಗಳಲ್ಲಿ ಕಂಡುಬರುವ ಮನೋವೈಜ್ಞಾನಿಕ ಸಿದ್ಧಾಂತ ಮತ್ತು ಮಾದರಿಗಳನ್ನು(ಮನೋವಿಜ್ಞಾನದ ಪರಿಕಲ್ಪನೆಗಳನ್ನು) ಗುರುತಿಸಲಾಗಿದೆ. ಇಲ್ಲಿ ಮನೋವಿಜ್ಞಾನದ ಪರಿಕಲ್ಪನೆಗಳನ್ನು ಕನ್ನಡ ಕಾದಂಬರಿಗಳಿಗೆ ಅನ್ವಯಿಸಿ ಅಂತರ್‌ಶಿಸ್ತೀಯ ಅಧ್ಯಯನ ನಡೆಸಲಾಗಿದೆ.

ಆಧುನಿಕ ಕನ್ನಡ ಕಾದಂಬರಿಗಳ ಕುರಿತು ಅವರವರ ಆಸಕ್ತಿ, ಅಭಿರುಚಿ, ಕಾಣ್ಕೆಗಳಿಗೆ ಅನುಸಾರವಾಗಿ ಸಾಮಾಜಿಕ ಸಾಂಸ್ಕೃತಿಕ ನೆಲೆಗಳಲ್ಲಿ ಹಲವಾರು ವಿಮರ್ಶೆ, ಅಧ್ಯಯನಗಳು ನಡೆದಿವೆ. ಸಾಹಿತ್ಯ ಮತ್ತು ಮನೋವಿಜ್ಞಾನದ ಅಂತರ್‌ಸಂಬಂಧದ ಬಗೆಗೆ ಅನೇಕರು ಚರ್ಚಿಸಿದ್ದಾರೆ. ಆದರೆ ಮನೋವಿಜ್ಞಾನದ ನೆಲೆಯಲ್ಲಿ ಈವರೆಗೆ ಸಮಗ್ರರೂಪದ ಅಧ್ಯಯನಗಳು ನಡೆದಿಲ್ಲ. ಮನೋವಿಜ್ಞಾನ ಮತ್ತು ಸಾಹಿತ್ಯದ ನಡುವಿನ ಸಂಬಂಧ ನಿಕಟವಾಗಿ ಬೆಳೆದಿದ್ದರೂ, ವಿಮರ್ಶಕರು, ಬರಹಗಾರರು, ಮನೋವಿಜ್ಞಾನಿಗಳು ತಮ್ಮ ಆಸಕ್ತಿಯಿಂದ ಮನೋವಿಜ್ಞಾನವನ್ನು ಸಾಹಿತ್ಯದ ವಿಶ್ಲೇಷಣೆಗೆ ಬಳಸಿಕೊಂಡಿರುವ ನಿದರ್ಶನಗಳಿದ್ದರೂ, ಅದೊಂದು ವಿಶಿಷ್ಟ ಜ್ಞಾನಶಿಸ್ತಾಗಿ ರೂಪುಗೊಂಡಿಲ್ಲ. ಹಾಗಾಗಿ ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದ ಕಾದಂಬರಿಗಳಲ್ಲಿ ಅಧ್ಯಯನಕ್ಕೆ ಆಯ್ದುಕೊಂಡ ಪರಿಕಲ್ಪನೆಗಳಿಗೆ ಹೊಂದುವ ಕೆಲವು ಕಾದಂಬರಿಗಳನ್ನು ಪ್ರಾತಿನಿಧಿಕವಾಗಿ ಮುಂದಿಟ್ಟುಕೊಂಡು ಅವುಗಳಲ್ಲಿ ಬರುವ ಮನೋವಿಜ್ಞಾನದ ಪರಿಕಲ್ಪನೆಗಳು ಯಾವುವು ಹಾಗೂ ಅವುಗಳು ಹೇಗೆ ಕಾದಂಬರಿಗಳಲ್ಲಿ ವ್ಯಕ್ತವಾಗಿವೆ ಎಂಬುದನ್ನು ಈ ಅಧ್ಯಯನದಲ್ಲಿ ಗುರುತಿಸಲಾಗಿದೆ. ಆ ಮೂಲಕ ಕಾದಂಬರಿ ಮತ್ತು ಮನೋವಿಜ್ಞಾನದ ನಡುವಿನ ಅಂತರ್ಗತ ಸಂಬಂಧವನ್ನು ವಿಶ್ಲೇಷಿಸಲಾಗಿದೆ.

ಈ ಅಧ್ಯಯನದಲ್ಲಿ ಆಧುನಿಕ ಕನ್ನಡ ಕಾದಂಬರಿಗಳಲ್ಲಿ ಕಾಣಸಿಗುವ ಮನುಷ್ಯ ಸಂಬಂಧಗಳು, ಅತ್ಯಂತ ಸೂಕ್ಷ್ಮ ಹಾಗೂ ಸಂಕೀರ್ಣವಾದ ಅಂತರಂಗದ ಸ್ವರೂಪ ಮತ್ತು ಸಾಮಾಜಿಕ ಅಂಶಗಳಿಂದ ಪ್ರಭಾವಿತವಾಗಿ ಪರಿಸ್ಥಿತಿಗೆ ತಕ್ಕಂತೆ ರೂಪುಗೊಳ್ಳುವ ಮಾನವ ಸಂಬಂಧ ಹಾಗೂ ವ್ಯಕ್ತಿತ್ವಗಳನ್ನು ಮನೋವಿಜ್ಞಾನದ ನೆಲೆಯಲ್ಲಿ ಅರ್ಥೈಸಿಕೊಳ್ಳಲು ಪ್ರಯತ್ನಿಸಲಾಗಿದೆ.

ಕಾದಂಬರಿಗಳಲ್ಲಿ ಚಿತ್ರಿತವಾದ ಮನೋದೈಹಿಕ ವ್ಯಾಪಾರವಾದ ಲೈಂಗಿಕ ಸಂಬಂಧದ ಮೂಲಕ ವ್ಯಕ್ತಿಯ ಅಂತರಂಗ ಬಹಿರಂಗಗಳೆರಡನ್ನೂ ಪದರು ಪದರಾಗಿ ವಿಶ್ಲೇಷಿಸಲು ಸಾಧ್ಯ. ಪಾತ್ರ/ವ್ಯಕ್ತಿಯ ಮಾನಸಿಕ ತೊಳಲಾಟಗಳಿಂದ ರೂಪುಗೊಂಡ ಬಹಿರಂಗ ನಡೆವಳಿಕೆಗಳು, ಮಾನವ

ಸ್ವಭಾವವನ್ನು ವಿಕಸಿಸುವ ಅಥವಾ ಮುದುಡಿಸುವ ಅನೇಕಾನೇಕ ಆಂತರಿಕ ಹಾಗೂ ಬಾಹ್ಯ ಅಂಶಗಳನ್ನು ಗುರುತಿಸಲಾಗಿದೆ.

ಕಾದಂಬರಿಗಳಲ್ಲಿ ಕಂಡುಬರುವ ಮನೋವಿಜ್ಞಾನದ ಮಾದರಿಗಳನ್ನು ಹುಡುಕುತ್ತ, ಪಾತ್ರಗಳ ವ್ಯಕ್ತಿತ್ವ ಪರಿಶೀಲನೆಯೊಂದಿಗೆ, ನಿಯಂತ್ರಿತ ಪರಿಸರ ವ್ಯಕ್ತಿಯ ವರ್ತನೆಯ ಮೇಲೆ ಬೀರುವ ಪ್ರಭಾವ ಹಾಗೂ ಅದು ವ್ಯಕ್ತಿತ್ವವನ್ನು ಹೇಗೆ ರೂಪಿಸುತ್ತದೆ ಎಂಬುದನ್ನು ವಿಶ್ಲೇಷಿಸಲಾಗಿದೆ.

ಸಾಹಿತ್ಯವನ್ನು ನಿಜಜೀವನದ ಬಿಂಬವೆಂದು ಭಾವಿಸುವುದಾದರೆ, ಅಲ್ಲಿನ ಮನೋವ್ಯಾಪಾರದ ಸ್ವರೂಪವೇನು, ಒಬ್ಬ ಸಂವೇದನಾಶೀಲ ಲೇಖಕ ತನ್ನ ಪರಿಸರದ ಮನೋಲೋಕವನ್ನು ಹೇಗೆ ಗ್ರಹಿಸುತ್ತಾನೆ, ಲೇಖಕನ ಗ್ರಹಿಕೆಯ ಅಭಿವ್ಯಕ್ತಿಕ್ರಮ ವಾಸ್ತವವನ್ನು ಎಷ್ಟರಮಟ್ಟಿಗೆ ಪ್ರತಿನಿಧೀಕರಿಸುತ್ತದೆ, ಕಾದಂಬರಿಯಂತಹ ಒಂದು ವಿಸ್ತಾರ ಚೌಕಟ್ಟಿನ ಭೂಮಿಕೆ ಪಾತ್ರಗಳ ಮಾನಸಿಕ ಅವಸ್ಥೆಯ ಕಾರಣ ಮತ್ತು ಪರಿಣಾಮಗಳನ್ನು ಹೇಗೆ ಚಿತ್ರಿಸುತ್ತದೆ, ಲೇಖಕನ ಗ್ರಹಿಕೆ ಮತ್ತು ಅಭಿವ್ಯಕ್ತಿಗಳು ಪ್ರತಿಪಾದಿಸುವ ಮೌಲ್ಯಗಳ ಸ್ವರೂಪವೇನು ಹಾಗೂ ಕಾದಂಬರಿಯ ಪಾತ್ರಗಳ ವರ್ತನೆಗೆ ಕಾರಣಗಳನ್ನು ಹುಡುಕಿ ಯಾಕಾಗಿ ಹಾಗೆ ವರ್ತಿಸುತ್ತಾರೆ ಎಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸಲಾಗಿದೆ.

ಕಾದಂಬರಿಗಳ ಮನೋವೈಜ್ಞಾನಿಕ ಅಧ್ಯಯನದ ಮೂಲಕ ಲೇಖಕನ ಮಾನಸಿಕ ಸ್ಥಿತಿ, ಕಾದಂಬರಿಯಲ್ಲಿ ವ್ಯಕ್ತವಾದ ಸಮಾಜ, ಆ ಕಾದಂಬರಿ ರಚನೆಗೆ ಪ್ರೇರಕವಾದ ಅಂಶಗಳು ಹಾಗೂ ರಚನೆಯ ಬೆಳವಣಿಗೆಯಲ್ಲಿ ನಡೆದ ಮಾನಸಿಕ ಪ್ರಕ್ರಿಯೆಗಳನ್ನು ಅರಿತುಕೊಳ್ಳಲು ಪ್ರಯತ್ನಿಸಲಾಗಿದೆ.

ಕಾದಂಬರಿ ಪ್ರಕಾರದಲ್ಲಿ ಮನೋವಿಜ್ಞಾನವು ಕ್ರಿಯಾಶೀಲವಾಗುವ ಬಗೆಯನ್ನು, ಕಾದಂಬರಿಗಳಲ್ಲಿ ಕಂಡುಬರುವ ಮನೋವಿಜ್ಞಾನದ ಒಳನೋಟಗಳನ್ನು ಗುರುತಿಸಿ, ಸೃಜನಶೀಲ ಸಾಹಿತ್ಯವಾದ ಕಾದಂಬರಿಯಲ್ಲಿ ಮನೋವಿಜ್ಞಾನ ನೆಲೆಗೊಂಡಿರುವ ಬಗೆಯನ್ನು ಶೋಧಿಸಿ, ಅರ್ಥೈಸುವ ಪ್ರಧಾನ ಉದ್ದೇಶದಿಂದ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ವ್ಯಾಪ್ತಿ:

ಇಲ್ಲಿ ಸಿಗ್ಮಂಡ್ ಫ್ರಾಯ್ಡ್, ಸಿ. ಜಿ. ಯೂಂಗ್. ಆಲ್‌ಫ್ರೆಡ್ ಆಡ್ಲರ್ ಮೊದಲಾದ ಮನೋವಿಜ್ಞಾನಿಗಳ ಸೈದ್ಧಾಂತಿಕ ವಿಚಾರಗಳ ಹಿನ್ನೆಲೆಯಲ್ಲಿ ಕಾದಂಬರಿ ಮತ್ತು ಮನೋವಿಜ್ಞಾನದ ಅಂತರ್ಗತ ಸಂಬಂಧದ ಬಗೆಗೆ ಅಧ್ಯಯನ ನಡೆಸಲಾಗಿದೆ. ವ್ಯಕ್ತಿ–ಸಮೂಹಗಳ ವರ್ತನೆಗೆ ಸಂಬಂಧಿಸಿ ಮನೋವೈಜ್ಞಾನಿಕ ಸಿದ್ಧಾಂತಗಳ ಬೆಳಕಿನಲ್ಲಿ ಕಾದಂಬರಿಗಳಲ್ಲಿನ ಪಾತ್ರಗಳ ವರ್ತನೆ ಹಾಗೂ ಜೀವನ ವ್ಯವಹಾರಗಳನ್ನು ಪರಿಶೀಲಿಸಲಾಗಿದೆ.

ಆಧುನಿಕ ಕನ್ನಡ ಕಾದಂಬರಿ ಸಾಹಿತ್ಯದ ಹರಹು ಬಹಳ ವಿಸ್ತಾರವಾದುದು. ಕನ್ನಡದ ಎಲ್ಲ ಕಾದಂಬರಿಗಳನ್ನು ಮುಂದಿಟ್ಟುಕೊಂಡು ಅವುಗಳಲ್ಲಿ ಕಂಡು ಬರುವ ಎಲ್ಲ ಮನೋವಿಜ್ಞಾನದ

ಪರಿಕಲ್ಪನೆಗಳನ್ನು ವಿವರವಾಗಿ ವಿಶ್ಲೇಷಿಸುವುದು ಕಾಲದ ಪರಿಮಿತಿಯ ದೃಷ್ಟಿಯಿಂದ ಅಪೇಕ್ಷಣೀಯವಲ್ಲದಿರುವುದರಿಂದ ಹಾಗೂ ಪರಿಕಲ್ಪನೆಗಳು ಪುನರಾವರ್ತನೆಯಾಗಬಾರದೆಂಬ ಉದ್ದೇಶದಿಂದ ಪ್ರಾತಿನಿಧಿಕ ಕಾದಂಬರಿಗಳಷ್ಟನ್ನೇ ವಿಶೇಷವಾಗಿ ಗಮನಿಸಲಾಗಿದೆ. ಇಲ್ಲಿ ಪ್ರಾತಿನಿಧಿಕ ಕಾದಂಬರಿಗಳು ಅಂದರೆ ಮನೋವೈಜ್ಞಾನಿಕ ದೃಷ್ಟಿಯಿಂದ ಅಲ್ಲ. ಹಾಗೆ ನೋಡಿದರೆ ಎಲ್ಲಾ ಕಾದಂಬರಿಗಳೂ ಮನೋವೈಜ್ಞಾನಿಕ ಕಾದಂಬರಿಗಳೇ ಆಗಿವೆ ಎನ್ನಬಹುದು. ಏಕೆಂದರೆ ಎಲ್ಲಾ ಕಾದಂಬರಿಗಳಲ್ಲಿಯೂ ಮಾನವ ಸ್ವಭಾವದ ವಿವರಗಳು ಇದ್ದೇ ಇರುತ್ತವೆ. ಇಲ್ಲಿ ಅಧ್ಯಯನಕ್ಕೆ ಆಯ್ದುಕೊಂಡ ಸಿದ್ಧಾಂತಗಳಿಗೆ ಅನುಗುಣವಾಗಿ ಪ್ರಾತಿನಿಧಿಕ ಎನ್ನುವಂತಹ ಕಾದಂಬರಿಗಳು ಅಂದರೆ ಮನೋವಿಜ್ಞಾನವನ್ನು ಪ್ರಮುಖ ವಸ್ತುವನ್ನಾಗಿಟ್ಟುಕೊಂಡ ಹಾಗೂ ಮನೋವಿಜ್ಞಾನದ ಪರಿಕಲ್ಪನೆಗಳು ಮುಖ್ಯವಾಗಿ ಕಂಡುಬರುವ ಕಾದಂಬರಿಗಳನ್ನು ಮಾತ್ರ ಆಯ್ದುಕೊಳ್ಳಲಾಗಿದೆ. ಹೀಗೆ ಮನೋವೈಜ್ಞಾನಿಕವಾಗಿ ವಿಶ್ಲೇಷಿಸಬಹುದಾದ ಕೆಲವು ಪ್ರಾತಿನಿಧಿಕ ಕಾದಂಬರಿಗಳ ಮೇಲೆ ಲಕ್ಷ್ಯವನ್ನು ಕೇಂದ್ರೀಕರಿಸುವುದರ ಮೂಲಕ ಕಾದಂಬರಿಗಳಲ್ಲಿ ಕಂಡುಬರುವ ಮನೋವೈಜ್ಞಾನಿಕ ಅಂಶಗಳನ್ನು ಅಧ್ಯಯನಕ್ಕೆ ಒಳಪಡಿಸಿಕೊಳ್ಳುವ ಮೂಲಕ ಕೃತಿಕಾರರ ಮನೋವ್ಯಾಪಾರದತ್ತ ಗಮನವನ್ನು ನೀಡಲಾಗಿದೆ.

ಅಧ್ಯಯನದ ವಿಷಯದ ವ್ಯಾಪ್ತಿ ವಿಶಾಲವಾಗಿರುವುದರಿಂದ ಅಧ್ಯಯನದ ಶಿಸ್ತಿಗೆ ಅನುಗುಣವಾಗಿ ಪರಿಮಿತವಾದ ವ್ಯಾಪ್ತಿಯನ್ನು ಹಾಕಿಕೊಳ್ಳಲಾಗಿದೆ; ಹಾಗೂ ಅಧ್ಯಯನಕ್ಕೆ ಇರುವ ಮಿತಿಗಳನ್ನು ಸೂಚಿಸಲಾಗಿದೆ. ಕಾದಂಬರಿ ಸಾಹಿತ್ಯ ಸಂಖ್ಯಾ ದೃಷ್ಟಿಯಿಂದ ಬಹಳ ವಿಶಾಲವಾದ ಆಯಾಮವನ್ನು ಪಡೆದಿರುವುದರಿಂದ ಎಲ್ಲಾ ಕಾದಂಬರಿಗಳ ಓದು ಹಾಗೂ ಅದನ್ನು ಬಳಸಿಕೊಳ್ಳುವುದು ಈ ಅಧ್ಯಯನದ ಸಂದರ್ಭದಲ್ಲಿ ಅಸಾಧ್ಯ. ಆದುದರಿಂದ ಮನೋವಿಜ್ಞಾನದ ಪರಿಕಲ್ಪನೆಗಳನ್ನು ಅಧ್ಯಯನದ ಚೌಕಟ್ಟಿನೊಳಗೆ ವಿಶ್ಲೇಷಿಸುವ ಉದ್ದೇಶದಿಂದ ಪರಿಕಲ್ಪನೆಗೆ ಹೊಂದುವ ಪ್ರಾತಿನಿಧಿಕ ಕಾದಂಬರಿಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಪ್ರಾತಿನಿಧಿಕ ಎಂದಾಗ ಇಲ್ಲಿ ಮುಖ್ಯ–ಅಮುಖ್ಯ ಎಂಬ ಅರ್ಥವಲ್ಲ. ಬದಲಾಗಿ ಹೆಚ್ಚು ಚರ್ಚೆಗೆ ಒಳಗಾದ, ವಿಮರ್ಶೆಗೆ ಒಳಗಾದ ಮನೋವಿಜ್ಞಾನದ ಪರಿಕಲ್ಪನೆಗಳು ಹೆಚ್ಚಾಗಿ ಕಂಡುಬರುವ ಕಾದಂಬರಿಗಳನ್ನು ಮಾತ್ರ ಈ ಅಧ್ಯಯನದ ವ್ಯಾಪ್ತಿಗೆ ಬಳಸಿಕೊಳ್ಳಲಾಗಿದೆ.

ಅಧ್ಯಯನದ ವೈಧಾನಿಕತೆ:

ಈ ಅಧ್ಯಯನದಲ್ಲಿ ಮನೋವಿಜ್ಞಾನದ ಚಿಂತನೆಗಳು ಹಾಗೂ ಸಿದ್ಧಾಂತಗಳನ್ನು ಕಾದಂಬರಿಗಳಿಗೆ ಅನ್ವಯಿಸುವ ಮೂಲಕ ಅಂತರ್‌ಶಿಸ್ತೀಯ ನೆಲೆಯಲ್ಲಿ ಅಧ್ಯಯನ ನಡೆಸಲಾಗಿದೆ. ಆಧುನಿಕ ಕನ್ನಡ ಕಾದಂಬರಿಗಳಲ್ಲಿ ಕಂಡುಬರುವ ಘಟನೆಗಳು ಹಾಗೂ ಪಾತ್ರಗಳ ವರ್ತನೆಗಳನ್ನು ಮನೋವಿಜ್ಞಾನದ ಸಿದ್ಧಾಂತಗಳನ್ನು ಅನ್ವಯಿಸುವುದರ ಮೂಲಕ ವಿಶ್ಲೇಷಿಸಲಾಗಿದೆ. ಈ ಮೂಲಕ

ಸಾಹಿತ್ಯ ಮತ್ತು ಮನೋವಿಜ್ಞಾನದ ಸಂಬಂಧಗಳನ್ನು, ಸಾಹಿತ್ಯಸೃಷ್ಟಿಯ ಪ್ರಕ್ರಿಯೆಯನ್ನು ಸ್ಪಷ್ಟಪಡಿಸಿಕೊಳ್ಳಲು ಪ್ರಯತ್ನಿಸಲಾಗಿದೆ.

ಈ ಅಧ್ಯಯನವು ಪರಿಕಲ್ಪನಾತ್ಮಕ ಅಧ್ಯಯನವಾಗಿರುವುದರಿಂದ ಯಾವುದೇ ಕಾಲಘಟ್ಟ, ಪಂಥ ಅಥವಾ ಕಾದಂಬರಿಕಾರರನ್ನು ಪ್ರಧಾನವೆಂದು ಪರಿಗಣಿಸದೆ ಒಂದು ತಾತ್ತ್ವಿಕ ಚೌಕಟ್ಟಿನೊಳಗಡೆ ಮನೋವಿಜ್ಞಾನದ ಪರಿಕಲ್ಪನೆಗಳನ್ನು ವಿಶ್ಲೇಷಿಸಲಾಗಿದ್ದು, ವಿಶ್ಲೇಷಣಾತ್ಮಕ ವಿಧಾನವನ್ನು ಅಳವಡಿಸಿಕೊಳ್ಳಲಾಗಿದೆ.

ಮನೋವಿಜ್ಞಾನದ ಸಿದ್ಧಾಂತ ಹಾಗೂ ಮಾದರಿಗಳು ಭಾರತೀಯವಾದುವಲ್ಲ. ಈ ಪಾಶ್ಚಿಮಾತ್ಯ ಮಾದರಿಗಳನ್ನು ಈ ನೆಲದ ಕಾದಂಬರಿಗಳ ಅಧ್ಯಯನಕ್ಕೆ ಬಳಸಿಕೊಳ್ಳುವುದು ಎಷ್ಟು ಸೂಕ್ತವಾದುದು ಎಂಬ ಪ್ರಶ್ನೆಯೂ ಇಲ್ಲಿದೆ. ಆದರೆ ಮೂಲಭೂತ ಅಗತ್ಯಗಳ ಪ್ರೇರಣೆಗಳ ಕ್ರಿಯಾಶೀಲತೆಯಲ್ಲಿ ಮಾನವರೆಲ್ಲಾ ಒಂದೇ. ಆದ್ದರಿಂದ ಮಾನದಂಡ ಭಿನ್ನವಾಗಿರಬೇಕಾಗಿಲ್ಲ. ಆದರೆ ನಮ್ಮ ಸಾಮಾಜಿಕ ಹಾಗೂ ವೈಯಕ್ತಿಕ ವರ್ತನೆಗಳ ಅಳತೆಯಲ್ಲಿ ಪಾಶ್ಚಿಮಾತ್ಯ ಮನೋವೈಜ್ಞಾನಿಕ ಮಾನದಂಡಗಳನ್ನು ಸೂಕ್ತ ಮಾರ್ಪಾಡುಗಳಿಂದ ಬಳಸಬೇಕಾಗುತ್ತದೆ.

ಇದುವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆಯನ್ನು ನಡೆಸಿದಾಗ ಕಂಡು ಬಂದಂತಹ ವಿವರಗಳು ಈ ಕೆಳಗಿನಂತಿವೆ:

೧. ಸಾಹಿತ್ಯ ಮತ್ತು ಮನೋವಿಜ್ಞಾನದ ನಡುವೆ ಅಂತರ್ಗತ ಸಂಬಂಧಗಳಿದ್ದರೂ ಅವು ಕನ್ನಡದ ಸಂದರ್ಭದಲ್ಲಿ ಪ್ರಮುಖ ವಿಶ್ಲೇಷಣೆಗೆ ಒಳಪಟ್ಟಿಲ್ಲ.

೨. ಮನೋವಿಜ್ಞಾನವನ್ನು ಆಧರಿಸಿ ಕನ್ನಡ ಸಾಹಿತ್ಯದಲ್ಲಿ ನಡೆದ ಅಂತರ್‌ಶಿಸ್ತೀಯ ಅಧ್ಯಯನಗಳು ಕೇವಲ ಬೆರಳೆಣಿಕೆಯಷ್ಟು ಮಾತ್ರ.

೩. ಕೆಲವು ಬಿಡಿ ಕೃತಿಗಳಿಗೆ ಅಥವಾ ಕೆಲವು ಲೇಖಕರ ಸಾಹಿತ್ಯಕ್ಕೆ ಮನೋವಿಜ್ಞಾನದ ಸಂಬಂಧವನ್ನು ಕಲ್ಪಿಸಿ ಚರ್ಚಿಸಿರುವ ಉದಾಹರಣೆಗಳನ್ನು ಮಾತ್ರ ಗುರುತಿಸಲು ಸಾಧ್ಯ. ಉದಾ: ಶಿವರಾಮ ಕಾರಂತ, ಶಾಂತಿನಾಥ ದೇಸಾಯಿ, ಯಶವಂತ ಚಿತ್ತಾಲ, ತ್ರಿವೇಣಿ, ಕುವೆಂಪು, ಎಸ್. ಎಲ್. ಭೈರಪ್ಪ ಅವರ ಕೆಲವು ಕೃತಿಗಳ ಅಧ್ಯಯನ

೪. ಕೆಲವು ಕೃತಿಗಳ ಸನ್ನಿವೇಶ/ಸಂದರ್ಭ/ಪಾತ್ರಗಳನ್ನು ಮನೋವಿಜ್ಞಾನದ ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ವಿವರಣೆ/ವಿಶ್ಲೇಷಣೆಗೊಳಪಡಿಸಿರುವುದು ಅಥವಾ ಕೆಲವು ಘಟನೆ/ಪಾತ್ರಗಳನ್ನು ಮನೋವಿಜ್ಞಾನದ ಮಾದರಿಯ ಹಿನ್ನೆಲೆಯಲ್ಲಿ ಗುರುತಿಸಿದ್ದಾರೆ.

೫. ಮನೋವೈಜ್ಞಾನಿಕ/ಮನಃಶಾಸ್ತ್ರೀಯ/ಮನೋವಿಶ್ಲೇಷಣಾತ್ಮಕ ಅಧ್ಯಯನ/ವಿಮರ್ಶೆ ಎಂಬ ಶೀರ್ಷಿಕೆಗಳಿದ್ದರೂ, ಅಂತಹ ಲೇಖನಗಳಲ್ಲಿ ಕೇವಲ ಮನಸ್ಸಿನ ಜಂಜಾಟ, ನಗು, ಅಳು ಮೊದಲಾದ ಸಂವೇದನೆಗಳು ಕೃತಿಗಳಲ್ಲಿ ಹೇಗೆ ಚಿತ್ರಿತವಾಗಿವೆ ಎಂಬ ವಿವರಗಳು ದೊರಕುವುದೇ ವಿನಾ

ಮನೋವಿಜ್ಞಾನದ ಪರಿಕಲ್ಪನೆಗಳನ್ನು ಆಧರಿಸಿ ವಿಶ್ಲೇಷಣೆ ನಡೆಸಿರುವ ಉದಾಹರಣೆಗಳು ತುಂಬಾ ಕಡಿಮೆ.

ಹೀಗೆ ಆಧುನಿಕ ಕನ್ನಡ ಕಾದಂಬರಿಗಳ ಮನೋವೈಜ್ಞಾನಿಕ ಅಧ್ಯಯನಗಳು ಸಮಗ್ರವಾಗಿ ಇದುವರೆಗೆ ನಡೆದಿಲ್ಲ. ಪ್ರಸ್ತುತ ಅಧ್ಯಯನದಲ್ಲಿ ಆಧುನಿಕ ಕನ್ನಡ ಕಾದಂಬರಿಗಳಲ್ಲಿ ಕಂಡುಬರುವ ಮನೋವಿಜ್ಞಾನದ ಪರಿಕಲ್ಪನೆಗಳನ್ನು ಅಧ್ಯಯನ ಮಾಡಲಾಗಿದೆ. ಈ ಮೂಲಕ ಕನ್ನಡ ಕಾದಂಬರಿಗಳು ಮತ್ತು ಮನೋವಿಜ್ಞಾನದ ನಡುವಿನ ಅಂತರ್ಗತ ಸಂಬಂಧವನ್ನು ವಿಶ್ಲೇಷಣೆಗೆ ಒಳಪಡಿಸಿ ಕಾದಂಬರಿ ಪ್ರಕಾರದಲ್ಲಿ ಮನೋವಿಜ್ಞಾನವು ಕ್ರಿಯಾಶೀಲವಾಗುವ ಬಗೆಯನ್ನು ಗುರುತಿಸಲಾಗಿದೆ.

ಅಧ್ಯಯನದ ಪ್ರಸ್ತುತತೆ:

ಜಾಗೃತ ಜೀವನದ ಅನುಭವ, ಆವೇಶ, ಜೀವನಪಾತಗಳು ಸಂವೇದನಾತ್ಮಕವಾಗಿ ವ್ಯವಹರಿಸುವ ಸಂದರ್ಭದಲ್ಲಿ ದರ್ಶನದ ಆವರಣವನ್ನು ಕಲ್ಪಿಸಿಕೊಂಡು ಸಾಹಿತ್ಯ ಸೃಷ್ಟಿಯಾಗುತ್ತದೆ. ಲೇಖಕನ ಸಾಮಾಜಿಕ–ಸಾಂಸ್ಕೃತಿಕ ಪ್ರಭಾವಗಳಿಂದ ಕೃತಿ ರಚನೆಯಾಗುತ್ತದೆ. ಆತನ ಮನೋರಚನೆಯಲ್ಲಿನ ವರ್ತನೆ, ಪ್ರಚೋದನೆ, ಪ್ರತಿಕ್ರಿಯೆ, ಆಸಕ್ತಿ, ಪ್ರೇರಣೆ, ಮನೋಭಾವಗಳು ಕೃತಿಯಲ್ಲಿ ಅನಾವರಣಗೊಳ್ಳುತ್ತವೆ.

ಸಾಹಿತ್ಯಕ್ಕೂ ಮನೋವಿಜ್ಞಾನಕ್ಕೂ ನಿಕಟವಾದ ಸಂಬಂಧವಿದೆ. ಮನೋವಿಜ್ಞಾನದ ಹಿನ್ನೆಲೆಯಲ್ಲಿ ಕನ್ನಡದಲ್ಲಿ ಅನೇಕ ಮಹತ್ವದ ಕಾದಂಬರಿಗಳು ರಚನೆಯಾಗಿವೆ. ಆಧುನಿಕ ಕನ್ನಡ ಕಾದಂಬರಿಗಳನ್ನು ಕುರಿತ ಅನೇಕ ಮೌಲ್ಯಯುತ ಅಧ್ಯಯನಗಳು ನಡೆದಿವೆ. ಒಬ್ಬ ಲೇಖಕ/ಒಂದು ಕೃತಿಯನ್ನು ಕೇಂದ್ರೀಕರಿಸಿಯೂ ಮನೋವೈಜ್ಞಾನಿಕ ಅಧ್ಯಯನಗಳು ನಡೆದಿವೆ. ಆದರೆ ಯಾವುದೇ ಕಾಲಘಟ್ಟ ಹಾಗೂ ಕೃತಿಕಾರರನ್ನು ಆಧಾರವಾಗಿಟ್ಟುಕೊಳ್ಳದೆ ಪ್ರಾತಿನಿಧಿಕ ಕಾದಂಬರಿಗಳನ್ನು ಆಯ್ದುಕೊಳ್ಳುವ ಮೂಲಕ ಮನೋವೈಜ್ಞಾನಿಕ ಅಧ್ಯಯನಗಳು ನಡೆದಿಲ್ಲ.

ಮನೋವಿಜ್ಞಾನ ಮತ್ತು ಸಾಹಿತ್ಯದ ನಡುವಿನ ಸಂಬಂಧ ನಿಕಟವಾಗಿ ಬೆಳೆದಿದ್ದರೂ ಅದೊಂದು ಜ್ಞಾನಶಿಸ್ತಾಗಿ ರೂಪುಗೊಂಡಿಲ್ಲ. ವಿಮರ್ಶಕರು, ಬರಹಗಾರರು, ಮನೋವಿಜ್ಞಾನಿಗಳು ಅವರವರ ಆಸಕ್ತಿಗಳ ಹಿನ್ನೆಲೆಯಲ್ಲಿ ಮನೋವಿಜ್ಞಾನವನ್ನು ಸಾಹಿತ್ಯದ ವಿಶ್ಲೇಷಣೆಗೆ ಬಳಸಿಕೊಂಡಿರುವ ನಿದರ್ಶನಗಳಿದ್ದರೂ ಅದು ಒಂದು ಸೈದ್ಧಾಂತಿಕ ನೆಲೆಯಲ್ಲಿ ಬೆಳೆದು ಬಂದಿಲ್ಲ. ಕನ್ನಡ ಸಾಹಿತ್ಯದಲ್ಲಿ ಇದ್ದಿರಬಹುದಾದ ಮನೋವೈಜ್ಞಾನಿಕ ಕಾದಂಬರಿಗಳ ಅಧ್ಯಯನವು ಸಮಗ್ರವಾಗಿ ನಡೆದಿಲ್ಲ. ಆದುದರಿಂದ ಈ ಅಧ್ಯಯನವು ಹೆಚ್ಚು ಮಹತ್ವಪೂರ್ಣವಾಗಿದೆ.

ಈ ಕೆಳಗಿನ ಕಾರಣಗಳು ಕಾದಂಬರಿಗಳ ಮನೋವೈಜ್ಞಾನಿಕ ಅಧ್ಯಯನವನ್ನು ಸಮರ್ಥಿಸುತ್ತವೆ:

- ಕೃತಿ ನಿರ್ಮಾಣದಲ್ಲಿ ಲೇಖಕನ ಜಾಗೃತಪ್ರಜ್ಞೆಗಿಂತ ಸುಪ್ತಪ್ರಜ್ಞೆಯ ಪ್ರಭಾವ ಹೆಚ್ಚಾಗಿರುತ್ತದೆ.
- ಲೇಖಕ ಹಾಗೂ ಕೃತಿಗೆ ಸಂಬಂಧವಿದೆ.

- ಸಾಹಿತ್ಯವೂ ಮಾನವ ಚಟುವಟಿಕೆಯ ಒಂದು ಭಾಗ.
- ಎಲ್ಲೆಲ್ಲ ಮನುಷ್ಯನ ವರ್ತನೆ ಪ್ರಮುಖವಾಗಿರುವುದೋ ಅಲ್ಲಿ ಮನೋವೈಜ್ಞಾನಿಕ ಅಧ್ಯಯನದ ಅಗತ್ಯವಿದೆ.

ಸಾಹಿತ್ಯಾಭಿವ್ಯಕ್ತಿಯು ಮಾನಸಿಕ ವ್ಯಾಪಾರವಾದುದರಿಂದ ಮನೋವೈಜ್ಞಾನಿಕವಾಗಿಯೂ ವಿಶ್ಲೇಷಿಸಲು ಸಾಧ್ಯ. ಕೃತಿ ನಿರ್ಮಾಣಕ್ಕೆ ಕಾರಣ, ಕವಿಯ ವ್ಯಕ್ತಿತ್ವ ಪರಿಶೀಲನೆ, ಪಾತ್ರದ ಸ್ವಭಾವ, ಸನ್ನಿವೇಶ, ಸಂದರ್ಭದ ಔಚಿತ್ಯವನ್ನು ಪರಿಶೀಲಿಸಬಹುದಾಗಿದೆ. ಆದರೆ ಮನೋವಿಜ್ಞಾನದ ತತ್ತ್ವಗಳನ್ನು ಅನ್ವಯಿಸುವಾಗ ವಿವೇಚನೆ ಅಗತ್ಯ. ಕವಿಕಾವ್ಯ ರಹಸ್ಯದ ಪರಿಶೀಲನೆಯಲ್ಲಿ ಮನೋವಿಜ್ಞಾನವನ್ನು ಒಂದು ಉಪಕರಣವನ್ನಾಗಿ ಬಳಸಬಹುದಾಗಿದೆ. ಮನೋವೈಜ್ಞಾನಿಕ ಅಧ್ಯಯನದ ಮೂಲಕ ಸಾಹಿತ್ಯ/ಸಾಹಿತ್ಯಕ್ಷೇತ್ರದ ಅಧ್ಯಯನ ಸಾಧ್ಯತೆಗಳು ವಿಸ್ತರಿಸಿ, ಸಾಹಿತ್ಯಲೋಕಕ್ಕೆ ಅಪರೂಪದ ಮಾಹಿತಿಗಳು ಲಭಿಸಬಹುದು. ಸಾಹಿತ್ಯಕ್ಷೇತ್ರದಲ್ಲಿ ಕ್ರಿಯಾಶೀಲವಾಗಿರುವ ಮನಸ್ಸು ಹಾಗೂ ಮಾನವನ ವರ್ತನೆಗಳ ಸ್ವರೂಪವನ್ನು ಅಭ್ಯಸಿಸಬಹುದು.

ಸಾಹಿತ್ಯ ಒಂದರ್ಥದಲ್ಲಿ ಮನುಷ್ಯನ ವರ್ತನೆಗಳ ನಿರೂಪಣೆಯಾಗಿರುತ್ತದೆ. ಆದ್ದರಿಂದ ಸಾಹಿತ್ಯದ ವೈಜ್ಞಾನಿಕ ಅಧ್ಯಯನವು ಮನೋವಿಜ್ಞಾನದ ವ್ಯಾಪ್ತಿಗೆ ಒಳಪಟ್ಟಿದೆ. ಸಾಹಿತ್ಯದ ಅಧ್ಯಯನವು ಮನೋವಿಜ್ಞಾನದ ವಿಚಾರಗಳನ್ನು ಒಳಗೊಂಡಾಗ ಅದಕ್ಕೊಂದು ಹೊಸ ನೋಟ, ಹೊಸ ಅಯಾಮ ದೊರಕುತ್ತದೆ. ಈ ಅಧ್ಯಯನದ ಮೂಲಕ ಸಾಹಿತ್ಯದಲ್ಲಿ ಮನೋವಿಜ್ಞಾನದಂತಹ ಅನ್ಯ ಜ್ಞಾನಶಿಸ್ತಿನ ಅನನ್ಯತೆಯ ಅಗತ್ಯದ ಅರಿವಿನೊಂದಿಗೆ, ಸಾಹಿತ್ಯಕ್ಷೇತ್ರದ ಅಧ್ಯಯನ ಸಾಧ್ಯತೆ ವಿಸ್ತಾರಗೊಂಡು, ಸಾಹಿತ್ಯಲೋಕಕ್ಕೆ ಅಪರೂಪದ ಜ್ಞಾನ ಲಭ್ಯವಾಗುವುದು. ಅದರಲ್ಲೂ ಕಾದಂಬರಿಯು ಮಾನವನ ಬದುಕಿನ ಅತ್ಯಂತ ಆಪ್ತವಾದ ಎಲ್ಲಾ ಆಯಾಮಗಳನ್ನು ಒಳಗೊಂಡಿರುವ ಅಭಿವ್ಯಕ್ತಿಯಾಗಿರುವುದರಿಂದ ಮನೋವೈಜ್ಞಾನಿಕ ಅಧ್ಯಯನಕ್ಕೆ ಒಂದು ವಿಭಿನ್ನತೆಯನ್ನು ತಂದು ಕೊಡುತ್ತದೆ. ಮನೋವಿಜ್ಞಾನದ ಬೆಳಕಿನಲ್ಲಿ ಸಾಹಿತ್ಯದ ಅರಿವು–ಆಸ್ವಾದಗಳು ಹೆಚ್ಚು ಅರ್ಥಪೂರ್ಣವಾಗುತ್ತವೆ.

೨೦ನೇ ಶತಮಾನದಿಂದೀಚೆಗೆ ಸಾಹಿತ್ಯ ಮತ್ತು ಮನೋವಿಜ್ಞಾನದ ಅಂತರ್ ಸಂಬಂಧದ ಬಗೆಗಿನ ಹೆಚ್ಚಿನ ಚರ್ಚೆಗಳು ಕೇಳಿಬರುತ್ತಿವೆ. ಕೆಲವು ಸಾಹಿತ್ಯ ಕೃತಿಗಳ ವಿಶ್ಲೇಷಣೆಗೆ ಮನೋವಿಜ್ಞಾನದ ವಿವರಣೆಗಳು ಅವಶ್ಯಕವೆನಿಸುತ್ತವೆ. ಈ ಹಿನ್ನೆಲೆಯಲ್ಲಿ ಸಂಶೋಧನೆಗಾಗಿ ರೂಪಿಸಿಕೊಂಡ ವಿಷಯವೇ 'ಕನ್ನಡ ಕಾದಂಬರಿಗಳಲ್ಲಿ ಮನೋವೈಜ್ಞಾನಿಕ ಪರಿಕಲ್ಪನೆಗಳು'. ಸಂಶೋಧನೆಯ ಸಂದರ್ಭದಲ್ಲಿ ವಿಷಯದ ಆಯ್ಕೆಯ ನಂತರ ಕಂಡುಕೊಂಡ ಮೂಲಭೂತ ವಿಚಾರಗಳು ಸಂಶೋಧನೆಯ ತಾತ್ತ್ವಿಕತೆಯ ಚೌಕಟ್ಟನ್ನು ರೂಪಿಸಿಕೊಳ್ಳಲು ನೆರವಾದವು. 'ಕನ್ನಡ ಕಾದಂಬರಿಗಳಲ್ಲಿ ಮನೋವೈಜ್ಞಾನಿಕ ಪರಿಕಲ್ಪನೆಗಳು' ಎಂಬ ವಿಷಯದ ತಾತ್ತ್ವಿಕ ಅಧ್ಯಯನಕ್ಕಾಗಿ ಒಟ್ಟು ಐದು ಅಧ್ಯಾಯಗಳನ್ನಾಗಿ ವಿಂಗಡಿಸಿಕೊಳ್ಳಲಾಗಿದೆ.

ಅಧ್ಯಾಯ ೧: 'ಸಾಹಿತ್ಯ ಮತ್ತು ಮನೋವಿಜ್ಞಾನ' ಇಲ್ಲಿ ಸಾಹಿತ್ಯ ಎಂದರೇನು, ಸಾಹಿತ್ಯ ಹೇಗೆ ಸೃಷ್ಟಿಯಾಗುತ್ತದೆ, ಸಾಹಿತಿಯಲ್ಲಿ ಸೃಜನಾತ್ಮಕ ಕ್ರಿಯೆಯನ್ನು ಪ್ರೇರೇಪಿಸುವ ಅಂಶಗಳಾವುವು, ಸಾಹಿತ್ಯ ರಚನೆಯ ವಿಕಾಸದಲ್ಲಿ ನಡೆಯುವ ಮಾನಸಿಕ ಪ್ರಕ್ರಿಯೆಗಳು ಯಾವುವು ಎಂಬ ಸೃಷ್ಟಿಕ್ರಿಯೆ ಸಂಬಂಧಿತ ವಿಚಾರಗಳ ಬಗ್ಗೆ ಪಾಶ್ಚಾತ್ಯ ಮನೋವಿಜ್ಞಾನಿಗಳಾದ ಸಿಗ್ಮಂಡ್ ಫ್ರಾಯ್ಡ್, ಸಿ. ಜಿ. ಯೂಂಗ್, ಅಲ್‌ಫ್ರೆಡ್ ಆಡ್ಲರ್ ಮೊದಲಾದವರ ಚಿಂತನೆಗಳನ್ನು, ಮನೋವಿಜ್ಞಾನಿಗಳ ಹೇಳಿಕೆಗಳಿಗೆ ಸಮೀಪವಾಗಿರುವ ಪಾಶ್ಚಾತ್ಯ ಸಾಹಿತ್ಯ ಮೀಮಾಂಸಕರು ಮತ್ತು ಕವಿಗಳ ಹೇಳಿಕೆಗಳನ್ನು ನೀಡಲಾಗಿದೆ. ಭಾರತೀಯ ಕಾವ್ಯಮೀಮಾಂಸಕರು ಮತ್ತು ಕನ್ನಡ ಸಾಹಿತಿಗಳು ಸಾಹಿತ್ಯ ಸೃಷ್ಟಿಯ ಬಗ್ಗೆ ಹೇಳಿರುವ ಹೇಳಿಕೆಗಳನ್ನು ಗಮನಿಸಲಾಗಿದೆ. ಸಾಹಿತ್ಯ ಸೃಷ್ಟಿಗೆ ಲೇಖಕರಿಗೆ ಪ್ರೇರಣೆಯಾಗುವ ಪರಿಸರ, ಸನ್ನಿವೇಶ, ವ್ಯಕ್ತಿತ್ವದ ಕುರಿತ ಗ್ರಹಿಕೆಗಳನ್ನು ನೀಡಲಾಗಿದೆ.

ಸಾಹಿತ್ಯವು ಮನುಷ್ಯನ ವರ್ತನೆಗಳ ನಿರೂಪಣೆಯಾಗಿದ್ದು, ಮಾನವನ ಬದುಕಿನ ಅತ್ಯಂತ ಆಪ್ತವಾದ ಎಲ್ಲಾ ಆಯಾಮಗಳನ್ನೊಳಗೊಂಡ ಅಭಿವ್ಯಕ್ತಿಯಾಗಿದೆ. ಇಂತಹ ಸಾಹಿತ್ಯ ಸೃಷ್ಟಿಗೆ ಕಾರಣಗಳೇನು ಅಥವಾ ಮೂಲ ಪ್ರೇರಣೆಗಳೇನು ಎಂಬ ವಿಚಾರಕ್ಕೆ ಸಂಬಂಧಿಸಿದ ಕುತೂಹಲ ಮನೋವಿಜ್ಞಾನಿಗಳು, ಕಾವ್ಯಮೀಮಾಂಸಕರು ಹಾಗೂ ಕವಿಗಳು ವಿವಿಧ ಉತ್ತರಗಳನ್ನು ಹುಡುಕಲು ಕಾರಣವಾಗಿದೆ. ಏಕೆಂದರೆ ಸಾಹಿತಿಯೂ ಒಬ್ಬ ಮನುಷ್ಯಜೀವಿ. ಆದರೆ ಎಲ್ಲ ಮಾನವರೂ ಸಾಹಿತ್ಯ ರಚನೆಯಲ್ಲಿ ಒಲವನ್ನು ತೋರುವುದಿಲ್ಲ. ಹಾಗಾದರೆ ಕೆಲವರನ್ನು ಮಾತ್ರ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಳ್ಳುವಂತೆ ಮಾಡುವ ಪ್ರೇರಕ ಶಕ್ತಿ ಯಾವುದು ಎಂಬುದರ ಬಗೆಗಿನ ಕುತೂಹಲ ಹಾಗೂ ನಿರಂತರ ಹುಡುಕಾಟವೇ ಅನೇಕ ಹೊಳಹುಗಳನ್ನು ನೀಡಲು ಕಾರಣವಾಯಿತು.

೧೯ನೇ ಶತಮಾನದಿಂದೀಚೆಗೆ ಪ್ರತ್ಯೇಕ ವೈಜ್ಞಾನಿಕ ಶಿಸ್ತಾಗಿ ಬೆಳೆದಿರುವ ಮನೋವಿಜ್ಞಾನವು ಸಾಹಿತ್ಯಕ ಕ್ರಿಯೆಯನ್ನು ಅರ್ಥೈಸಲು ಯತ್ನಿಸುತ್ತಿರುವ ಸಂದರ್ಭದಲ್ಲಿ ಮನೋವಿಜ್ಞಾನ ಮತ್ತು ಸಾಹಿತ್ಯದ ನಡುವಿನ ಅವಲಂಬನೆಯನ್ನು ಗುರುತಿಸುತ್ತ, ಸಾಹಿತ್ಯ ಮನೋವಿಜ್ಞಾನಕ್ಕೆ ಬದುಕಿನ ಅನೇಕ ಒಳನೋಟಗಳನ್ನು ಒದಗಿಸುತ್ತಾ, ತನ್ಮೂಲಕ ಸೃಜನಾತ್ಮಕ ಕ್ರಿಯೆಯನ್ನು ಅರ್ಥೈಸುವ ಪ್ರಯತ್ನವನ್ನು ನಡೆಸಿದೆ. ಹೀಗೆ ಸಾಹಿತ್ಯ ಮತ್ತು ಮನೋವಿಜ್ಞಾನಕ್ಕಿರುವ ಸಂಬಂಧ ನಿಕಟವಾಗಿರುವಾಗ ಈ ಅಧ್ಯಯನದಲ್ಲಿ ಸಾಹಿತ್ಯ ಸೃಷ್ಟಿಕ್ರಿಯೆಯ ಪ್ರೇರಣೆಗಳನ್ನು ಅರ್ಥೈಸುವಲ್ಲಿ ಮನೋವಿಜ್ಞಾನ ಸಹಕಾರಿಯಾಗುವ ಬಗೆಯನ್ನು ಗುರುತಿಸಲಾಗಿದೆ.

ಕಲೆ ಮಾನವನ ಸುಪ್ತಪ್ರಜ್ಞೆಯ ಪ್ರತೀಕ. ಸಾಹಿತ್ಯದ ಪ್ರೇರಣೆಯೂ ಸುಪ್ತಾವಸ್ಥೆಯಿಂದ ಉದ್ಭವಿಸುತ್ತದೆ. ಆದರೆ ಬಹುತೇಕ ಆಯಾಮಗಳು ಪ್ರಜ್ಞಾಸ್ತರದಿಂದ ನಿಯಂತ್ರಿತಗೊಂಡಿರುತ್ತವೆ. ಸಾಹಿತ್ಯ ಸೃಷ್ಟಿಯಲ್ಲಿ ಕಲ್ಪನೆ ಹೆಚ್ಚಿನ ಪಾತ್ರವನ್ನು ವಹಿಸಿದರೂ ಅದು ಸಾಮಾಜಿಕ ಪ್ರಜ್ಞೆಯಿಂದ ಪ್ರೇರಣೆಯನ್ನು ಪಡೆದಿರುತ್ತದೆ. ಒಬ್ಬ ಲೇಖಕ ತಾನು ಬದುಕಿನಲ್ಲಿ ಅನುಭವಿಸಿದ್ದನ್ನು ಕೃತಿಯ

ಮೂಲಕ ತೆರೆದಿಡುತ್ತಾನೆ. ಇದಕ್ಕೆ ಮೂಲ ಕೃತಿಕಾರನ ವ್ಯಕ್ತಿತ್ವ. ಸೃಷ್ಟಿಕ್ರಿಯೆಯಲ್ಲಿ ಲೇಖಕನ ಸುಪ್ತ–ಜಾಗೃತ–ಅರ್ಧಜಾಗೃತ ವಲಯದ ಯಾವೆಲ್ಲ ವಿಚಾರಗಳು, ಕನಸುಗಳು, ಅನುಭವಗಳು ನುಸುಳಿಕೊಂಡು ಸೇರಿ ವ್ಯಕ್ತವಾಗಲು ಹವಣಿಸುತ್ತವೆ ಎನ್ನುವುದು ಯಾರಿಗೂ ಅಂದರೆ ಸ್ವತಃ ಲೇಖಕನಿಗೂ ಗೊತ್ತಾಗದ ವಿಷಯ.

ಸಾಹಿತ್ಯದ ಬಗೆಗೆ ಮೊದಲಿಗೆ ವಿಶಿಷ್ಟವಾಗಿ ಯೋಚಿಸಿದ ಮೊದಲ ಮನೋವಿಜ್ಞಾನಿ ಸಿಗ್ಮಂಡ್ ಫ್ರಾಯ್ಡ್ ಹೇಳುವಂತೆ ಕಾವ್ಯವು ಸುಪ್ತಮನಸ್ಸಿನ ಸಂಕೀರ್ಣ ಅನುಭವಗಳ ಸಾಂಕೇತಿಕ ನಿರೂಪಣೆ. ಶೈಶವಾವಸ್ಥೆಯಿಂದಲೇ ಮಗುವಿನಲ್ಲಿರುವ ಲೈಂಗಿಕ ಪ್ರವೃತ್ತಿ(infantile sexuality) ಮತ್ತು ಸಮಾಜದ ನಿರ್ಬಂಧಗಳಿಗೂ ಘರ್ಷಣೆ ನಡೆದು ತೃಪ್ತಿಪಡಿಸಲಾಗದ ಸಾಮಾಜಿಕ ನಿಷೇಧಿತ ಅಭಿಲಾಷೆಗಳು ಸುಪ್ತಚೇತನಕ್ಕೆ ತಳ್ಳಲ್ಪಡುತ್ತವೆ. ಹೀಗೆ ಸುಪ್ತಚೇತನಕ್ಕೆ ತಳ್ಳಲ್ಪಟ್ಟ ಬಯಕೆ, ಆಕಾಂಕ್ಷೆಗಳು ಉದಾತ್ತೀಕರಣದ(Sublimation) ಮೂಲಕ ಸೃಜನಾತ್ಮಕತೆಗೂ ಕೆಲವೊಮ್ಮೆ ಪ್ರೇರಣೆಯಾಗಬಹುದು.

ದೈನಂದಿನ ಜೀವನದ ಯಾವುದೋ ಒಂದು ತೀವ್ರವಾದ ಅನುಭವ ಸುಪ್ತ ಬಯಕೆಯನ್ನು ಬಡಿದೆಬ್ಬಿಸುತ್ತದೆ. ಆದರೆ ಜಾಗೃತ ಮನಸ್ಸು ಅದು ತೃಪ್ತಿಯಾಗಲು ಬಿಡುವುದಿಲ್ಲ. ಆಗ ಅತೃಪ್ತ ಬಯಕೆ ಜಾಗೃತ ಮನಸ್ಸಿಗೆ ಒಪ್ಪಿಗೆಯಾಗುವಂತೆ ಮಾರ್ಪಟ್ಟು ಸುಸಂಸ್ಕೃತ ರೂಪದಲ್ಲಿ ಸುಂದರ ಸಾಹಿತ್ಯವಾಗಿ ಹೊರಬರುತ್ತದೆ. ಬಯಕೆಯ ಪೂರೈಕೆಗೆ ಚಾರಿತ್ರಿಕ/ಪೌರಾಣಿಕ ಹಿನ್ನೆಲೆಯನ್ನು ಆರಿಸಿಕೊಂಡು ಜಾಗೃತ ಮನಸ್ಸಿಗೆ ಒಪ್ಪಿಗೆಯಾಗುವ ಅಲಂಕಾರಗಳನ್ನು ಸುಪ್ತಬಯಕೆಗೆ ತೊಡಿಸುತ್ತಾನೆ. ಸಾಹಿತಿಯ ಅನೈತಿಕ ಆಕಾಂಕ್ಷೆಗಳು ಓದುಗನದೂ ಆಗಿರುವುದರಿಂದ ಕವಿಯ ಕಲ್ಪನೆಯಲ್ಲಿ ಓದುಗ ತನ್ನ ಅತೃಪ್ತ ಬಯಕೆಗಳನ್ನು ಪರೋಕ್ಷವಾಗಿ ಪೂರೈಸಿಕೊಳ್ಳುತ್ತಾನೆ. ಸಾಹಿತಿಯ ಅತೃಪ್ತ ಬಯಕೆಗಳು ವಾಸ್ತವವಾಗಿ ಪೂರೈಕೆಯಾಗದಿರುವುದರಿಂದ ಅವನು ನಿರಂತರ ಸಾಹಿತ್ಯ ರಚಿಸುತ್ತಾನೆ.

ಕಲೆಯ ಮೂಲಕ ಲೇಖಕ ತನ್ನ ನಿಜ ಜೀವನದಲ್ಲಿ ಹಂಚಿಕೊಳ್ಳಲಾಗದ ಬಯಕೆಗಳನ್ನು ಪೂರೈಸಿಕೊಳ್ಳಲು ಪ್ರಯತ್ನಿಸುತ್ತಾನೆ(Substitute gratification). ಇದು ಇಚ್ಛಾಪೂರ್ತಿ(Wish fulfillment)ಯ ಒಂದು ಪ್ರಕಾರ. ಲೇಖಕ ತನ್ನ ಅತೃಪ್ತ ಆಕಾಂಕ್ಷೆಗಳಿಗೆ ಕಲೆಯ ರೂಪವನ್ನು ಕೊಟ್ಟು, ಬಯಕೆಯ ಒತ್ತಡವನ್ನು ಪರಿಹರಿಸಿ, ಪ್ರವೃತ್ತಿಗಳ ಮೇಲೆ ಹತೋಟಿಯನ್ನು ಕಾಯ್ದುಕೊಂಡು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಳ್ಳುತ್ತಾನೆ. ಹೀಗೆ ಕಲೆಯ ಉಗಮವನ್ನು ಫ್ರಾಯ್ಡ್ ಮಾನವ ಸಹಜ ಆಸೆ–ಆಕಾಂಕ್ಷೆಗಳು ಮತ್ತು ಸಾಮಾಜಿಕ–ನೈತಿಕ ನಿಯಂತ್ರಣಗಳ ಮಧ್ಯೆ ಉದ್ಭವಿಸುವ ಕರ್ಷಣದಲ್ಲಿ ಗುರುತಿಸುತ್ತಾನೆ.

'ಮನೋವಿಜ್ಞಾನ ಮತ್ತು ಸಾಹಿತ್ಯ' ಎಂಬ ಮಹತ್ವದ ಪ್ರಬಂಧದಲ್ಲಿ ಕಲೆಯನ್ನು ಕುರಿತ ಸವಿವರವಾದ ಸಿದ್ಧಾಂತವನ್ನು ರೂಪಿದವನು ಸಿ. ಜಿ. ಯೂಂಗ್. ಈತನು ಕಲೆ, ಕಲಾವಿದರನ್ನು ಅಭ್ಯಸಿಸಿ ಸಾಹಿತ್ಯದ ಬಗೆಗೆ ಅನೇಕ ವಿಚಾರಗಳನ್ನು ಹೇಳಿದ್ದಾನೆ. ಸಾಹಿತ್ಯದ ಜನ್ಮಸ್ಥಾನ ಮಾನವನ

ಮನಸ್ಸು. ಕೃತಿ ನಿರ್ಮಾಣಕ್ಕೆ ಪ್ರೇರಣೆ ಹಾಗೂ ಕಾರಣ ಕೂಡಾ ಮನಸ್ಸೇ. ವ್ಯಕ್ತಿ ಸೃಜನಶೀಲನಾದಾಗ ಸಾಹಿತ್ಯ ಸೃಷ್ಟಿಯಾಗುತ್ತದೆ. ಆದರೆ ಸಾಹಿತ್ಯಕ್ಕೆ ಪ್ರೇರಣೆ ಮಾನವನ ಸುಪ್ತಾವಸ್ಥೆಯಲ್ಲಿರುವ ಅತೃಪ್ತ ಲೈಂಗಿಕ ಬಯಕೆಗಳು ಎಂಬ ಫ್ರಾಯ್ಡ್‌ನ ಚಿಂತನೆಯನ್ನು ಇವನು ಒಪ್ಪಿಕೊಳ್ಳುವುದಿಲ್ಲ. ಕಲೆ, ಕಲಾವಿದರ ವೈಯಕ್ತಿಕ ಜೀವನವನ್ನು ಮೀರಿದ ಅದರ ಆಳವಾದ ಬೇರೊಂದು ನೆಲೆಯನ್ನು ಅಭಿವ್ಯಕ್ತಿಸುತ್ತದೆ. ಅದು ವ್ಯಕ್ತಪಡಿಸುವುದು ಸಮಷ್ಟಿ ಚಿತ್ತವನ್ನು. ಇದು ಸೃಷ್ಟಿ ಪ್ರಾರಂಭವಾದಂದಿನಿಂದ ಇಂದಿನ ತನಕ ಒಂದು ಜನಮನಸ್ಸಿನಲ್ಲಿ ಪರಂಪರಾಗತವಾಗಿ ಬಂದು ಪ್ರಜ್ಞೆಯ ತಳದಲ್ಲಿರುವ ಶಕ್ತಿ ಸಂಸ್ಕಾರ ವಿಶೇಷಗಳ ಪರಿಣಾಮ. ಕವಿಯ ವ್ಯಕ್ತಿತ್ವ ಒಂದು ನೆಪ ಅಥವಾ ಮಾಧ್ಯಮ ಮಾತ್ರ.

ಅಬ್ರಹಾಂ ಮಾಸ್ಲೋನ ಪ್ರಕಾರ ಕಲಾಕಾರನ ಆತ್ಮಾಭಿವ್ಯಕ್ತಿಯ ಉತ್ಕಟ ಆಕಾಂಕ್ಷೆಯೇ ಸಾಹಿತ್ಯಕೃತಿಯ ಮೂಲ ಪ್ರೇರಣೆ. ಫ್ರಾಯ್ಡ್, ಯೂಂಗರ ನಂತರ ಸಾಹಿತ್ಯವನ್ನು ಆಳವಾಗಿ ಅಭ್ಯಸಿಸಿದ ಮನೋವಿಜ್ಞಾನಿಗಳು ವಿರಳ; ಅವರ ಮಟ್ಟಕ್ಕೇರಿದವರೂ ಇಲ್ಲ. ಆಧುನಿಕ ಮನೋವಿಜ್ಞಾನಿಗಳ ಪ್ರಕಾರ ಸಾಹಿತ್ಯ ರಚನೆ ಒಂದು ಸಂಕೀರ್ಣ ಮಾನಸಿಕ ಕ್ರಿಯೆ. ಇದಕ್ಕೆ ನಿರ್ದಿಷ್ಟ ಕಾರಣಗಳನ್ನು ಹೇಳುವುದು ಕಷ್ಟ. ಮಾನವನ ಅನುಭವಗಳಿಗೆ ಕಾರಣ ಹಲವು. ಯಾವ ಅನುಭವವೂ ಒಂದೇ ಕಾರಣದಿಂದ ಹುಟ್ಟುವುದಿಲ್ಲ. ಒಂದು ಅನುಭವ ಬೇರೆ ಬೇರೆಯವರಲ್ಲಿ ಬೇರೆ ಬೇರೆ ಕಾರಣದಿಂದ ಹುಟ್ಟಬಹುದು. ಸುಪ್ತ ಲೈಂಗಿಕ ಪ್ರವೃತ್ತಿಗಳಷ್ಟೇ ಸಾಹಿತ್ಯಕ್ಕೆ ಪ್ರೇರಣೆಯಲ್ಲ. ವ್ಯಕ್ತಿಯ ಆಂತರಿಕ ಅಥವಾ ಬಾಹ್ಯ ಸಮಸ್ಯೆ(ಪ್ರಜ್ಞಾತ್ಮಕ/ಅಪ್ರಜ್ಞಾತ್ಮಕ)ಗಳಾದ ಲೈಂಗಿಕ, ಬೌದ್ಧಿಕ, ಧಾರ್ಮಿಕ, ಕೌಟುಂಬಿಕ, ಸಾಮಾಜಿಕ ಅಥವಾ ದಾರ್ಶನಿಕ ಸಮಸ್ಯೆಗಳ ಪರಿಹಾರಕ್ಕೆ ಒಬ್ಬೊಬ್ಬರು ಒಂದೊಂದು ಮಾರ್ಗವನ್ನು ಅವಲಂಬಿಸುತ್ತಾರೆ. ಕೆಲವರು ಸಾಹಿತ್ಯ ರಚನೆಯ ಮೂಲಕ ಸಮಸ್ಯೆಗೆ ಪರಿಹಾರ ಹುಡುಕುತ್ತಾರೆ. ಆದುದರಿಂದ ಸಾಹಿತ್ಯವು ಮನಸ್ಸಿನ ತುಮುಲ ಅಥವಾ ಸಂಘರ್ಷಗಳ ಅಭಿವ್ಯಕ್ತಿ ಎನ್ನಬಹುದು.

ಪಾಶ್ಚಿಮಾತ್ಯ ಕಾವ್ಯ ಮೀಮಾಂಸಕರ ಪ್ರಕಾರ ಕಾವ್ಯ ಎನ್ನುವುದು ತನ್ನ ಅಂತರಂಗದ ತೀವ್ರಾನುಭವಗಳಿಗೆ ಭಾಷೆಯ ಮಾಧ್ಯಮದಲ್ಲಿ ರೂಪನೀಡುವ ಸಮಗ್ರ ಕ್ರಿಯೆಯಾಗಿದೆ. ಪಾಶ್ಚಾತ್ಯರು 'Poets are born not made' ಎಂದೇ ಭಾವಿಸುತ್ತಾರೆ.

ಮನಸ್ಸಿನ ಅಸ್ವಾಸ್ಥ್ಯವೇ ಕಲೆಗೆ ಕಾರಣ ಎಂದು ಪಾಶ್ಚಾತ್ಯ ಮನೋವಿಜ್ಞಾನಿಗಳು ಹೇಳಿದರೆ, ಮನಸ್ಸಿನ ಸ್ವಾಸ್ಥ್ಯವೇ ಕಲೆಗೆ ಕಾರಣ ಎನ್ನುತ್ತಾರೆ ಭಾರತೀಯರು. ಕಾವ್ಯವು ಮನಸ್ಸಿನ ಆಂತರಿಕ ವ್ಯಾಪಾರಕ್ಕೆ ಸಂಬಂಧಿಸಿದ ತರ್ಕಾತೀತವಾದ ಒಂದು ಶಕ್ತಿ. ಈ ಲೋಕವಸ್ತುಗಳ ಗ್ರಹಿಕೆ, ಸಂವೇದನೆ, ಸಂಘಟನಾದಿಗಳನ್ನು ಇದು ಒಳಗೊಂಡರೂ ಅಷ್ಟರಲ್ಲೇ ಪರ್ಯಾವಸಾನವಾಗದೆ ಇವೆಲ್ಲವುಗಳಿಗೂ ಹೊಸತನವನ್ನು ತಂದುಕೊಡುವ ನಿತ್ಯನೂತನ ಶಕ್ತಿಯೇ ಕಾವ್ಯ.

ಕವಿಯಲ್ಲಿರುವ ವಿಶೇಷ ಶಕ್ತಿ ಯಾವುದು ಎಂಬುದಕ್ಕೆ ಉತ್ತರವಾಗಿ ಭಾರತೀಯ ಕಾವ್ಯಮೀಮಾಂಸಕರು 'ಪ್ರತಿಭೆ' ಎಂಬ ವಿಶಿಷ್ಟಪ್ರಜ್ಞೆ ಕವಿಯಲ್ಲಿ ಕ್ರಿಯಾಶೀಲವಾಗಿರುತ್ತದೆಂದೂ ಅದೇ ಕಾವ್ಯದ ಮೂಲಾಧಾರವೆಂದೂ ಭಾವಿಸುತ್ತಾರೆ. ಅದನ್ನು ಕಾವ್ಯದ ಆಕರವೆಂದೂ, ಪ್ರತಿಭೆಯನ್ನು ಉಜ್ವಲಗೊಳಿಸುವ ಸಾಧನಗಳಾದ ವ್ಯುತ್ಪತ್ತಿ, ಅಭ್ಯಾಸಗಳನ್ನು ಕಾವ್ಯದ ಪರಿಕರಗಳು ಎಂದು ಹೇಳಿದ್ದಾರೆ. ಕವಿ ಪ್ರತಿಭೆಗೆ ಜ್ಞಾನಾನುಭವಗಳೇ ಆಧಾರ. ಅನುಭವ ವಿಸ್ತಾರಗೊಂಡಂತೆ ಕಾವ್ಯದ ತಿರುಳೂ ಅಧಿಕವಾಗುತ್ತದೆ. ಪ್ರತಿಭೆ ಎನ್ನುವ ಶಕ್ತಿ ಎಲ್ಲರಲ್ಲೂ ಒಂದೇ ರೀತಿಯಾಗಿರುವುದಿಲ್ಲ. ಹೇಗೆ ಪ್ರತಿಯೊಬ್ಬರ ದೈಹಿಕ ರೂಪಗಳು ಭಿನ್ನವಾಗಿರುತ್ತವೆಯೋ ಹಾಗೆಯೇ ಕಲಾವಿದರ ಅಂತಃಶಕ್ತಿಯಾದ ಪ್ರತಿಭೆಯ ಸಾಮರ್ಥ್ಯವು ಭಿನ್ನ ಭಿನ್ನವಾಗಿರುತ್ತದೆ. ಒಟ್ಟಿನಲ್ಲಿ ಪ್ರತಿಭೆ ಎಂಬುದು ಒಂದು ವಿಶೇಷ ಹೊಳಹು. ಅದು ಎಲ್ಲರಿಗೂ ಲಭಿಸುವಂತದ್ದಲ್ಲ.

ಸಾಹಿತ್ಯವು ತನ್ನ ಅನನ್ಯ ಅನುಭವ, ಸಂವೇದನೆ, ಕನಸು, ಭಾವ–ಭಾವನೆಗಳ ಆತ್ಮೀಯ ಒಳಜಗತ್ತಿನ ವೈಯಕ್ತಿಕ ಲೋಕ. ವ್ಯಕ್ತಿ ನಿರಪೇಕ್ಷವಾಗಿ ಸಮುದಾಯದ ಭಾಷೆಯಲ್ಲಿ ನಿರೂಪಣೆಯಾಗುವ ಸಾಹಿತ್ಯದ ಮೂಲಕ ನಮ್ಮ ಅಂತರಂಗದ ಶೋಧನೆಯಾಗುತ್ತದೆ. ಸಾಹಿತ್ಯ ಸೃಷ್ಟಿ ಎನ್ನುವುದು ಬೌದ್ಧಿಕವಾಗಿ ಸ್ಪಷ್ಟಪಡಿಸಲಾಗದ ಆಂತರಿಕ ಸೃಷ್ಟಿಕ್ರಿಯೆ. ಇದನ್ನು ಒರೆಗೆ ಹಚ್ಚಿ ನೋಡುವ ಪ್ರಯತ್ನ ನಡೆಯುತ್ತಲೇ ಬಂದಿದೆ. ಸಾಹಿತ್ಯ ಸೃಷ್ಟಿ ಮತ್ತು ಆಸ್ವಾದಗಳು ಕವಿ ಮತ್ತು ಸಹೃದಯರಲ್ಲಿ ನಡೆಯುವ ಮಾನಸಿಕ ಕ್ರಿಯೆ ಮತ್ತು ಪ್ರಕ್ರಿಯೆಗಳು. ಅಂದರೆ ಇದು ಸಂಪೂರ್ಣವಾಗಿ ಮಾನಸಿಕವಾದುದು. ಕವಿಯ ಮನಸ್ಸಿನ ಒಂದು ವಿಶಿಷ್ಟ ಶಕ್ತಿ ಕಾವ್ಯಸೃಷ್ಟಿಗೆ ಕಾರಣವೆಂಬುದನ್ನು ಭಾರತೀಯ ಮತ್ತು ಪಾಶ್ಚಾತ್ಯ ಕಾವ್ಯಮೀಮಾಂಸಕರು ಹಲವು ಬಗೆಯಾಗಿ ಪ್ರತಿಪಾದಿಸಿದ್ದಾರೆ.

ಒಟ್ಟಿನಲ್ಲಿ ಸಾಹಿತ್ಯ ಎನ್ನುವುದು ಕೃತಿಕಾರನ ಅಂತರಂಗದಲ್ಲಿ/ಸುಪ್ತಪ್ರಜ್ಞೆಯಲ್ಲಿ ನಡೆಯುವ ವ್ಯಾಪಾರ. ಮನಸ್ಸು ಕೃತಿಯಲ್ಲಿ ತನ್ನನ್ನು ತಾನು ಸ್ಫುಟಗೊಳಿಸಿಕೊಳ್ಳುತ್ತದೆ. ಅಂದರೆ ಈ ಲೋಕ/ಜಗತ್ತಿನ ಸಂಗತಿಗಳು, ಘಟನೆಗಳು, ಕಾರ್ಯಕಾರಣಗಳನ್ನು ತನ್ನೊಳಗಿನ ಭಾವಜಗತ್ತಿನಲ್ಲಿ ಕರಗಿಸಿ ಸೃಜನಶೀಲ ಕ್ರಿಯೆ–ಪ್ರಕ್ರಿಯೆಗಳಿಂದ ವಿಭಿನ್ನ ಸ್ವರೂಪದಲ್ಲಿ ಭಾಷಾ ಮಾಧ್ಯಮದಲ್ಲಿ ಅಭಿವ್ಯಕ್ತಿಸಿ ಪುನರ್‌ಸೃಷ್ಟಿಸುವುದಾಗಿದೆ. ಅಗತ್ಯ ಸೂಕ್ಷ್ಮಬುದ್ಧಿ, ಜನ್ಮದತ್ತ ಸಾಮರ್ಥ್ಯಕ್ಕೆ ಅನುಗುಣವಾಗಿ ರೂಪುಗೊಳ್ಳುವ ಅಭಿರುಚಿ, ಆನುವಂಶೀಯತೆ, ಸಾಮಾಜಿಕ–ಸಾಂಸ್ಕೃತಿಕ–ಧಾರ್ಮಿಕ ಆವರಣವನ್ನು ವಿಶಿಷ್ಟವಾಗಿ ಅರ್ಥೈಸಿಕೊಳ್ಳುವ ಪರಿಣಾಮ ಸಾಹಿತ್ಯ ಸೃಷ್ಟಿಯಾಗುತ್ತದೆ. ಸಮಾಜದ ಪ್ರತೀ ಆಗುಹೋಗುಗಳನ್ನು ತನ್ನದೇ ಆದ ರೀತಿಯಲ್ಲಿ ಗಮನಿಸಿ ಗ್ರಹಿಸಿದಾಗ, ಇಂದ್ರಿಯಾನುಭವಗಳು ಮನಸ್ಸಿನ ಅಂತರಾಳದಲ್ಲಿ ಸಂಗ್ರಹವಾಗಿ, ಅಜ್ಞಾತಾವಸ್ಥೆಯಲ್ಲಿ ಪರಸ್ಪರ ಕ್ರಿಯೆಗೊಳಗಾಗಿ, ಪರಿಪಕ್ವವಾಗಿ ಒಂದು ನಿರ್ದಿಷ್ಟ ರೂಪವನ್ನು ತಾಳಿ, ಯಾವುದೋ ಒಂದು ಕಾಲ, ಸ್ಥಳದಲ್ಲಿ ಬಾಹ್ಯ/ಆಂತರಿಕ ಪ್ರಚೋದನೆಯ ಫಲವಾಗಿ ಸಾಹಿತ್ಯ ಸೃಷ್ಟಿಯಾಗುತ್ತದೆ. ಒಟ್ಟಿನಲ್ಲಿ ಮನಸ್ಸಿನ ವಿಚಾರ,

ಭಾವನೆಗಳನ್ನು ಇನ್ನೊಬ್ಬರೊಂದಿಗೆ ತೋಡಿಕೊಳ್ಳಬೇಕೆಂಬ ಬಯಕೆಯೇ ಸಾಹಿತ್ಯದ ಸೃಷ್ಟಿಗೆ ಕಾರಣ. ಕಲೆ-ಸಾಹಿತ್ಯಗಳು ಮಾನವನ ಅಂತಃಚೇತನದಿಂದ ಪ್ರಚೋದನೆಗೊಳ್ಳುವಂತಹವು.

ಸಾಹಿತಿ ತಾನು ಕಂಡು, ಗ್ರಹಿಸಿ, ಅರ್ಥೈಸಿ, ಚಿತ್ರಿಸಿದ ಸಮಗ್ರ ಜೀವನಚಿತ್ರವಾದ ಕಲಾಸೃಷ್ಟಿಯ ಸ್ವರೂಪ ಇಂದಿಗೂ ರಹಸ್ಯವಾಗಿಯೇ ಉಳಿದಿದೆ. ಪ್ರಸ್ತುತ ಮನೋವಿಜ್ಞಾನ ಸಾಹಿತ್ಯ ಸೃಷ್ಟಿಗೆ ಖಚಿತ ಕಾರಣಗಳನ್ನು ನೀಡಿಲ್ಲ. ಸಾಹಿತ್ಯ ಸೃಷ್ಟಿಯಲ್ಲಿ ಜಾಗೃತಪ್ರಜ್ಞೆಯ ಪಾತ್ರವೆಷ್ಟು, ಅಜಾಗೃತ ಸುಪ್ತಚಿತ್ತದ ಪಾತ್ರವೆಷ್ಟು ಎಂಬುದು ಇಂದಿಗೂ ಪ್ರಶ್ನೆಯಾಗಿಯೇ ಉಳಿದಿದೆ. ಮನೋವಿಜ್ಞಾನಿಗಳು ಸುಪ್ತಚಿತ್ತಕ್ಕೆ ಹೆಚ್ಚಿನ ಒತ್ತನ್ನು ಕೊಡುತ್ತಾರೆ. ಆದರೆ ಸಾಹಿತ್ಯ ಸೃಷ್ಟಿಯಲ್ಲಿ ಪ್ರಜ್ಞೆ ಮತ್ತು ಸುಪ್ತಚಿತ್ತ ಇವೆರಡೂ ಭಾಗವಹಿಸುತ್ತವೆ ಎಂಬುದು ನಿರ್ವಿವಾದ. ಏಕೆಂದರೆ ಸಾಹಿತ್ಯವು ಜಾಗೃತಪ್ರಜ್ಞೆಯಿಂದ ರೂಪಿಸಲ್ಪಟ್ಟ ವೈಚಾರಿಕ ಸ್ತರ ಹಾಗೂ ಅಜಾಗೃತ ಸುಪ್ತಚಿತ್ತದಿಂದ ರೂಪಿಸಲ್ಪಡುವ ಭಾವನಾತ್ಮಕ ಸ್ತರವನ್ನೂ ಹೊಂದಿರುತ್ತದೆ ಎಂಬುದನ್ನು ಕಂಡುಕೊಳ್ಳಲಾಗಿದೆ.

ಅಧ್ಯಾಯ ೨: 'ಕನ್ನಡದಲ್ಲಿ ಮನೋವೈಜ್ಞಾನಿಕ ಕಾದಂಬರಿಗಳು ಈ ಅಧ್ಯಾಯದಲ್ಲಿ ಮನೋವೈಜ್ಞಾನಿಕ ವಸ್ತುವನ್ನೊಳಗೊಂಡ ಕಾದಂಬರಿಗಳು, ಮನೋವೈಜ್ಞಾನಿಕ ಅಂಶಗಳನ್ನೊಳಗೊಂಡ ಕಾದಂಬರಿಗಳು ಹಾಗೂ ಪ್ರಜ್ಞಾಪ್ರವಾಹ ತಂತ್ರವಿರುವ ಕಾದಂಬರಿಗಳು ಎಂದರೇನು ಎಂಬ ವಿವರಗಳನ್ನು ನೀಡಲಾಗಿದೆ. ಆ ಮೂಲಕ ಮನೋವೈಜ್ಞಾನಿಕ ಕಾದಂಬರಿ ಎಂದರೇನು ಎಂಬುದನ್ನು ಸ್ಪಷ್ಟಪಡಿಸಿಕೊಳ್ಳಲಾಗಿದೆ.

ಸಾಹಿತ್ಯವು ಸಾಮಾಜಿಕ, ವೈಯಕ್ತಿಕ, ಸಾಂಸ್ಕೃತಿಕ ಜೀವನ ಪ್ರಕ್ರಿಯೆಯ ಅವಿಭಾಜ್ಯ ಅಂಗ. ಎಲ್ಲ ಕಾದಂಬರಿಗಳಲ್ಲೂ ವ್ಯಕ್ತಿಯ ಆಂತರಿಕ ಹೋರಾಟದ ವಿವರಗಳು ಇದ್ದೇ ಇರುತ್ತವೆ. ಆದರೆ ಕೆಲವು ಕಾದಂಬರಿಗಳಲ್ಲಿ ಮನಸ್ಸಿನ ವಿವರಗಳಿಗೆ ಹೆಚ್ಚಿನ ಒತ್ತನ್ನು ನೀಡಿರುವುದನ್ನು ಗಮನಿಸಬಹುದು. ಆದರೆ ಇನ್ನೂ ಕೆಲವು ಕಾದಂಬರಿಗಳು ಮನಸ್ಸಿನ ವಿವರಗಳೊಂದಿಗೆ ಪಾತ್ರದ ವರ್ತನೆಗೆ ಕಾರಣಗಳೇನು, ಹೇಗೆಲ್ಲಾ ವರ್ತಿಸುತ್ತಿದೆ, ಪರಿಹಾರಗಳೇನು ಈ ಎಲ್ಲಾ ವಿವರಗಳನ್ನು ಒಳಗೊಂಡಿದ್ದಾಗ ಅದನ್ನು ಮನೋವೈಜ್ಞಾನಿಕ ಕಾದಂಬರಿ ಎನ್ನಬಹುದು. ಇನ್ನೂ ಕೆಲವು ಕಾದಂಬರಿಗಳು ಈ ವಿವರಗಳನ್ನು ಒಳಗೊಂಡಿರುವುದಿಲ್ಲ. ಆದರೆ ಅವು ವಿಶ್ಲೇಷಣೆಗೆ ಮನೋವಿಜ್ಞಾನದ ಅಸರೆಯನ್ನು ಬಯಸುತ್ತವೆ. ಮತ್ತೆ ಕೆಲವು ಮಾನವನ ಬದುಕಿನ ವ್ಯಕ್ತಿ ಸಂಬಂಧಗಳ ನೇರ ನಿರೂಪಣೆಗಳನ್ನು ಮಾತ್ರ ಒಳಗೊಂಡಿರುತ್ತವೆ.

ಜೀವನದ ಚಿಕ್ಕಪುಟ್ಟ ಅನುಭವಗಳನ್ನು ನಿರಾತಂಕವಾಗಿ ಪ್ರಾಮಾಣಿಕ ಪ್ರಜ್ಞೆಯಿಂದ ನೋಡುವ ಎಲ್ಲ ಸಾಹಿತ್ಯ ಕೃತಿಗಳೂ ಮನೋವಿಶ್ಲೇಷಣಾತ್ಮಕವಾದವುಗಳೆಂದು ಹೇಳಬಹುದು. ಆದರೆ ಪ್ರತಿಯೊಂದು ಸಾಹಿತ್ಯ ಕೃತಿಯೂ ಮನೋ ಆವರಣದ ವಸ್ತುವೇ ಆದರೂ ಎಲ್ಲವನ್ನೂ ಮನೋವೈಜ್ಞಾನಿಕ/ಮನೋವಿಶ್ಲೇಷಣಾತ್ಮಕ ಎಂದು ಕರೆಯಲು ಸಾಧ್ಯವಿಲ್ಲ. ಮೇಲ್ಮೆಯ ರಾಗ-

ದ್ವೇಷಗಳನ್ನು, ಉದ್ವೇಗ-ಉತ್ಕ್ರಾಂತಿಗಳನ್ನು, ಅಭಿಲಾಷೆ-ಆಸಕ್ತಿ, ಅನಾಸಕ್ತಿಗಳನ್ನು ಹುಡುಕಿ ಹುಡುಕಿ ನೋಡಿದ ಮಾತ್ರಕ್ಕೆ ಮನೋವಿಶ್ಲೇಷಣೆಯಾದಂತೆ ಅನಿಸಿದರೂ ಅದು ಭಾವನೆಗಳ ಛೇದ ವಿಚ್ಛೇದದ ಸಾಹಸವೆಂದು ತೋರಬಹುದು. ಹೀಗೆ ಎಲ್ಲ ಕಾದಂಬರಿಗಳಲ್ಲೂ ಮನಸ್ಸಿನ ವ್ಯಾಪಾರ ಇದ್ದೇ ಇರುವಾಗ ಮನೋವೈಜ್ಞಾನಿಕ ಕಾದಂಬರಿಗಳಿಗೂ ಇತರೇ ಕಾದಂಬರಿಗಳಿಗೂ ಇರುವ ಅಂತರವನ್ನು ತಿಳಿಯುವ ಉದ್ದೇಶದಿಂದ ಈ ಅಧ್ಯಾಯದಲ್ಲಿ ಮನೋವೈಜ್ಞಾನಿಕ ವಸ್ತು, ಅಂಶ ಹಾಗೂ ಪ್ರಜ್ಞಾಪ್ರವಾಹ ತಂತ್ರ ಬಳಕೆಯಾಗಿರುವ ಕಾದಂಬರಿಗಳ ಸ್ವರೂಪವನ್ನು ವಿಶ್ಲೇಷಿಸಲಾಗಿದೆ.

ಮನೋವೈಜ್ಞಾನಿಕ ಕಾದಂಬರಿಗಳಲ್ಲಿ ಮನೋವೈಜ್ಞಾನಿಕ ಸಿದ್ಧಾಂತಗಳನ್ನು ಪಾತ್ರ ಹಾಗೂ ಘಟನೆಗಳಲ್ಲಿ ಅಳವಡಿಸಿರುತ್ತಾರೆ. ಇಲ್ಲಿ ಮನಸ್ಸಿನ ಅಪಸಾಮಾನ್ಯ ವರ್ತನೆಯ ವಿವರಗಳಿದ್ದು, ವ್ಯಕ್ತಿಯ ಮನಸ್ಸಿನ ಅಂತರಾಳದಲ್ಲಿ ಹುದುಗಿರುವ ಕ್ಷೋಭೆಯ ವಿವರಗಳಿಂದ ಕೂಡಿರುತ್ತದೆ. ಸಹಜ-ಅಸಹಜ ಮನಸ್ಸಿನ ನಡುವೆ ಇರುವ ವ್ಯತ್ಯಾಸದಂತೆ ಇತರ ಹಾಗೂ ಮನೋವೈಜ್ಞಾನಿಕ ಕಾದಂಬರಿಗಳ ಮನಸ್ಸಿನ ವರ್ತನೆಗೂ ವ್ಯತ್ಯಾಸವಿದೆ ಎಂಬುದು ಪ್ರಮುಖ ಅಂಶವಾಗಿದೆ.

ಮನೋವೈಜ್ಞಾನಿಕ ವಸ್ತುಗಳನ್ನೊಳಗೊಂಡ ಕಾದಂಬರಿಗಳಲ್ಲಿ ಮನೋವಿಜ್ಞಾನದ ತಿಳಿವಳಿಕೆಯು ಉದ್ದೇಶಪೂರ್ವಕವಾಗಿ ಬಳಕೆಯಾಗುತ್ತದೆ. ಮನೋವ್ಯಾಪಾರಕ್ಕೆ ಸಂಬಂಧಿಸಿದ ಸಮಸ್ಯೆಗಳ ಚಿತ್ರಣವೇ ಪ್ರಮುಖವಾಗಿರುತ್ತದೆ. ಅಂದರೆ ಇಲ್ಲಿ ಮನೋವಿಜ್ಞಾನಕ್ಕೆ ಸಂಬಂಧಿಸಿದ ಸೂತ್ರ/ಸಮಸ್ಯೆಯೊಂದನ್ನು ಆಯ್ದುಕೊಂಡು ಅದರ ಸುತ್ತ ಕಥೆಯನ್ನು ಹೆಣೆಯಲಾಗಿರುತ್ತದೆ. ಇವು ಮನೋವ್ಯಾಪಾರಕ್ಕೆ ಸಂಬಂಧಿಸಿದ ಸಮಸ್ಯೆ, ಚಿಕಿತ್ಸೆ, ಪರಿಹಾರಗಳ ವಿವರಗಳನ್ನೊಳಗೊಂಡಿದ್ದು, ವ್ಯಕ್ತಿಯ/ಪಾತ್ರದ ಮನಸ್ಸಿನ ವಿಶ್ಲೇಷಣೆಯಿರುತ್ತದೆ.

ಒಂದು ಕಾದಂಬರಿಯು ಮನೋವೈಜ್ಞಾನಿಕ ಕಾದಂಬರಿ ಎಂದು ಕರೆಯಿಸಿಕೊಳ್ಳಬೇಕಾದರೆ ಅದು ಮನಃಶಾಸ್ತ್ರದ ತತ್ತ್ವಗಳಿಗೆ ಬದ್ಧವಾಗಿರಬೇಕು. ಮಾತ್ರವಲ್ಲ; ಅದು ಕೇವಲ ಕೇಸ್ ಹಿಸ್ಟರಿ ಆಗಬಾರದು. ಕೃತಿಯಲ್ಲಿ ಚಿತ್ರಿಸಿದ ಘಟನೆ, ವಿಶ್ಲೇಷಣೆಗಳು ಮನಃಶಾಸ್ತ್ರದ ನೆಲೆಯಲ್ಲಿ ವಿಶ್ವಸನೀಯವೆಂದು ತೋರಬೇಕು. ಹಾಗೆಂದು ಮನಃಶಾಸ್ತ್ರದ ತತ್ತ್ವ, ಮಾನಸಿಕ ಅಸ್ವಾಸ್ಥ್ಯದ ಲಕ್ಷಣ, ವಿಶ್ಲೇಷಣೆ, ಪರಿಹಾರದ ದಾಖಲಿಕೆಯಾದರೆ ಅದು ಬರಿಯ ಕೇಸ್‌ಹಿಸ್ಟರಿ ಆಗಿ ಬಿಡುವ ಸಾಧ್ಯತೆಯೇ ಹೆಚ್ಚಾಗಿರುತ್ತದೆ.

ಮನೋವೈಜ್ಞಾನಿಕ ಅಂಶಗಳಿರುವ ಕಾದಂಬರಿಗಳಲ್ಲಿ ಮನಸ್ಸಿನ ಸೂಕ್ಷ್ಮ ಸಂಗತಿಗಳು, ಒಳಪದರುಗಳು ನೇರವಾಗಿ ವ್ಯಕ್ತವಾಗುವುದಿಲ್ಲ. ಮನೋವಿಜ್ಞಾನದ ತತ್ತ್ವ, ಮಾನಸಿಕ ಅಸ್ವಸ್ಥತೆ, ಅದರ ಲಕ್ಷಣ, ವಿಶ್ಲೇಷಣೆ ಹಾಗೂ ಪರಿಹಾರದ ವಿವರಗಳಿರುವುದಿಲ್ಲ. ವ್ಯಕ್ತಿ-ವ್ಯಕ್ತಿಗಳ ಮಧ್ಯೆ, ವ್ಯಕ್ತಿ-ಸಮಾಜದ ಮಧ್ಯೆ ವಿಭಿನ್ನ ನೆಲೆಗಳಲ್ಲಿ ಬದುಕಿನ ಅನನ್ಯತೆಯನ್ನು ಕುರಿತು ಪ್ರಶ್ನಿಸುವುದು ಕಾದಂಬರಿಗಳ ಮುಖ್ಯ ಕಾಳಜಿಯಾಗಿರುತ್ತದೆ. ಬದುಕಿನ ಸಂಕೀರ್ಣತೆಯ ಮಧ್ಯೆ ವ್ಯಕ್ತಿಯ

ತೊಳಲಾಟ, ವ್ಯಕ್ತಿಯ ಮಾನಸಿಕ ಸಂಘರ್ಷಗಳೆಲ್ಲವೂ ಪದರು ಪದರುಗಳಾಗಿ ವಿವಿಧ ಸಾಂದರ್ಭಿಕ ನೆಲೆಗಳಲ್ಲಿ ಅನಾವರಣಗೊಳ್ಳುತ್ತವೆ.

ಹೀಗೆ ಮನೋವೈಜ್ಞಾನಿಕ ವಸ್ತು, ಮನೋವೈಜ್ಞಾನಿಕ ಅಂಶಗಳನ್ನು ಒಳಗೊಂಡ ಕಾದಂಬರಿಗಳ ಜೊತೆ ಜೊತೆಯಲ್ಲಿಯೇ ಗುರುತಿಸಬಹುದಾದ ಇನ್ನೊಂದು ಪ್ರಕಾರವೆಂದರೆ 'ಪ್ರಜ್ಞಾಪ್ರವಾಹ ತಂತ್ರ'ವನ್ನು ಒಳಗೊಂಡಿರುವ ಕಾದಂಬರಿಗಳು. ಪಾಶ್ಚಾತ್ಯರಲ್ಲಿ ಬೆಳೆದುಬಂದ ಈ ಪರಿಕಲ್ಪನೆಯನ್ನು ಕನ್ನಡ ಕಾದಂಬರಿಕಾರರೂ ಬಳಸಿಕೊಂಡಿದ್ದಾರೆ. ಇಲ್ಲಿರುವುದೂ ಮನಸ್ಸಿನ ಹರಿವೇ ಆಗಿದ್ದರೂ, ಇದು ಮನೋವೈಜ್ಞಾನಿಕ ಕಾದಂಬರಿಗಳಿಗಿಂತ ಸ್ವರೂಪದಲ್ಲಿ ಭಿನ್ನವಾಗಿದೆ.

ಇಲ್ಲಿ ಲೇಖಕನು ಬಾಹ್ಯ ಜಗತ್ತಿನ ವಾಸ್ತವಿಕ ಕ್ರಿಯೆಗಳಿಂದ ಹಿಂದೆಗೆದು, ಒಳಸರಿದು ತನ್ನ ಖಾಸಗಿ ಜಗತ್ತಿಗೆ/ಮನೋಲೋಕಕ್ಕೆ ಗಮನ ನೀಡುತ್ತಾನೆ. ಪ್ರಜ್ಞಾಪ್ರವಾಹ ತಂತ್ರ ಬಳಕೆಯಾದ ಕೃತಿಗಳಲ್ಲೂ ಮನಃಶಾಸ್ತ್ರೀಯ ಸಿದ್ಧಾಂತಗಳ ನೆರಳಿರುತ್ತದೆ. ಇಲ್ಲಿ ಮನುಷ್ಯನ ಪ್ರಜ್ಞೆಯ ಹರಿವಿನ ವಿವರಗಳ ಮೂಲಕ ಮಾನವನ ವಿಶ್ಲೇಷಣೆಯ ಪ್ರಯತ್ನವಿರುತ್ತದೆ. ತನ್ನ ಕಲ್ಪನಾಶಕ್ತಿಯನ್ನು ಬಳಸಿಕೊಂಡು ಲೇಖಕ ತಾನು ಸೃಷ್ಟಿಸುತ್ತಿರುವ ಪಾತ್ರದ ಪ್ರಜ್ಞೆಯಲ್ಲಿ ಲೀನವಾಗುವ ಬಯಕೆಯೇ ಪ್ರಜ್ಞಾಪ್ರವಾಹ ಕಾದಂಬರಿಯ ಸೃಷ್ಟಿಗೆ ಕಾರಣವಾಗಿದೆ. ಇಲ್ಲಿ ಪಾತ್ರದೊಂದಿಗೆ ತಾದಾತ್ಮ್ಯ ಹೊಂದುವುದು ಅನಿವಾರ್ಯವಾಗಿದೆ. ಪಾತ್ರದ ಅಂತರಂಗದ ವಿವರಗಳು ಇಲ್ಲಿ ಹೆಚ್ಚಾಗಿರುತ್ತದೆ.

ಒಟ್ಟಿನಲ್ಲಿ ಕಾದಂಬರಿಗಳೆಲ್ಲವು ಮನುಷ್ಯನ ವ್ಯಕ್ತಿತ್ವದ ಬಹುಮುಖ ಸಂಬಂಧಗಳನ್ನು ಹೇಳುತ್ತವೆ. ಕಾದಂಬರಿಗಳಲ್ಲಿ ಬೇರೆ ಬೇರೆ ರೀತಿ ಯೋಚಿಸುವ ಮತ್ತು ವರ್ತಿಸುವ ಪಾತ್ರಗಳು ಬರುತ್ತವೆ. ಹಾಗಾಗಿ ಎಲ್ಲ ಕಾದಂಬರಿಗಳಲ್ಲೂ ಮನಸ್ಸಿಗೆ ಸಂಬಂಧಿಸಿದ ವಿಷಯಗಳು ಬಂದೇ ಬರುತ್ತವೆ.

ಅಧ್ಯಾಯ ೩: 'ಕನ್ನಡ ಕಾದಂಬರಿಗಳಲ್ಲಿ ಅಂತಃಕೇಂದ್ರೀಯ ವ್ಯಕ್ತಿತ್ವದ ನೆಲೆಗಳು' ಈ ಅಧ್ಯಾಯದಲ್ಲಿ ಸಿಗ್ಮಂಡ್ ಫ್ರಾಯ್ಡ್, ಸಿ. ಜಿ. ಯೂಂಗ್ ಮೊದಲಾದವರ ವ್ಯಕ್ತಿ ಸಿದ್ಧಾಂತದ ಮಾದರಿಗಳನ್ನು, ಭಾರತೀಯರ ಕಲ್ಪನೆಯಲ್ಲಿ ವ್ಯಕ್ತಿತ್ವ ಎಂದರೇನು ಎಂಬುದನ್ನು ಗಮನಿಸಿ, ಫ್ರಾಯ್ಡ್‌ನ ಲೈಂಗಿಕವಾದ, ಕನಸುಗಳ ವಿಶ್ಲೇಷಣೆ, ಮಾನಸಿಕ ಆರೋಗ್ಯ ಮತ್ತು ರಕ್ಷಣಾತಂತ್ರಗಳನ್ನು ಕಾದಂಬರಿಯ ಪಾತ್ರಗಳಿಗೆ ಅನ್ವಯಿಸಿ ಅಧ್ಯಯನ ನಡೆಸಲಾಗಿದೆ.

ಒಂದು ಮಾಂಸದ ಮುದ್ದೆಯಾಗಿ ಜಗತ್ತಿಗೆ ಕಾಲಿಡುವ ಮಗು ಬೆಳೆದು ದೊಡ್ಡವನಾಗಿ ಜೀವಿಸಿರಲು ಅವಶ್ಯಕವಾದ ಸಕಲ ಕೌಶಲ, ಚಾತುರ್ಯಗಳನ್ನು ಇತರರನ್ನು ಅನುಕರಿಸುವುದರ ಮೂಲಕ ಕಲಿಯುತ್ತದೆ. ಈ ಕಾರ್ಯದಲ್ಲಿ ಅದು ಎಷ್ಟರಮಟ್ಟಿನ ಪರಿಪೂರ್ಣತೆಯನ್ನು ಸಾಧಿಸುತ್ತದೆ ಎನ್ನುವುದು ಹಲವಾರು ಅಂಶಗಳ ಮೇಲೆ ನಿರ್ಧಾರವಾಗುತ್ತದೆ. ವಂಶ ಪಾರಂಪರ್ಯವಾಗಿ

ತಲೆತಲಾಂತರದಿಂದ ಮಗುವಿಗೆ ಹರಿದು ಬರುವ ಗುಣ ಸಾಮರ್ಥ್ಯಗಳು, ಹುಟ್ಟಿದಾಗ ಅದರ ಶರೀರದ ಸ್ಥಿತಿ ನ್ಯೂನತೆಗಳು, ನಂತರ ದೊರೆಯುವ ಪೋಷಣೆ, ತಂದೆ-ತಾಯಿ ನೀಡುವ ಪ್ರೀತಿ, ಮಮತೆ, ಶಿಸ್ತು, ಶಿಕ್ಷಣ, ಪ್ರೋತ್ಸಾಹ, ಮಾರ್ಗದರ್ಶನ, ಮನೆ ಮತ್ತು ಸುತ್ತಮುತ್ತಲಿನ ವಾತಾವರಣ, ಸಮಾಜ, ಬರುವ ರೋಗ-ರುಜಿನಗಳು ಹೀಗೆ ಹಲವಾರು ಅಂಶಗಳು ವ್ಯಕ್ತಿಯ ವ್ಯಕ್ತಿತ್ವವನ್ನು ರೂಪಿಸುವುದರಲ್ಲಿ ತಮ್ಮ ಪ್ರಭಾವವನ್ನು ಬೀರುತ್ತವೆ.

ವ್ಯಕ್ತಿಯ ಬಾಲ್ಯದ ಅನುಭವಗಳು ಮುಂದಿನ ನಡೆನುಡಿಗಳ ಮೇಲೆ, ವ್ಯಕ್ತಿತ್ವದ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರುತ್ತವೆ. ಹರೆಯದಲ್ಲಿ ಅಥವಾ ದೊಡ್ಡವರಾದ ಮೇಲೆ ವ್ಯಕ್ತಿಯನ್ನು ಕಾಡುವ ಮಾನಸಿಕ ಅಸ್ವಸ್ಥತೆಗಳಿಗೆ ಬಾಲ್ಯದ ಅಹಿತ ಹಾಗೂ ಸಂತೋಷಕರವಲ್ಲದ ಅನುಭವಗಳು ಹಾಗೂ ತಂದೆ-ತಾಯಿ ಅಥವಾ ಪೋಷಕರು ಬೆಳೆಸಿದ ರೀತಿಯೇ ಕಾರಣಗಳೆಂದು ಸಿಗ್ಮಂಡ್ ಫ್ರಾಯ್ಡ್ ಮತ್ತು ಆತನ ಸಿದ್ಧಾಂತದಲ್ಲಿ ನಂಬಿಕೆ ಇಟ್ಟಿರುವ ಮನೋವಿಜ್ಞಾನಿಗಳು ಸಾಕ್ಷ್ಯಾಧಾರಗಳಿಂದ ನಿರೂಪಿಸಿ ವಿವರಿಸಿದ್ದಾರೆ.

ಎಲ್ಲರೂ ಮನುಷ್ಯರೇ. ಆದರೂ ಎಲ್ಲರ ನಡೆವಳಿಕೆಗಳು ಒಂದೇ ರೀತಿ ಇರುವುದಿಲ್ಲ. ಒಂದೇ ಮನೆಯ ಮಕ್ಕಳ ನಡೆವಳಿಕೆಗಳೂ ಬೇರೆ ಬೇರೆಯಾಗಿರುತ್ತವೆ. ಅದೇ ರೀತಿ ಎಲ್ಲರ ವ್ಯಕ್ತಿತ್ವಗಳು ಭಿನ್ನ. ಯಾವುದೇ ಇಬ್ಬರು ವ್ಯಕ್ತಿಗಳ ವ್ಯಕ್ತಿತ್ವ ಸಂಪೂರ್ಣವಾಗಿ ಒಂದೇ ರೀತಿ ಇರಲು ಸಾಧ್ಯವಿಲ್ಲ. ವ್ಯಕ್ತಿತ್ವ ರೂಪುಗೊಳ್ಳುವಿಕೆಯಲ್ಲಿ ಶಾರೀರಿಕ, ಮಾನಸಿಕ, ಸಾಮಾಜಿಕ-ಸಾಂಸ್ಕೃತಿಕ ಅಂಶಗಳ ಪ್ರಭಾವ ಪ್ರಮುಖವಾದುದು. ಈ ವ್ಯಕ್ತಿತ್ವ ಎನ್ನುವುದು ವ್ಯಕ್ತಿ ತನ್ನ ಹುಟ್ಟಿನಿಂದ ಮತ್ತು ಅನುಭವದಿಂದ ಪಡೆದಿರುವ ಎಲ್ಲಾ ಪ್ರವೃತ್ತಿಗಳ ಮೊತ್ತ; ವ್ಯಕ್ತಿಗತವಾದ ಲಕ್ಷಣಗಳೆಲ್ಲವೂ ಕೂಡಿಕೊಂಡಿರುವ ವೈಯಕ್ತಿಕ/ಮಾನಸಿಕ ಸ್ಥಿತಿ. ಇಲ್ಲಿ ಸಿಗ್ಮಂಡ್ ಫ್ರಾಯ್ಡ್, ಸಿ. ಜಿ. ಯೊಂಗ್, ಅಲ್‌ಫ್ರೆಡ್ ಆಡ್ಲರ್, ಎರಿಕ್ ಎರಿಕ್‌ಸನ್ ಅವರ ವ್ಯಕ್ತಿತ್ವ ಸಿದ್ಧಾಂತಗಳನ್ನು ಬಳಸಿಕೊಳ್ಳಲಾಗಿದೆ.

ಭಾರತದಲ್ಲಿ ಸಿಗುವ ಹಳೆಯ ಪುರಾಣ, ವೇದ, ಶಾಸ್ತ್ರ, ಆಯುರ್ವೇದ ಮತ್ತು ದಾರ್ಶನಿಕರ ಚಿಂತನೆಗಳಲ್ಲಿ ಮನಸ್ಸು, ದೇಹ, ಆರೋಗ್ಯ, ಚಿಕಿತ್ಸೆಗಳ ಬಗೆಗೆ ಅನೇಕ ಮಾಹಿತಿಗಳು ಸಿಗುತ್ತವೆ. ಆದರೆ ಪಾಶ್ಚಾತ್ಯ ದೇಶಗಳಲ್ಲಿ ಕಂಡು ಬರುವಂತೆ ವ್ಯವಸ್ಥಿತವಾಗಿ ಅಥವಾ ವ್ಯವಸ್ಥಿತ ಜ್ಞಾನಕ್ಷೇತ್ರವಾಗಿ, ‘ಮನೋವಿಜ್ಞಾನ’ ಎಂಬ ಶಾಖೆಯಾಗಿ ಎಲ್ಲಿಯೂ ಸಂಗ್ರಹವಾಗಿರುವುದು ಕಂಡು ಬರುವುದಿಲ್ಲ. ಆದರೆ ‘ಮನಸ್ಸು’ ಎಂಬ ಪದಕ್ಕೆ ಪರ್ಯಾಯವಾಗಿ ಚೇತನ, ಚಿತ್ತ, ಅಂತಃಕರಣ, ಅಂತರಿಂದ್ರಿಯ ಮೊದಲಾದ ಪದಗಳ ಬಳಕೆಯಾಗಿದೆ.

ಮಾನವನ ವ್ಯಕ್ತಿತ್ವವನ್ನು ಭಾರತೀಯ ಚಿಂತನೆಗಳು ಹಾಗೂ ಶಾಸ್ತ್ರಗಳಾದ ಯೋಗ, ಸಾಂಖ್ಯ, ವೇದಾಂತಗಳಲ್ಲಿ ವಿವರಿಸಿರುವುದನ್ನು ಕಾಣಬಹುದಾಗಿದೆ. ಭಾರತೀಯ ಶಾಸ್ತ್ರಗಳಲ್ಲಿ ಎಲ್ಲಿಯೂ ‘ವ್ಯಕ್ತಿತ್ವ’ ಎಂಬ ಪದ ಬಳಕೆಯಾಗಿಲ್ಲ. ಬದಲಾಗಿ ಮಾನವನ ವ್ಯಕ್ತಿತ್ವ ಮತ್ತು ಪ್ರಕೃತಿಯನ್ನು ವಿವರಿಸಲು

'ಸ್ವಭಾವ' ಎಂಬ ಪದವೇ ಬಳಕೆಯಾಗಿದೆ. 'ಸ್ವಭಾವ' ಎನ್ನುವುದು ಪ್ರತಿಯೊಬ್ಬರಲ್ಲಿಯೂ ಇರಲೇಬೇಕಾದ ಅತ್ಯವಶ್ಯಕವಾದ ಗುಣವಾಗಿದೆ. ಇದು ಮನಸ್ಸಿನ ಸಾರಭೂತವಾದ ಗುಣಧರ್ಮವಾಗಿದೆ.

ಹಿಂದೂ ಶಾಸ್ತ್ರಗಳ ಪ್ರಕಾರ ಈ ಭೂಮಿಯಲ್ಲಿರುವ ಪ್ರತಿಯೊಂದು ವಸ್ತುವೂ ಮೂರು ಗುಣಗಳನ್ನು ಹೊಂದಿರುತ್ತದೆ. ಅವುಗಳೇ ಸಾತ್ತ್ವಿಕ, ರಾಜಸ ಮತ್ತು ತಾಮಸ ಗುಣಗಳು. ಈ ತ್ರಿಗುಣಗಳು ವ್ಯಕ್ತಿಯ ಮನಸ್ಸಿನ ರಚನೆ ಅಥವಾ ವ್ಯಕ್ತಿತ್ವದ ರಚನೆಯಲ್ಲಿ ಸಹಜವಾದವುಗಳು. ಆದರೆ ಇರುವ ಪ್ರಮಾಣ ಭಿನ್ನತೆಯ ಪರಿಣಾಮ ವ್ಯಕ್ತಿತ್ವದಲ್ಲೂ ಭಿನ್ನತೆ ಗೋಚರಿಸುತ್ತದೆ; ಅಂದರೆ ಯಾರೂ ಸಹ ಜೀವನದಲ್ಲಿ ಒಂದೇ ಗುಣದಲ್ಲಿ ಇರಲು ಸಾಧ್ಯವಿಲ್ಲ. ಒಂದು ಗುಣ ಅಧಿಕವಾಗಿದ್ದರೆ ಮತ್ತೊಂದು ಗುಣ ಮರೆಯಾಗಿರುವುದು. ಅದು ಸಮಯ, ಸಂದರ್ಭಾನುಸಾರ ವ್ಯಕ್ತಿಯ ಪ್ರಾಪಂಚಿಕ ವ್ಯವಹಾರಗಳ ಮೂಲಕ ಪ್ರಕಟವಾಗುತ್ತದೆ. ಗುಣಗಳು ಚಲನಾತ್ಮಕತೆ ಹಾಗೂ ಜ್ಞಾನದಿಂದ, ಆತ್ಮನಿರೀಕ್ಷೆಯ ಮೂಲಕ ಹಾಗೂ ಸ್ವಧರ್ಮದ ಅರಿವಿನಿಂದ ಬದಲಾಗುತ್ತವೆ; ವ್ಯಕ್ತಿಯ ಕ್ರಿಯೆ, ಸಂತೋಷ ಮತ್ತು ನೆಮ್ಮದಿಯ ಮೇಲೆ ಪ್ರಭಾವವನ್ನು ಬೀರುತ್ತವೆ.

ಕನಸು ಪ್ರತಿಯೊಬ್ಬರೂ ಅನುಭವಿಸುವ ಮಾನಸಿಕ ಪ್ರಕ್ರಿಯೆ. ಇದೊಂದು ಜೀವಂತ ಅನುಭವ. ಏಕೆಂದರೆ ಅದು ನಡೆಯುವಾಗ ನಿಜವೆನ್ನಿಸುತ್ತದೆ. ವ್ಯಕ್ತಿಯು ಸೂಕ್ತ ರೀತಿಯಲ್ಲಿ ಪ್ರತಿಕ್ರಿಯಿಸುತ್ತಾನೆ ಹಾಗೂ ಭಾವೋದ್ವೇಗಗಳನ್ನು ಪ್ರಕಟಿಸುತ್ತಾನೆ. ಮನುಷ್ಯರಷ್ಟೇ ಅಲ್ಲ; ಪ್ರಾಣಿಗಳೂ ಕೂಡ ಕನಸು ಕಾಣುತ್ತವೆಂದು ಸ್ವಪ್ನಶಾಸ್ತ್ರ ಹೇಳುತ್ತದೆ. ಜನರಲ್ಲಿ ಕನಸಿನ ಬಗೆಗಿನ ಆಸಕ್ತಿ ಬಹಳ ಹಳೆಯದು. ಮಾನವ ಇತಿಹಾಸ ಆರಂಭವಾದಾಗಿನಿಂದಲೂ ಕನಸು ಕಾಣುವ ವಿಚಾರ ಅಸಂಖ್ಯಾತ ನಂಬಿಕೆ, ಕಲ್ಪನೆ, ಭಯವನ್ನು ಹುಟ್ಟುಹಾಕಿದೆ. ಸುಮಾರು ಏಳೆಂಟು ಸಾವಿರ ವರ್ಷಗಳಿಂದಲೂ ಜನರು ಕನಸುಗಳನ್ನು ಕುರಿತು ಆಳವಾಗಿ ಯೋಚಿಸುತ್ತಿದ್ದಾರೆ. ಕಂಡ ಕನಸುಗಳ ಅರ್ಥವನ್ನು ಬಿಡಿಸುವ ಪರಿಪಾಠವು ಇಂದು ನಿನ್ನೆಯದಲ್ಲ. ವೇದ, ಪುರಾಣಗಳ ಕಾಲದಿಂದಲೂ ರಾಜ ಮಹಾರಾಜರು ಕಂಡ ಕನಸುಗಳ ಅರ್ಥ ವಿವರಣೆ ನೀಡಿರುವುದನ್ನು ಗಮನಿಸಬಹುದಾಗಿದೆ. ಕನಸಿನ ವೈಜ್ಞಾನಿಕ ಅಧ್ಯಯನ ಸಿಗ್ಮಂಡ್ ಫ್ರಾಯ್ಡ್‌ನಿಂದ ೧೯೦೦ರಲ್ಲಿ ಪ್ರಾರಂಭವಾಯಿತು. ಇದು ಈ ಕ್ಷೇತ್ರದಲ್ಲಿನ ಒಂದು ಮೈಲಿಗಲ್ಲು. ಆದರೆ ಜೀವವಿಜ್ಞಾನಿಗಳ ಸಂಶೋಧನೆಗಳ ಪರಿಣಾಮ ಕನಸುಗಳ ದೈಹಿಕ ಹಿನ್ನೆಲೆಯನ್ನು ಗಮನಿಸುವಂತಾದರೂ ಕನಸಿನ ವಿವರಗಳು ಇನ್ನೂ ಅಸ್ಪಷ್ಟ.

ಫ್ರಾಯ್ಡ್‌ನಿಗಿಂತಲೂ ಮೊದಲು ಅನೇಕ ತತ್ತ್ವಶಾಸ್ತ್ರಜ್ಞರು ಕನಸುಗಳನ್ನು ವಿವರಿಸಲು ಪ್ರಯತ್ನಿಸಿದ್ದಾರೆ. ಈತನ ನಂತರ ಬಂದ ಅನೇಕ ಮನೋವಿಜ್ಞಾನಿಗಳೂ ಕನಸನ್ನು ಶೋಧಿಸಿದ್ದಾರೆ. ಆದರೆ ಯಾವುದೂ ಫ್ರಾಯ್ಡ್‌ನ ವಿಶ್ಲೇಷಣೆಯಷ್ಟು ಆಕರ್ಷಣೆಯನ್ನು ಉಳಿಸಿಕೊಂಡಿಲ್ಲ. ಆದುದರಿಂದ

ಕನಸುಗಳ ವಿಶ್ಲೇಷಣೆಯು ಮುಖ್ಯ ಭೂಮಿಕೆಯಲ್ಲಿ ಫ್ರಾಯ್ಡ್‌ನ ಮನೋವಿಶ್ಲೇಷಣಾ ಸಿದ್ಧಾಂತವನ್ನು ಆಧರಿಸಿದೆ.

ಫ್ರಾಯ್ಡ್‌ನ ಪ್ರಕಾರ ಕನಸಿನಲ್ಲಿ ಕಾಣುವ ಪ್ರತಿಯೊಂದು ವಸ್ತು, ವ್ಯಕ್ತಿ ಮತ್ತು ಸನ್ನಿವೇಶಗಳು ತಮ್ಮದೇ ಆದಂತಹ ಸಾಂಕೇತಿಕ ಅರ್ಥವನ್ನು ಹೊಂದಿರುತ್ತವೆ. ನಿರೋಧಿತ ಇಚ್ಛೆಗಳನ್ನು ಮಾರುವೇಷದ ಮೂಲಕ ಪ್ರಕಟಿಸುವುದೇ ಕನಸು. ಇಲ್ಲಿ ಹೊರನೋಟಕ್ಕೆ ಎಲ್ಲವೂ ಸೊಗಸಾಗಿ ಕಂಡರೂ ಮನಸ್ಸಿನ ತೊಳಲಾಟ ಯಾರಿಗೂ ಗೋಚರವಾಗುವುದಿಲ್ಲ. ಕನಸಿನ ಸಂಪೂರ್ಣ ಮತ್ತು ನಿಖರವಾದ ವಿವರಗಳನ್ನು ಹಾಗೂ ಕನಸಿನಲ್ಲಿ ಬರುವ ಸನ್ನಿವೇಶಗಳು ಮತ್ತು ಕನಸು ಕಂಡವರ ಸ್ಥಿತಿಗತಿ ಮತ್ತು ಪರಿಸ್ಥಿತಿಗಳನ್ನು ಕೂಲಂಕಷವಾಗಿ ಪರೀಕ್ಷಿಸಿದ ನಂತರವೇ ಕನಸನ್ನು ವಿಶ್ಲೇಷಿಸಿ, ಕನಸಿನ ಹಿಂದಿನ ನಿಜವಾದ ಅರ್ಥ ಹಾಗೂ ಉದ್ದೇಶವನ್ನು ಅರ್ಥೈಸಿಕೊಳ್ಳಬೇಕಾಗಿದೆ. ಒಂದೇ ರೀತಿಯ ಕನಸು ಕೂಡ ಲಿಂಗ ಹಾಗೂ ವ್ಯಕ್ತಿಗಳನ್ನು ಆಧರಿಸಿ ಬೇರೆ ಬೇರೆ ಅರ್ಥವನ್ನು ನೀಡುತ್ತದೆ. ಆದುದರಿಂದ ಕನಸು ಕಂಡವರ ಬಗೆಗಿನ ಪ್ರಾಥಮಿಕ ಮಾಹಿತಿಯು ಕನಸಿನ ವಿಶ್ಲೇಷಣೆಯಲ್ಲಿ ಅತೀ ಅಗತ್ಯ. ಎಷ್ಟೋ ಕನಸುಗಳಿಗೆ ಏನೂ ಅರ್ಥವಿಲ್ಲದಿರುವ ಸಾಧ್ಯತೆಯೂ ಇದೆ.

ಕನಸಿನ ವಿಶ್ಲೇಷಣೆಯ ಮೂಲಕ ವ್ಯಕ್ತಿಯ ಮನೋವ್ಯಾಪಾರವನ್ನು ಅರಿಯಬಹುದಾಗಿದೆ. ಕನಸುಗಳನ್ನು ಕಂಡ ಕನಸಿನಂತೆ ನೇರವಾಗಿ, ಕನಸಿಗೆ ವಿರುದ್ಧವಾಗಿ, ಕನಸು ಕಂಡ ವ್ಯಕ್ತಿಯ ಜೀವನದ ಆಂತರಿಕ ಹಾಗೂ ಬಾಹ್ಯ ವಿವರಗಳನ್ನು ಆಧರಿಸಿ, ವ್ಯಕ್ತಿಯ ಧಾರ್ಮಿಕ, ದೈಹಿಕ ಸ್ವಾಸ್ಥ್ಯವನ್ನು ಆಧರಿಸಿಯೂ ವಿಶ್ಲೇಷಿಸಬಹುದು. ಕನಸು ಬಯಕೆಯ ಪ್ರತಿಬಿಂಬವಾದುದರಿಂದ ಕನಸಿನ ವಿಶ್ಲೇಷಣೆ ಸುಪ್ತಮನಸ್ಸಿನ ಚಟುವಟಿಕೆಗಳನ್ನು ಅರಿಯುವ ಒಂದು ಮಾರ್ಗವೂ ಹೌದು.

ಸಾಹಿತ್ಯದಲ್ಲಿ ಪೂರ್ವದ ಘಟನೆಗಳನ್ನು ಹೇಳಲು, ನೆನಪುಗಳ ಸಂದರ್ಭ, ಪ್ರೀತಿ, ಪ್ರೇಮ, ಪ್ರಣಯ, ಬಹುಕಾಲದ ತೀವ್ರತರ ಬಯಕೆ, ಭವಿಷ್ಯದ ಬಗೆಗಿನ ಅತಿಯಾದ ನಿರೀಕ್ಷೆಯ ಸಂದರ್ಭಗಳಲ್ಲಿ ಸಾಹಿತಿಗಳು ಕನಸನ್ನು ಬಳಸುತ್ತಾರೆ. ಸಾಹಿತ್ಯದಲ್ಲಿ ಕನಸಿನ ಬಳಕೆ ಹಲವು ವಿನ್ಯಾಸಗಳನ್ನು ಪಡೆದಿದ್ದರೂ ಹೆಚ್ಚಾಗಿ ನಿರೂಪಣಾ ತಂತ್ರವಾಗಿ ಬಳಕೆಯಾಗುತ್ತದೆ. ಸಾಹಿತ್ಯದಲ್ಲಿ ಚಿತ್ರಿಸಲಾದ ಕನಸುಗಳನ್ನು ಅವಲೋಕಿಸಿದಾಗ ಕನಸು ಮುಖ್ಯವಾಗಿ ಎರಡು ರೀತಿಯಲ್ಲಿ ಕಂಡುಬರುತ್ತದೆ:

(೧) ಜಾಗೃತ ಚಿತ್ತದಲ್ಲಿ ಮೂಡಬಲ್ಲ ಭವಿಷ್ಯದ ಚಿತ್ರ

(೨) ನಿದ್ರಾವಸ್ಥೆಯಲ್ಲಿ ಜಾಗೃತಗೊಳ್ಳುವ ಸ್ವಪ್ನಪ್ರಪಂಚ

ಇಲ್ಲಿ ಕುವೆಂಪು ಅವರ 'ಕಾನೂರು ಹೆಗ್ಗಡತಿ', 'ಮಲೆಗಳಲ್ಲಿ ಮದುಮಗಳು', ದೇವುಡು ಅವರ 'ಅಂತರಂಗ', ತ್ರಿವೇಣಿ ಅವರ 'ಬೆಕ್ಕಿನ ಕಣ್ಣು', 'ಮುಚ್ಚಿದ ಬಾಗಿಲು', ಕುಸುಮಾಕರ ದೇವರಗಣ್ಣೂರ ಅವರ 'ನಾಲ್ಕನೆಯ ಆಯಾಮ', ಚದುರಂಗರ 'ಉಯ್ಯಾಲೆ', 'ವೈಶಾಖ', ಎಸ್.

ಎಲ್. ಭೈರಪ್ಪ ಅವರ 'ನೆಲೆ', 'ವಂಶವೃಕ್ಷ', 'ಉತ್ತರಕಾಂಡ', ಸಹನಾ ವಿಜಯಕುಮಾರ್ ಅವರ 'ಕ್ಷಮೆ', ಕೆ. ಶಿವರಾಮ ಕಾರಂತರ 'ಚೋಮನ ದುಡಿ', 'ಮೈಮನಗಳ ಸುಳಿಯಲ್ಲಿ', 'ಮೂಕಜ್ಜಿಯ ಕನಸುಗಳು' ಹಾಗೂ ಶ್ರೀಕೃಷ್ಣ ಆಲನಹಳ್ಳಿ ಅವರ 'ಪರಸಂಗದ ಗೆಂಡೆತಿಮ್ಮ' ಕಾದಂಬರಿಗಳಲ್ಲಿ ಕಂಡುಬರುವ ಕನಸುಗಳನ್ನು ವಿಶ್ಲೇಷಿಸಲಾಗಿದೆ.

ಕುವೆಂಪು ಅವರ 'ಕಾನೂರು ಹೆಗ್ಗಡತಿ' ಮತ್ತು 'ಮಲೆಗಳಲ್ಲಿ ಮದುಮಗಳು' ಈ ಎರಡೂ ಕಾದಂಬರಿಗಳಲ್ಲಿ ಕನಸುಗಳು ಹೇರಳವಾಗಿವೆ. ಅದರಲ್ಲೂ ಕುವೆಂಪು ಅವರು ಮನಃಶ್ಶಾಸ್ತ್ರೀಯ ತತ್ತ್ವಗಳನ್ನು ಆಧರಿಸಿ ಕನಸುಗಳನ್ನು ಹೆಣೆದಿರುವುದನ್ನು ಅವುಗಳ ವಿಶ್ಲೇಷಣೆಯ ಮೂಲಕ ಗುರುತಿಸಬಹುದಾಗಿದೆ. ಇಲ್ಲಿನ ಕನಸುಗಳು ಮನೋವಿಜ್ಞಾನ ಮತ್ತು ಭಾರತೀಯ ತತ್ತ್ವಶಾಸ್ತ್ರದ ಪ್ರಭಾವದಿಂದ ರೂಪುಗೊಂಡಿವೆ.

'ನಾಲ್ಕನೆಯ ಆಯಾಮ' ಕನ್ನಡ ಕಾದಂಬರಿಗಳಲ್ಲಿಯೇ ವಿಶಿಷ್ಟವಾದ ಕೃತಿ. ಕಿಶೋರಾವಸ್ಥೆಯ ಕಾಮನೆಗಳು, ಭಯಭೀತಿಗಳು, ಸಂತಸ–ಹತಾಶೆಗಳು ಇವೆಲ್ಲವನ್ನೂ ಚಿತ್ರಿಸುವ ಈ ಕೃತಿಯ ಕೇಂದ್ರಪಾತ್ರಕ್ಕೆ ಹೆಸರಿಲ್ಲ. ಮುಖ್ಯಪಾತ್ರದ ಸುಪ್ತಚಿತ್ತದಲ್ಲಿ ಅಡಗಿರಬಹುದಾದ ಭೀತಿ–ಕಾಮನೆಗಳನ್ನು ಓದುಗರಿಗೆ ತಲುಪಿಸಲು ಇಲ್ಲಿ ದೀರ್ಘ ಸ್ವಪ್ನಗಳು ಬಳಕೆಯಾಗಿವೆ. ವಾಸ್ತವದ ಒಂದೊಂದು ಪ್ರಚೋದನೆಯೂ ನಾಯಕನ ಒಂದೊಂದು ಸ್ಮೃತಿಚಿತ್ರಕ್ಕೆ ದಾರಿ ಮಾಡಿಕೊಡುತ್ತದೆ. ಕಾದಂಬರಿಯುದ್ದಕ್ಕೂ ಹದಿಹರೆಯದ(ಅಡೋಲೆಸೆಂಟ್) ಸಮಸ್ಯೆಯ ವಿಶ್ಲೇಷಣೆಯಿದೆ. ಕಥಾನಾಯಕನ ದೇಹದ ಬೆಳವಣಿಗೆಯೊಂದಿಗೆ ಸುಪ್ತಮನಸ್ಸಿನಲ್ಲಿ ಲೈಂಗಿಕತೆಯೂ ಮೂಡಿದೆ. ಆದರೆ ಅಹಂನ(ಈಗೋ) ಬೆಳವಣಿಗೆಯ ಕೊರತೆ ಸಮಾಜದಲ್ಲಿ ಆತನ ಹೊಂದಾಣಿಕೆಯನ್ನು ಸಮಸ್ಯಾತ್ಮಕವಾಗಿಸಿದೆ. ಲೈಂಗಿಕ ಆಸೆ, ಆಕಾಂಕ್ಷೆಗಳ ಆರೋಗ್ಯಕರ ಅಭಿವ್ಯಕ್ತಿಗಳಿಗೆ ಸಮಾಜದಲ್ಲಿ ಅವಕಾಶವಿಲ್ಲ. ತಾರುಣ್ಯದ ಉತ್ಸಾಹ ಕನಸುಗಳ ಸಾಫಲ್ಯಕ್ಕೂ ಕುಟುಂಬದಲ್ಲಾಗಲೀ ಸಮಾಜದಲ್ಲಾಗಲೀ ಉತ್ತಮ ಪ್ರತಿಕ್ರಿಯೆಗಳಿಲ್ಲ; ಸ್ಪಂದನೆಯ ಅವಕಾಶಗಳೂ ಇಲ್ಲ. ಹೀಗಾಗಿ ನಾಯಕನಲ್ಲಿ ವಿರೋಧಾಭಾಸ, ವಿಕ್ಷಿಪ್ತತೆ, ಗೊಂದಲ, ಕೀಳರಿಮೆಗಳು ಮೂಡಿ, ಅವನ ಅಂತಃಸ್ಥಿತಿಯು ಕನಸಿನ ಮೂಲಕ ಸಾಂಕೇತಿಕ ನಿರೂಪಣೆಯಾಗಿ ಇಲ್ಲಿ ಕಾಣಿಸಿದೆ.

ಮೂಕಜ್ಜಿ ಕಾಣುವ ಕನಸುಗಳು ಆಕೆಯ ಬದುಕಿನ ಭೂತದ ಸಹಜ ಆಸೆಗಳ ಕಾಡುವಿಕೆಯ ಪರಿಣಾಮಗಳಾಗಿ ಕಂಡರೂ ಅವು ವರ್ತಮಾನದ ವ್ಯಾಖ್ಯೆಗಳಾಗಿಯೂ ಒಡಮೂಡುತ್ತವೆ. ಭೂತ–ವರ್ತಮಾನಗಳನ್ನು ತನ್ನ ವೈಯಕ್ತಿಕ ಅನುಭವಗಳ ಮೂಲಕ ಶೋಧಿಸಲು ಪ್ರಯತ್ನಿಸುವ ಮೂಕಜ್ಜಿ, ಮನುಷ್ಯನ ಲೈಂಗಿಕ ಜೀವನದ ಅನೇಕ ಮುಖಗಳನ್ನು ತನ್ನ ಕನಸುಗಳ ಮೂಲಕ ವ್ಯಕ್ತಪಡಿಸುತ್ತಾಳೆ.

ಕನ್ನಡ ಕಾದಂಬರಿಗಳಲ್ಲಿ ಕಂಡುಬರುವ ಕನಸುಗಳನ್ನು ಮನೋವೈಜ್ಞಾನಿಕವಾಗಿ ವಿಶ್ಲೇಷಿಸಿದಾಗ ಅವು ಹೆಚ್ಚಾಗಿ ಪಾತ್ರಗಳ ಮನದ ಬಯಕೆಯನ್ನು ಸೂಚಿಸಲು, ಅದುಮಿಟ್ಟ

ಭಾವನೆಗಳನ್ನು ವ್ಯಕ್ತಪಡಿಸಲು, ಮನದ ತಾಕಲಾಟ, ಚಿಂತೆ, ನೋವು, ಭಯಗಳನ್ನು ತಿಳಿಸುವ ಸಲುವಾಗಿ ಬಳಕೆಯಾಗಿರುವುದನ್ನು ಕಾಣಬಹುದು. ಇಲ್ಲಿ ಬದುಕಿನಲ್ಲಿ ನಡೆದ ಘಟನೆಗಳು ಕನಸಿಗೆ ಪೂರಕವಾಗಿ ಪ್ರೇರಣೆಯಾಗಿರುವುದನ್ನೂ ಗಮನಿಸಬಹುದು.

ವ್ಯಕ್ತಿಯ ದ್ವೇಷ, ಸಿಟ್ಟು, ಬೇಸರ, ಕೋಪ ಪ್ರತಿಯೊಂದಕ್ಕೂ ಒಂದೊಂದು ಕಾರಣವಿದ್ದೇ ಇರುತ್ತದೆ. ಅತ್ಯಂತ ಇಕ್ಕಟ್ಟಿನ ಸಂದರ್ಭದಲ್ಲಿ ಮಾನವನಿಗೆ ಯಾವುದನ್ನು ಅನುಸರಿಸಬೇಕೆಂದು ತಿಳಿಯದಿದ್ದಾಗ ಅವನ ಮನಸ್ಸು ಸ್ವಾಭಾವಿಕವಾಗಿಯೇ ಯಾವುದಾದರೊಂದು ನಿರ್ಧಾರಕ್ಕೆ ಬರುವುದು – ಅದರಲ್ಲೂ ತನಗೆ ಸದ್ಯಕ್ಕೆ ಯಾವುದು ಅಗತ್ಯವೋ ಹಿತವೋ ಅದರೆಡೆಗೆ ಹೆಚ್ಚಿಗೆ ಹರಿಯುವುದು. ಆಗ ಅದಕ್ಕೆ ಸಾಧಕ–ಬಾಧಕ ವಿಚಾರವಿರುವುದಿಲ್ಲ. ತಾನೆಣಿಸಿದಂತೆಯೇ ಮುಂದಿನದೆಲ್ಲ ಆಗುವುದೆಂದು ಭಾವಿಸುವುದು. ಅಂದರೆ ವ್ಯಕ್ತಿಯ ಪ್ರತಿಯೊಂದು ವರ್ತನೆಗಳ ಹಿಂದೆ ಮಾನಸಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಕಾರಣಗಳಿರುತ್ತವೆ. ಇವೆಲ್ಲವನ್ನೂ ಗ್ರಹಿಸಿ ಅದಕ್ಕೊಂದು ಸಮಗ್ರತೆ ನೀಡಿ ಮುನ್ನಡೆವಲ್ಲಿ ಮಾನಸಿಕ ಅಂಶಗಳ ಪ್ರಭಾವ ಪ್ರಮುಖವಾದುದು. ವ್ಯಕ್ತಿಯು ಮಾನಸಿಕ ಘರ್ಷಣೆ, ಆಶಾಭಂಗದ ಋಣಾತ್ಮಕತೆಯಿಂದ ರಕ್ಷಿಸಲು/ತಪ್ಪಿಸಿಕೊಳ್ಳಲು ಬಳಸುವ ಸಾಮಾನ್ಯ ವಿಧಾನಗಳೇ ರಕ್ಷಣಾತಂತ್ರಗಳು. ಇವು ಉದ್ವೇಗ/ಉದ್ವಿಗ್ನತೆಯನ್ನು ಕಡಿಮೆ ಮಾಡಿ ಅಹಂ ಅನ್ನು ರಕ್ಷಿಸಿಕೊಳ್ಳಲು, ಮಾನಸಿಕ ಸಮತೋಲನವನ್ನು ಕಾಯ್ದುಕೊಳ್ಳಲು ಸಹಕರಿಸುತ್ತವೆ. ಹೆಚ್ಚಿನವು ಅಪ್ರಜ್ಞಾಪೂರ್ವಕವಾದುವುಗಳು. ಅದನ್ನು ಅತಿಯಾಗಿ ಪದೇ ಪದೇ ಅನುಸರಿಸಿದಾಗ ವ್ಯಕ್ತಿ ವಾಸ್ತವಿಕತೆಯಿಂದ ದೂರ ಸರಿದು ಮನೋರೋಗಿಯಾಗುವ ಸಾಧ್ಯತೆ ಇರುತ್ತದೆ. ಉದ್ವಿಗ್ನತೆಯಿಂದ ಹೊರಬರಲು ಅಹಂ ರಕ್ಷಣಾತಂತ್ರಗಳ ಮೊರೆ ಹೋಗಿಯೂ ಸಾಧ್ಯವಾಗದೇ ಹೋದಲ್ಲಿ ವ್ಯಕ್ತಿಯು ಧೂಮಪಾನ, ಮದ್ಯಪಾನ, ಔಷಧಗಳ ಸೇವನೆಯಂಥ ಅಹಿತಕರ ಅಭ್ಯಾಸಗಳನ್ನು ಬೆಳೆಸಿಕೊಳ್ಳುತ್ತಾನೆ.

ಕನ್ನಡ ಕಾದಂಬರಿಗಳನ್ನು ಅವಲೋಕಿಸಿದಾಗ ರಕ್ಷಣಾತಂತ್ರಗಳನ್ನು ಪೂರ್ಣವಾಗಿ ಹೊಂದಿರುವ ಕಾದಂಬರಿಗಳನ್ನು ಗುರುತಿಸಿಕೊಳ್ಳುವುದು ಬಹಳ ಕಷ್ಟ. ಆದರೆ ಕಾದಂಬರಿಯ ಒಳಗೆ ಅಲ್ಲಲ್ಲಿ ಇಂತಹ ಪ್ರತಿಕ್ರಿಯಾ ಕ್ರಮಗಳನ್ನು ಬಳಸಿಕೊಂಡ ಉದಾಹರಣೆಗಳನ್ನು ಗುರುತಿಸಬಹುದಾಗಿದೆ. ಆದುದರಿಂದ ಕಾದಂಬರಿಗಳಲ್ಲಿ ಕಂಡುಬರುವ ಅಂತಹ ಸನ್ನಿವೇಶಗಳನ್ನು ಆಯ್ದುಕೊಂಡು ಆ ಸನ್ನಿವೇಶಗಳನ್ನು ವಿಶ್ಲೇಷಣೆಗೊಳಪಡಿಸುವ ಮೂಲಕ ಈ ತಂತ್ರಗಳನ್ನು ವಿಶ್ಲೇಷಿಸಲಾಗಿದೆ.

ಇಲ್ಲಿ 'ಚೋಮನ ದುಡಿ', 'ಮರಳಿ ಮಣ್ಣಿಗೆ', 'ಮೈಮನಗಳ ಸುಳಿಯಲ್ಲಿ'(ಕೆ. ಶಿವರಾಮ ಕಾರಂತ), 'ಶಿಕಾರಿ'(ಯಶವಂತ ಚಿತ್ತಾಲ), 'ಶರಪಂಜರ', 'ತಾವರೆಯ ಕೊಳ', 'ಬೆಕ್ಕಿನ ಕಣ್ಣು', 'ಮುಚ್ಚಿದ ಬಾಗಿಲು'(ತ್ರಿವೇಣಿ), 'ಚಿತ್ತಚಂದನ'(ಸಿ. ಎನ್. ಮುಕ್ತಾ), 'ಮುಕ್ತಿ'(ಶಾಂತಿನಾಥ ದೇಸಾಯಿ), 'ದೂರ ಸರಿದರು, 'ತಬ್ಬಲಿಯು ನೀನಾದೆ ಮಗನೆ', 'ಧರ್ಮಶ್ರೀ'(ಎಸ್. ಎಲ್. ಭೈರಪ್ಪ), 'ಎಡಕಲ್ಲು

ಗುಡ್ಡದ ಮೇಲೆ'(ಭಾರತೀಸುತ), 'ಭವ'(ಯು. ಆರ್. ಅನಂತಮೂರ್ತಿ), 'ಕಶೀರ'(ಸಹನಾ ವಿಜಯಕುಮಾರ್), 'ಕಾನೂರು ಹೆಗ್ಗಡತಿ', 'ಮಲೆಗಳಲ್ಲಿ ಮದುಮಗಳು'(ಕುವೆಂಪು), 'ಸೂರ್ಯ'(ಬರಗೂರು ರಾಮಚಂದ್ರಪ್ಪ), 'ಸಿಂಗಾರೆವ್ವ ಮತ್ತು ಅರಮನೆ'(ಚಂದ್ರಶೇಖರ ಕಂಬಾರ) ಕಾದಂಬರಿಗಳನ್ನು ರಕ್ಷಣಾತಂತ್ರದ ವಿಶ್ಲೇಷಣೆಗೆ ಬಳಸಿಕೊಳ್ಳಲಾಗಿದೆ.

ಚೋಮನ ಸಾಮಾಜಿಕ ಜೀವನದ ನೈಜ ಚಿತ್ರಣವನ್ನು, ಜೀವನದ ಕಟು ವಾಸ್ತವವನ್ನು, ಮಾನಸಿಕವಾಗಿ ಆತನು ನಡೆಸುವ ಹೋರಾಟವನ್ನು ತೆರೆದಿಡುವ **'ಚೋಮನ ದುಡಿ'**ಯ 'ದುಡಿ' ಕೇವಲ ಸಾಂಕೇತಿಕ ಸಾಧನವಾಗಿ ಮಾತ್ರ ಉಳಿಯದೆ ಚೋಮನ ಎಲ್ಲಾ ಭಾವತುಮುಲಗಳನ್ನು, ಹೃದಯ ಮುಟ್ಟುವ ವೇದನೆಯ ಅರಿವನ್ನು ಹೊರಹೊಮ್ಮಿಸುವ ಮಾನಸಿಕ ರಕ್ಷಣಾವಿಧಾನಗಳಲ್ಲಿ ಒಂದಾದ 'ಪಲ್ಲಟ'ವಾಗಿಯೂ ಸ್ಥಾನವನ್ನು ಪಡೆಯುತ್ತದೆ.

ಮನೋವಿಜ್ಞಾನಿಗಳ ಪ್ರಕಾರ ರಕ್ಷಣಾತಂತ್ರಗಳ ಬಳಕೆ ಒಂದು ಮಿತಿಯಲ್ಲಿದ್ದಾಗ ವ್ಯಕ್ತಿಯು ಮಾನಸಿಕ ತುಮುಲಗಳಿಂದ ಹೊರಬಂದು ಸಮತೋಲನವನ್ನು ಕಾಯ್ದುಕೊಳ್ಳಲು ಸಹಕಾರಿ. ಆದರೆ ಇವುಗಳ ಮಿತಿಮೀರಿದ ಬಳಕೆ ವ್ಯಕ್ತಿಯಲ್ಲಿ ಮಾನಸಿಕ ಅಸ್ವಸ್ಥತೆಯನ್ನು ಉಂಟುಮಾಡುತ್ತದೆ. ತ್ರಿವೇಣಿ ಅವರ **'ಬೆಕ್ಕಿನ ಕಣ್ಣು'** ಕಾದಂಬರಿಯು ಕಿಶೋರಾವಸ್ಥೆಯ ಕುಸುಮಾ 'ಸ್ಥಾನಾಂತರ'ವೆಂಬ ರಕ್ಷಣಾತಂತ್ರವನ್ನು ಮಿತಿಮೀರಿ ಬಳಸಿದ ಪರಿಣಾಮವಾಗಿ ಮಾನಸಿಕ ವಿಕಲ್ಪಕ್ಕೆ ಒಳಗಾಗುವುದನ್ನೂ, ಅದರಿಂದಾಗಿ ನರಳುವುದನ್ನೂ ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ.

ಹತಾಶೆಯ, ಒತ್ತಡದ ಮೂಲಗಳು ಮಾನವನಿಗೆ ಅನೇಕ. ಮಾನಸಿಕ ಸಂಘರ್ಷಗಳಿಗೆ, ಆಶಾಭಂಗಗಳಿಗೆ, ಕೀಳರಿಮೆಯ ಭಾವಗಳಿಗೆ ಒಳ್ಳೆಯ ಪರಿಹಾರಗಳು ಸದಾ ದೊರೆಯುವುದಿಲ್ಲ. ದೈಹಿಕ, ಮಾನಸಿಕ ಹಾಗೂ ಪರಿಸರದ ಒತ್ತಡ ಈ ಮೊದಲಾದ ಕಾರಣಗಳಿಂದ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಸಾಧ್ಯವಾಗದೇ ಹೋದಾಗ ವ್ಯಕ್ತಿಯು ನಿರಂತರ ಉದ್ವಿಗ್ನತೆಯಿಂದ ಪರಿಸರಕ್ಕೆ ಹೊಂದಿಕೊಳ್ಳಲಾಗದೇ ಹೋದಾಗ ಕೊಂಚಮಟ್ಟಿಗೆ ಅವನ(ಳ)ನ್ನು ರಕ್ಷಿಸುವ, ತಾಪತ್ರಯದಿಂದ ತಪ್ಪಿಸುವ ಮನೋತಂತ್ರಗಳಿಗೆ ಅವನಿ(ಳಿ)ಗರಿವಿಲ್ಲದೆಯೇ ಮೊರೆಹೋಗುವುದನ್ನು ಕನ್ನಡ ಕಾದಂಬರಿಗಳ ವಿಶ್ಲೇಷಣೆಯ ಮೂಲಕ ಗುರುತಿಸಬಹುದಾಗಿದೆ. ಇವು ಆತ್ಮವಂಚನೆಯ ವಿವಿಧ ರೂಪಗಳಾಗಿದ್ದು, ಅವುಗಳ ಅಸ್ತಿತ್ವ, ಉದ್ದೇಶಗಳ ಬಗೆಗಿನ ಅರಿವು ವ್ಯಕ್ತಿಗಳಿಗೆ ಇರುವುದಿಲ್ಲ. ಆದರೆ ಇವು ವ್ಯಕ್ತಿಗೆ ತನ್ನ ಮಾನಸಿಕ ಸೆಟೆತವನ್ನು ಕಡಿಮೆಗೊಳಿಸಿ ಗೊಂದಲದಿಂದ ಹೊರಬರಲು ಸಹಕರಿಸುವುದನ್ನು ಪಾತ್ರಗಳ ವರ್ತನೆಯ ವಿಶ್ಲೇಷಣೆಯ ಮೂಲಕ ಗುರುತಿಸಬಹುದಾಗಿದೆ. ಈ ರಕ್ಷಣಾತಂತ್ರಗಳು ಅಗಣಿತವಾಗಿದ್ದರೂ ಕಾದಂಬರಿಗಳಲ್ಲಿ ಹೆಚ್ಚಾಗಿ ಬಳಕೆಯಾದ ಕೆಲವು ರಕ್ಷಣಾತಂತ್ರಗಳನ್ನು ಮಾತ್ರ ಇಲ್ಲಿ ವಿಶ್ಲೇಷಿಸಲಾಗಿದೆ.

ಅಧ್ಯಾಯ ೪: 'ಕನ್ನಡ ಕಾದಂಬರಿಗಳಲ್ಲಿ ಅಂತರ್‌ವ್ಯಕ್ತಿ ಸಂಬಂಧದ ನೆಲೆಗಳು' ಈ ಅಧ್ಯಾಯದಲ್ಲಿ ಅಂತರ್‌ವ್ಯಕ್ತಿ ಸಂಬಂಧ, ವ್ಯಕ್ತಿತ್ವ ಭಿನ್ನತೆ/ವ್ಯಕ್ತಿತ್ವ ದೋಷದ ಹಿನ್ನೆಲೆಯಲ್ಲಿ ಕನ್ನಡ ಕಾದಂಬರಿಗಳಲ್ಲಿ ಕಂಡು ಬರುವ ವ್ಯಕ್ತಿತ್ವ ಭಿನ್ನತೆಗಳು, ಗಂಡು-ಹೆಣ್ಣಿನ ಸಂಬಂಧ, ಕೌಟುಂಬಿಕ ಸಂಬಂಧ, ವ್ಯಕ್ತಿ-ವ್ಯಕ್ತಿಗಳ ಸಂಬಂಧದ ಸ್ವರೂಪವನ್ನು ಅಧ್ಯಯನ ನಡೆಸಲಾಗಿದೆ. ಇಲ್ಲಿ ಗಂಡು-ಹೆಣ್ಣಿನ ಸಂಬಂಧವು ವಿವಾಹಪೂರ್ವ, ದಾಂಪತ್ಯ ಜೀವನ, ವಿವಾಹೇತರ ಮತ್ತು ವೃದ್ಧಾಪ್ಯದಲ್ಲಿ ಹೇಗಿರುತ್ತದೆ ಎಂಬುದನ್ನು ವಿಶ್ಲೇಷಣೆಗೊಳಪಡಿಸಲಾಗಿದೆ; ಹಾಗೂ ಸಂಬಂಧಗಳ ಸ್ವರೂಪ ಹಾಗೂ ಭಿನ್ನತೆಗಳಿಗೆ ಕಾರಣಗಳನ್ನು ಹುಡುಕಲು ಪ್ರಯತ್ನಿಸಲಾಗಿದೆ.

ಮಾನವನ ಪ್ರತಿಯೊಂದು ಸಂಬಂಧಗಳಿಗೂ ಅರ್ಥವಿದೆ, ಮಹತ್ವವಿದೆ. ಸಂಬಂಧಗಳ ನಿರ್ವಹಣೆಯಲ್ಲಿ ಮನಸ್ಸಿನ ಪಾತ್ರ ಅತ್ಯಂತ ಪ್ರಮುಖವಾದುದು. ಮಾನವನ ವ್ಯಕ್ತಿತ್ವ ಹಾಗೂ ಸಂಬಂಧಗಳ ಸ್ವರೂಪದ ನಡುವೆ ಸಂಬಂಧವಿದೆ. ವ್ಯಕ್ತಿತ್ವವು ವ್ಯಕ್ತಿಯು ಇನ್ನೊಬ್ಬರೊಡನೆ ಸಂಬಂಧ ಬೆಳೆಸುವ, ಮುಂದುವರಿಸುವ, ಕಾಯ್ದುಕೊಳ್ಳುವ ರೀತಿಯನ್ನು ನಿರ್ಧರಿಸುತ್ತದೆ. ವೈಯಕ್ತಿಕ ಅರಿವು, ಪರಸ್ಪರ ಸಂಪರ್ಕ, ಆಯಾ ಸಂಸ್ಕೃತಿ/ಸಮಾಜದ ಕಟ್ಟುಪಾಡುಗಳಿಗೆ ಅನುಗುಣವಾಗಿ ಸಂಬಂಧದ ತೀವ್ರತೆಯನ್ನು ಆಧರಿಸಿ ಸಂಬಂಧಗಳು ರೂಪುಗೊಳ್ಳುತ್ತವೆ. ಯಾವುದೇ ಸಂಬಂಧದಲ್ಲಿ ಕೊಡುಗೆ, ಅವಶ್ಯಕತೆ, ಸಮಾನತೆಯ ಅಂಶಗಳು ಅಡಕವಾಗದಿದ್ದರೆ ಆ ಸಂಬಂಧ ಯಶಸ್ವಿಯಾಗುವುದಿಲ್ಲ.

ಮನುಷ್ಯ ಸಂಬಂಧವನ್ನು ಕಾದಂಬರಿಗಳು ವ್ಯಾಖ್ಯಾನಿಸುವ ರೀತಿ ವಿಭಿನ್ನವಾದುದು. ಕನ್ನಡ ಕಾದಂಬರಿಗಳು ಮಾನವ ಸಂಬಂಧಗಳ ಸ್ವರೂಪವನ್ನು ಕೇಂದ್ರೀಯ ನೆಲೆಯಲ್ಲಿ ವಿಶ್ಲೇಷಿಸುತ್ತವೆ. ಈ ಅಧ್ಯಾಯದಲ್ಲಿ ಕನ್ನಡ ಕಾದಂಬರಿಗಳು ಅನಾವರಣಗೊಳಿಸುವ ಮಾನವ ಸಂಬಂಧಗಳ ನೆಲೆಗಟ್ಟುಗಳನ್ನು ಶೋಧಿಸಲಾಗಿದೆ. ಕನ್ನಡ ಕಾದಂಬರಿಗಳನ್ನು ಅವಲೋಕಿಸಿದಾಗ ಕಂಡು ಬರುವ ಅಂಶವೆಂದರೆ ಸಂಬಂಧಗಳ ವಿವರಗಳು. ಅವುಗಳಲ್ಲಿ ಮುಖ್ಯವಾಗಿ ಗಂಡು-ಹೆಣ್ಣಿನ ಸಂಬಂಧ. ಆದುದರಿಂದ ಈ ಅಧ್ಯಾಯದಲ್ಲಿ ಗಂಡು-ಹೆಣ್ಣಿನ ಸಂಬಂಧವನ್ನೇ ಮುಖ್ಯ ಭೂಮಿಕೆಯಲ್ಲಿ ವಿಶ್ಲೇಷಿಸಲಾಗಿದೆ.

ಕುಟುಂಬವು ಸಮಾಜದ ಒಂದು ಚಿಕ್ಕ ಘಟಕ. ಈ ಘಟಕದ ಮುಖ್ಯ ಪಾತ್ರಗಳೇ ಗಂಡು-ಹೆಣ್ಣು. ಭಿನ್ನ ಭಿನ್ನ ವ್ಯಕ್ತಿತ್ವ ಹಾಗೂ ಮನಸ್ಸುಗಳ ಗಂಡು-ಹೆಣ್ಣು ಜೊತೆಗಿರುವುದು ಪ್ರಕೃತಿಯ ಒಂದು ಅವಶ್ಯಕತೆಯಾಗಿದೆ. ಇದು ಮಾನವೀಯ ಸಂಬಂಧಗಳಲ್ಲೆಲ್ಲ ಅತ್ಯಂತ ಮುಖ್ಯವಾಗಿದ್ದು, ಬದುಕನ್ನು ಪ್ರಚೋದಿಸಲು ಮುಖ್ಯ ದಾರಿಯಾಗಿದೆ. ಗಂಡು-ಹೆಣ್ಣಿನ ಸಂಬಂಧದ ವಿಶ್ಲೇಷಣೆಯು ಪ್ರಪಂಚದ ಎಲ್ಲ ಪ್ರಮುಖ ಸಾಹಿತ್ಯ ಕೃತಿಗಳಲ್ಲೂ ಒಂದಲ್ಲ ಒಂದು ರೀತಿಯಲ್ಲಿ ಕಾಣಿಸಿಕೊಳ್ಳುತ್ತದೆ. ಗಂಡು-ಹೆಣ್ಣಿನ ಒಲುಮೆ ಜೀವನದ ಪ್ರಬಲ ಪ್ರೇರಕ ಶಕ್ತಿಯಾಗಿರುವುದರಿಂದ ಅದೇ ಸಾಹಿತ್ಯದ ಮುಖ್ಯ ವಿಷಯವಾಗಿರುವುದನ್ನು ಗಮನಿಸಬಹುದು.

ದಾಂಪತ್ಯದ ಸಫಲತೆ ಅಥವಾ ವಿಫಲತೆ ಗಂಡು–ಹೆಣ್ಣಿನ ಮನೋವೃತ್ತಿಯಲ್ಲಿನ ಸಾಮ್ಯತೆ, ಆಸಕ್ತಿಯಲ್ಲಿನ ಹೊಂದಿಕೆ ಹಾಗೂ ಪರಸ್ಪರರ ನಡುವಿನ ಮಾನಸಿಕ ಹೊಂದಾಣಿಕೆಯನ್ನು ಆಧರಿಸಿದೆ. ಅದರಲ್ಲೂ ಗಂಡು–ಹೆಣ್ಣಿನ ಸಂಬಂಧದ ಪ್ರಶ್ನೆ ಹೆಣ್ಣಿಗೆ ಬರಿಯ ದೇಹದ ಬಯಕೆಯನ್ನೇ ತೃಪ್ತಿಗೊಳಿಸುವ ಪ್ರಶ್ನೆಯಲ್ಲ; ಅದು ಹೆಣ್ಣಿಗೆ ಸಹಜವಾದ ತಾಯ್ತನದ ಬಯಕೆ, ಸಾಮಾಜಿಕವಾದ ಮರ್ಯಾದೆಯಾಗಿ ಬಾಳಬೇಕೆಂಬ ಭಯಗಳಿಂದ ಕೂಡಿದೆ. ಗುಪ್ತಗಾಮಿನಿಯಾಗಿ ಸಂಚರಿಸಿ ವ್ಯಕ್ತಿಯನ್ನು ಸುಷುಪ್ತಿ ಹಾಗೂ ಜಾಗೃತಾವಸ್ಥೆಯಲ್ಲಿ ಕಾಡುವ ದೈಹಿಕ ಕಾಮನೆಗಳು ಮನುಷ್ಯನ ಬದುಕಿನ ನಿರ್ಣಾಯಕ ಅಂಶಗಳಾಗುತ್ತವೆ. ಲೈಂಗಿಕ ಅತೃಪ್ತಿ ಹಾಗೂ ಅಭೀಪ್ಸೆಯ ಈಡೇರಿಕೆಯ ಪ್ರಯತ್ನ ಕೌಟುಂಬಿಕ ವಿಘಟನೆಗೆ, ವಿರಸ ವಿಕೋಪಗಳಿಗೆ ಕಾರಣವಾಗುತ್ತದೆ. ಗಂಡು–ಹೆಣ್ಣಿನ ಸಂಬಂಧವು –

(೧) ಸಮಾಜ ಮನ್ನಿಸಿದ, ವಿವಾಹ ವ್ಯವಸ್ಥೆ ಮೂಲಕ ಸ್ಥಾಪಿತ

(೨) ವಿವಾಹೇತರ: ತಾತ್ಕಾಲಿಕ ಅಥವಾ ಶಾಶ್ವತ

(೩) ಪ್ರವೃತ್ತಿ ಜನ್ಯ – ವೇಶ್ಯಾಪದ್ಧತಿ ಆಗಿರಬಹುದಾಗಿದೆ.

ಗಂಡು–ಹೆಣ್ಣಿನ ಸಂಬಂಧದಲ್ಲಿ ಪ್ರಮುಖವಾಗಿ ಮಾನಸಿಕ ಮತ್ತು ಸಾಮಾಜಿಕ ಎರಡು ಆಯಾಮಗಳನ್ನು ಗುರುತಿಸಬಹುದು. ಹಾಗೆಯೇ ಗಂಡು–ಹೆಣ್ಣಿನ ಸಂಬಂಧ ಮೂಲತಃ ಎರಡು ಬಗೆ/ಮಾದರಿಯದಾಗಿರುತ್ತದೆ: ತಾಯಿ–ಮಗ ಅಥವಾ ತಂದೆ–ಮಗಳು. ಉಳಿದ ಎಲ್ಲಾ ಸಂಬಂಧಗಳು ಇವುಗಳ ಮೇಲೆ ಅವಲಂಬಿತವಾಗಿರುತ್ತವೆ. ಅಂದರೆ ಈ ಮೂಲ ಸಂಬಂಧಗಳಲ್ಲಿ ಭಾವನಾತ್ಮಕ ತೊಡಕುಗಳನ್ನು ಹೊಂದಿದ್ದಾಗ ದಾಂಪತ್ಯದಲ್ಲಿ ಬಿರುಕು ಕಾಣಿಸುವ ಸಾಧ್ಯತೆಗಳು ಅಧಿಕ.

ಗಂಡು–ಹೆಣ್ಣಿನ ಕನಸು, ಅಭಿರುಚಿಗಳು ಒಂದೇ ತೆರನಾಗಿರಬೇಕೆಂದೇನೂ ಇಲ್ಲ. ಅದು ಅವರವರ ಮಾನಸಿಕ ಹಾಗೂ ದೈಹಿಕ ಚರ್ಯೆಗಳನ್ನು ಅವಲಂಬಿಸಿದೆ. ಕೇವಲ ಆಕರ್ಷಣೆ ಅಥವಾ ಸೆಳೆತದಿಂದ ದಾಂಪತ್ಯವು ಯಶಸ್ವಿಯಾಗದು; ಸಂಬಂಧಗಳನ್ನು ಬೆಳೆಸುವುದರಲ್ಲಿ, ಕಾಯ್ದುಕೊಳ್ಳುವುದರಲ್ಲಿ, ಕಳೆದುಕೊಳ್ಳುವುದರಲ್ಲಿ ವ್ಯಕ್ತಿತ್ವದ ಪಾತ್ರ ಮಹತ್ವವಾದುದು.

ಭಾವನಾತ್ಮಕ ಸಂಬಂಧಗಳ ಮೇಲೆ ನಿಂತಿರುವ ಭಾರತೀಯ ಕುಟುಂಬ ವ್ಯವಸ್ಥೆಯ ಸಂರಚನೆಯಲ್ಲಿ ಸ್ತ್ರೀ–ಪುರುಷ ಸಂಬಂಧಗಳೂ ಪರಸ್ಪರ ಪೂರಕ. ಅದು ಇಬ್ಬರ ಇಚ್ಛೆಗೆ ಸಂಬಂಧಿಸಿದ್ದು, ಪ್ರಕೃತಿದತ್ತವಾಗಿ ಪುರುಷ–ಮಹಿಳೆಯರ ದೈಹಿಕ ರಚನೆಗಳಲ್ಲಿ ವ್ಯತ್ಯಾಸಗಳಿರುವಂತೆಯೇ ಅವರಿಬ್ಬರ ಯೋಚನಾರೀತಿ, ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ, ಬೇರೊಬ್ಬರನ್ನು ಅರ್ಥಮಾಡಿಕೊಳ್ಳುವ ರೀತಿಗಳಲ್ಲಿ, ಭಾವನಾತ್ಮಕತೆಯಲ್ಲಿ ಗಮನಾರ್ಹ ಭಿನ್ನತೆ ಇರುತ್ತದೆ. ಅದರಲ್ಲೂ ಹೆಣ್ಣಿನ ಮಾನಸಿಕ ಪ್ರಪಂಚ ಹೆಚ್ಚು ಜಟಿಲವಾದುದು. ಲೈಂಗಿಕ

ಸಂಬಂಧದಲ್ಲೂ ಸ್ತ್ರೀಯು ಪುರುಷನಿಗಿಂತ ಭಿನ್ನವಾದ ಮನಸ್ಥಿತಿಯನ್ನು ಹೊಂದಿರುತ್ತಾಳೆ. ಸ್ತ್ರೀಯು ದೈಹಿಕ ಸಂಬಂಧಕ್ಕಿಂತ ಭಾವನಾತ್ಮಕ ಸಂಬಂಧಕ್ಕೆ ಹೆಚ್ಚಿನ ಒತ್ತನ್ನು ನೀಡುವುದನ್ನು, ದಾಂಪತ್ಯ ಸಮಸ್ಯೆಗೆ ಹೆಚ್ಚಾಗಿ ಲೈಂಗಿಕತೆ, ಹೊಂದಾಣಿಕೆಯ ಅಭಾವ, ಸಾಮಾಜಿಕ, ಭಾವನಾತ್ಮಕ ಸಮಸ್ಯೆಗಳೇ ಕಾರಣಗಳಾಗಿರುವುದನ್ನು ಕಾದಂಬರಿಗಳ ವಿಶ್ಲೇಷಣೆಯ ಮೂಲಕ ಗುರುತಿಸಲಾಗಿದೆ.

ಗಂಡು–ಹೆಣ್ಣಿನ ಸಂಬಂಧವನ್ನು ಮುಖ್ಯವಾಗಿ –

(೧) ಅರ್ಥಪೂರ್ಣ ಸಂಬಂಧ

(೨) ಬಲವಂತದ/ಯಾಂತ್ರಿಕ ಸಂಬಂಧ

(೩) ವಿವಾಹಪೂರ್ವ/ವೈವಾಹಿಕ/ವಿವಾಹೇತರ

(೪) ಸ್ವಚ್ಛಂದ/ಕುಟುಂಬ ವ್ಯವಸ್ಥೆಗೊಳಪಟ್ಟ ಎಂದು ಹೇಳಬಹುದಾಗಿದೆ.

ಮಾನವನ ಮನೋದೈಹಿಕ ಬಯಕೆ, ನಿಸರ್ಗಸಹಜ ಮೂಲಭೂತ ಒತ್ತಡಗಳನ್ನು ಒಂದು ಸಾಮಾಜಿಕ ಚೌಕಟ್ಟಿನಲ್ಲಿ ಪೂರ್ತಿಗೊಳಿಸುವ ಸಂಸ್ಥೆಗಳಾದ ವಿವಾಹ, ದಾಂಪತ್ಯ, ಕುಟುಂಬ ಎನ್ನುವುದು ವ್ಯಕ್ತಿಯ ಮೂಲಭೂತ ಅವಶ್ಯಕತೆಯಾದ ಒಟ್ಟಿಗೆ ಬಾಳುವುದನ್ನು ಪ್ರೇರೇಪಿಸುತ್ತದೆ. ದಾಂಪತ್ಯದ ಸಫಲತೆ/ವಿಫಲತೆ ಗಂಡು–ಹೆಣ್ಣಿನ ಮನೋವೃತ್ತಿಯಲ್ಲಿನ ಸಾಮ್ಯತೆ, ಆಸಕ್ತಿಯಲ್ಲಿನ ಹೊಂದಿಕೆ ಹಾಗೂ ಪರಸ್ಪರರ ನಡುವಿನ ಮಾನಸಿಕ ಹೊಂದಾಣಿಕೆಯನ್ನು ಆಧರಿಸಿದೆ. ಗಂಡು–ಹೆಣ್ಣಿನ ಸಂಬಂಧವು ಲೈಂಗಿಕ ಪ್ರಶ್ನೆಯನ್ನು ಹೊಂದಿದೆ. ಈ ಹಂಬಲ ಈಡೇರದೆ ವ್ಯಕ್ತಿ ವಿಕಾಸವೂ ಆಗಲಾರದು; ಬದುಕಿನಲ್ಲಿ ತೃಪ್ತಿಯೂ ದೊರಕಲಾರದು. ಲೈಂಗಿಕತೆ, ತಾಯ್ತನವನ್ನು ವೈವಾಹಿಕ ಚೌಕಟ್ಟಿನಲ್ಲಿ ಮಾತ್ರ ನೈತಿಕವೆಂದು ಸಾರಿ ಉಳಿದ ಸಂದರ್ಭಗಳಲ್ಲಿ ಅನೈತಿಕಗೊಳಿಸಿ ಸಹಜ ಮನೋದೈಹಿಕ ಬಯಕೆಗಳನ್ನು ಹತ್ತಿಕ್ಕಲಾಗುತ್ತದೆ. ಇವು ಸ್ಫೋಟಿಸಿದಾಗ ಅಸಹಜ ವರ್ತನೆ ಕಾಣಿಸುತ್ತದೆ. ವಿವಾಹ, ದಾಂಪತ್ಯ, ಕುಟುಂಬ ಈ ಒತ್ತಡ/ಬಯಕೆಯನ್ನು ಸಾಮಾಜಿಕ ಚೌಕಟ್ಟಿನಲ್ಲಿ ಪೂರೈಸುವುದಾದರೂ ಅದು ಕೆಲವೊಮ್ಮೆ ಮೂಲಪ್ರೇರಣೆಯನ್ನು ಪೂರೈಸುವಲ್ಲಿ ವಿಫಲವಾಗುತ್ತದೆ. ಆಗ ವ್ಯಕ್ತಿಯು ತನ್ನ ಧಾರ್ಮಿಕ, ಸಾಂಸ್ಕೃತಿಕ ಆವರಣವನ್ನು ಪ್ರಜ್ಞಾ/ಅಪ್ರಜ್ಞಾಪೂರ್ವಕವಾಗಿ ಮೀರಲು ಯತ್ನಿಸುತ್ತಾನೆ. ಇದು ಕೆಲವೊಮ್ಮೆ ವೈಯಕ್ತಿಕ ಗಟ್ಟಿತನವನ್ನೂ, ಕೆಲವೊಮ್ಮೆ ಸಂದರ್ಭದ ಸ್ವರೂಪವನ್ನೂ ಅವಲಂಬಿಸಿರುವುದನ್ನೂ ಗಮನಿಸಬಹುದು.

ಲೈಂಗಿಕ ಸಂಬಂಧ ಹಾಗೂ ಅನುಭವ ಆಯಾ ವ್ಯಕ್ತಿಯ ರಾಜಕೀಯ, ಸಾಮಾಜಿಕ, ಆರ್ಥಿಕ ಪರಿಸರದಿಂದ ನಿರ್ಣಯವಾಗುತ್ತದೆ. ಸಂಸಾರದ ಚೌಕಟ್ಟಿನಲ್ಲಿದ್ದುಕೊಂಡು ಒಂದು ವ್ಯಕ್ತಿತ್ವದ ಆವರಣದೊಳಗೆ ಸಿಕ್ಕಿಕೊಂಡ ಮತ್ತೊಂದು ವ್ಯಕ್ತಿತ್ವ ಪಡೆಯಬಯಸುವ ಬಿಡುಗಡೆ, ವೈಯಕ್ತಿಕ ಆಕಾಂಕ್ಷೆಗಳು, ನಾಗರಿಕ ಸಮಾಜದ ಮೌಲ್ಯಗಳೊಂದಿಗೆ ಸಂಘರ್ಷಿಸುವ ಮತ್ತು ಆ ಮೌಲ್ಯಗಳಿಗೆ ತಲೆಬಾಗುವ ಅನಿವಾರ್ಯತೆ, ನಾಗರಿಕ ಸಮಾಜ ರೂಪಿಸುವ ಮೌಲ್ಯಗಳ ಚೌಕಟ್ಟನ್ನು ಮೀರುವ, ಬಿಡುಗಡೆ ಹೊಂದುವ ತುಡಿತವು ಹೊಸ ಲೈಂಗಿಕ ಸಂಬಂಧದ ಬಗ್ಗೆ ಕುತೂಹಲ ಮತ್ತು ಹಳೆಯ

ಸಂಬಂಧದ ಬಗ್ಗೆ ಏಕತಾನತೆ/ಉದಾಸೀನತೆ/ಲೈಂಗಿಕತೆ ಬಗ್ಗೆ ತಾಳುವ ನಿರ್ಲಿಪ್ತ ಸ್ಥಿತಿಯಿಂದ ಉಂಟಾಗಬಹುದು. ಇದು ಕಾನೂನಿನ ಮನ್ನಣೆಯನ್ನು ಅಪೇಕ್ಷಿಸುವುದಿಲ್ಲ. ಧಾರ್ಮಿಕ ನೈತಿಕತೆಯನ್ನು, ಸಾಮಾಜಿಕ ಒಪ್ಪಂದಗಳನ್ನು ಮಾನ್ಯ ಮಾಡುವುದಿಲ್ಲ. ಇದೊಂದು ತೀರಾ ವೈಯಕ್ತಿಕ ವಿದ್ಯಮಾನ. ದಾಂಪತ್ಯದ ಅತೃಪ್ತಿ, ಲೈಂಗಿಕ ನಿರಾಶೆ, ತೃಪ್ತಿಯ ಹುಡುಕಾಟ ಅನೈತಿಕ ಸಂಬಂಧಕ್ಕೆ ದಾರಿ ಮಾಡಿಕೊಡುತ್ತದೆ. ಬೆಳೆಯುವಾಗ ಪರಿಸರ ವ್ಯಕ್ತಿಗೆ ಸಂಸ್ಕಾರದ ಅಂಗವಾಗಿ ನೀತಿಸಂಹಿತೆಯನ್ನು ಕಲಿಸುತ್ತದೆ. ಎಲ್ಲಾ ವರ್ತನೆಗಳನ್ನೂ ಆ ನೀತಿಸಂಹಿತೆಗೆ ಅನ್ವಯಿಸಿಕೊಳ್ಳಬೇಕೆಂದು ಹೇಳುತ್ತದೆ. ಆದರೆ ಸಾಮಾಜಿಕ ಮತ್ತು ವೈಯಕ್ತಿಕ ಮೌಲ್ಯಗಳ ನಡುವೆ ವೈಯಕ್ತಿಕ ಮೌಲ್ಯಗಳು ಗೆದ್ದಾಗ ನೀತಿಸಂಹಿತೆಯನ್ನು ಮೀರುವುದು ಅನಿವಾರ್ಯ. ಅದು ಸದಾ ಉಲ್ಲಂಘನೆ ಆಗಿರಬೇಕಿಲ್ಲ. ನೀತಿಸಂಹಿತೆಯ ಚೌಕಟ್ಟು ಸಾಮಾಜಿಕ ಪರಿಸರದಲ್ಲಿ ಅರ್ಥಹೀನವಾಗಿದ್ದಾಗ ವ್ಯಕ್ತಿ ಸಮರ್ಥಿಸಿಕೊಳ್ಳುವುದನ್ನೂ ಕಾದಂಬರಿಗಳ ವಿಶ್ಲೇಷಣೆಯು ಸ್ಪಷ್ಟಪಡಿಸುತ್ತದೆ.

ಈ ಅಧ್ಯಾಯದಲ್ಲಿ ಕುವೆಂಪು ಅವರ ಕಾದಂಬರಿಗಳು, ಶಿವರಾಮ ಕಾರಂತರ 'ಸರಸಮ್ಮನ ಸಮಾಧಿ', 'ಮೈಮನಗಳ ಸುಳಿಯಲ್ಲಿ', 'ಮೂಕಜ್ಜಿಯ ಕನಸುಗಳು', 'ಮರಳಿ ಮಣ್ಣಿಗೆ', 'ಅಳಿದ ಮೇಲೆ', 'ಬೆಟ್ಟದ ಜೀವ', 'ಕನ್ನಡಿಯಲ್ಲಿ ಕಂಡಾತ', ಸಮೀಕ್ಷೆ', 'ಕೇವಲ ಮನುಷ್ಯರು', ಚದುರಂಗರ 'ಉಯ್ಯಾಲೆ', ಯು. ಆರ್. ಅನಂತಮೂರ್ತಿ ಅವರ ಕಾದಂಬರಿಗಳು, ಎಸ್. ಎಲ್. ಭೈರಪ್ಪನವರ 'ವಂಶವೃಕ್ಷ', 'ಜಲಪಾತ', 'ನೆಲೆ', 'ಸಾಕ್ಷಿ', 'ದೂರ ಸರಿದರು', ಶಾಂತಿನಾಥ ದೇಸಾಯಿಯವರ ಕಾದಂಬರಿಗಳು, ಯಶವಂತ ಚಿತ್ತಾಲರ ಕಾದಂಬರಿಗಳು, ದೊಡ್ಡೇರಿ ವೆಂಕಟಗಿರಿರಾವ್ ಅವರ 'ಇಷ್ಟಕಾಮ್ಯ', ದೇವನೂರ ಮಹಾದೇವ ಅವರ 'ಕುಸುಮಬಾಲೆ', ಅನುಪಮಾ ನಿರಂಜನ ಅವರ 'ಮಾಧವಿ', ಎಂ. ಎಸ್. ವೇದಾ ಅವರ 'ಕಪ್ಪು ಕಿವಿಯ ಬಿಳಿಯ ಕುದುರೆಗಳು', ಸಾರಾ ಅಬೂಬಕರ್ ಅವರ ಕಾದಂಬರಿಗಳು, ತ್ರಿವೇಣಿಯವರ 'ತಾವರೆಯ ಕೊಳ' ಮತ್ತು 'ಕೀಲುಗೊಂಬೆ', ವೈದೇಹಿ ಅವರ 'ಅಸ್ಪೃಶ್ಯರು' ಕಾದಂಬರಿಗಳನ್ನು ಪ್ರಾತಿನಿಧಿಕವಾಗಿಟ್ಟುಕೊಂಡು ಗಂಡು-ಹೆಣ್ಣಿನ ಸಂಬಂಧದ ನೆಲೆಗಳನ್ನು ವಿಶ್ಲೇಷಿಸಲಾಗಿದೆ.

ಗಂಡು-ಹೆಣ್ಣಿನ ಪರಸ್ಪರ ಅರಿವಿನ ಭಾವನೆಗಳು ಮೈದಳೆಯುವ ರೀತಿಯನ್ನು ಕುವೆಂಪು ಅವರು ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ. ಅವರ ಕಾದಂಬರಿಗಳಲ್ಲಿ ಗಂಡ-ಹೆಣ್ಣಿನ ಸಂಬಂಧದ ಸ್ವರೂಪವು ಹೀಗಿದೆ:

(೧) ಕೌಟುಂಬಿಕ ಚೌಕಟ್ಟಿನ ಒಳಗೆ ಸಮಾಜ ಒಪ್ಪಿತ ರೀತಿಯ ಸಂಬಂಧಗಳು

(೨) ಕೌಟುಂಬಿಕ ಚೌಕಟ್ಟನ್ನು ಮೀರಿದ ಸಮಾಜ ಅನೈತಿಕವೆಂದು ಪರಿಗಣಿಸುವ ರೀತಿಯ ಸಂಬಂಧಗಳು: ಇವು ಘೋರ ದುರಂತಕ್ಕೆ ಕಾರಣವಾಗುವುದನ್ನು ಚಿತ್ರಿಸಿದ್ದಾರೆ. (ಕಾನೂರು ಚಂದ್ರಯ್ಯಗೌಡರ ಪತ್ನಿ ಸುಬ್ಬಮ್ಮ ಹೆಗ್ಗಡತಿ ಹಾಗೂ ಸೇರೆಗಾರ ರಂಗಪ್ಪ ಸೆಟ್ಟಿಯ ಸಂಬಂಧ)

ಇಡಿಯ ಬದುಕನ್ನು ಅದರ ಎಲ್ಲ ಸಾಧ್ಯತೆಗಳೊಂದಿಗೆ ಚಿತ್ರಿಸುತ್ತ, ಜೀವನದ ಸಂಕೀರ್ಣತೆಯನ್ನೇ ಕಲೆಯಾಗಿಸಿದ ಶಿವರಾಮ ಕಾರಂತರು ಗಂಡು-ಹೆಣ್ಣಿನ ಸಂಬಂಧದ ಬಗ್ಗೆ ತನ್ನದೇ ಆದ ದೃಷ್ಟಿಯನ್ನು ಹೊಂದಿದ್ದು, ಕಾದಂಬರಿಗಳಲ್ಲಿ ಗಂಡು-ಹೆಣ್ಣಿನ ಸಂಬಂಧದ ವಿವಿಧ ಮುಖಗಳನ್ನು ಚಿತ್ರಿಸಿದ್ದು, ಕಾದಂಬರಿಗಳಲ್ಲಿ ಮಾತ್ರವಲ್ಲದೆ 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಮತ್ತು 'ಸ್ಮೃತಿ ಪಟಲದಿಂದ'ದಲ್ಲಿ ಗಂಡು-ಹೆಣ್ಣಿನ ಸಂಬಂಧದ ಬಗೆಗಿನ ಅನೇಕ ವಿಚಾರಗಳನ್ನು, ಅವರ ಧೋರಣೆಗಳನ್ನೂ ವ್ಯಕ್ತಪಡಿಸಿದ್ದು, ಈ ವಿಚಾರಗಳು ಮನೋವಿಜ್ಞಾನಿಗಳ ಹೇಳಿಕೆಗಳಿಗೆ ತುಂಬಾ ಹತ್ತಿರವಾಗಿರುವುದನ್ನು ಗುರುತಿಸಬಹುದು. ಸಮಾಜದಲ್ಲಿ ಗಂಡು-ಹೆಣ್ಣಿನ ಸಂಬಂಧವನ್ನು ಕುರಿತ ನಂಬಿಕೆ, ನಡೆವಳಿಕೆಗಳು ಹಾಗೂ ಅವು ವ್ಯಕ್ತಿಗಳ ಮೇಲೆ ಹೊರಿಸಿದ ನಿಯಮಗಳು ವ್ಯಕ್ತಿಯ ಜೀವನದ ಮೇಲೆ ಬೀರುವ ಪರಿಣಾಮವನ್ನು ಕಾರಂತರು ತಮ್ಮ ಕಾದಂಬರಿಗಳಿಗೆ ವಸ್ತುವನ್ನಾಗಿ ಆಯ್ದುಕೊಂಡು ವಿಶ್ಲೇಷಿಸಿದ್ದಾರೆ.

ಕಾರಂತರು ಹೇಳುವಂತೆ ಸಮಾಜವು ಸಂಸ್ಕೃತಿ, ಮತಧರ್ಮಗಳು, ನಂಬಿಕೆಗಳ ಹೆಸರಿನಲ್ಲಿ ಹೊರಿಸುವ ನೈತಿಕ ಸೂತ್ರಗಳು ಮನುಷ್ಯನ ಮನಸ್ಸನ್ನು ವಿರೂಪಗೊಳಿಸಲೂಬಹುದು. ಆ ಕಾರಣದಿಂದ ಗಂಡು-ಹೆಣ್ಣಿನ ಸಂಬಂಧದ ವಿಚಾರದಲ್ಲಿ ಸಮಾಜ ಹೊರಿಸುವ ತೀರ್ಮಾನಗಳಿಗೆ ಸಮನಾಗಿ ಗಂಡು-ಹೆಣ್ಣು ನಡೆಯಲಾಗದೆ ಹೋದಾಗ ಮೂರು ರೀತಿಯ ಪರಿಣಾಮಗಳನ್ನು ಮುಖ್ಯವಾಗಿ ಗುರುತಿಸಬಹುದು:

೧. ಲೈಂಗಿಕ ವಿಚಾರದಲ್ಲಿ ಸೂತ್ರವನ್ನು ಒಪ್ಪಿದಂತೆ ನಟಿಸುತ್ತಾ ಗುಟ್ಟಾಗಿ ಅದಕ್ಕೆ ವಿರುದ್ಧವಾಗಿ ಕಪಟ ಜೀವನವನ್ನು ನಡೆಸುವುದು.
೨. ಹಾಗೆ ಮುಚ್ಚುಮರೆಯಲ್ಲಿ ಬಾಳಲಾಗದವರು ಅದುಮಿ ಹಿಡಿದ ದೈಹಿಕ ಒತ್ತಡಗಳಿಂದಾಗಿ ಕೆಲವೊಂದು ಮನೋವಿಕಾರಗಳಿಗೆ ಗುರಿಯಾಗಲೂಬಹುದು.
೩. ಇನ್ನೂ ಕೆಲವು ಗಂಡು-ಹೆಣ್ಣು ಜೊತೆಯಾಗಿಯೇ ಬಾಳುತ್ತ ಮೈ-ಮನಸ್ಸುಗಳೆರಡು ಕೂಡದ ದಾಂಪತ್ಯವನ್ನು ನಡೆಸಬಹುದು.

ಕಾರಂತರು ಕಾದಂಬರಿಗಳಲ್ಲಿ ಚಿತ್ರಿಸಿದ ಗಂಡು-ಹೆಣ್ಣಿನ ಸಂಬಂಧವನ್ನು ಮೂರು ರೀತಿಯಲ್ಲಿ ಗುರುತಿಸಬಹುದಾಗಿದೆ:

೧. ಸಮಾಜ ಮನ್ನಿಸಿದ ವಿವಾಹ ವ್ಯವಸ್ಥೆಯ ಮೂಲಕ ಸ್ಥಾಪಿತವಾದುದು – ಅರ್ಥಪೂರ್ಣ, ಬಲವಂತ ಅಥವಾ ಯಾಂತ್ರಿಕ

೨. ವಿವಾಹೇತರ ಸಂಬಂಧ (ತಾತ್ಕಾಲಿಕ ಅಥವಾ ಶಾಶ್ವತ)

೩. ಪ್ರವೃತ್ತಿ ಜನ್ಯ ಸಂಬಂಧ (ವೇಶ್ಯಾ ಪದ್ಧತಿ)

ಅವರ ಕಾದಂಬರಿಗಳಲ್ಲಿ ಗಂಡು-ಹೆಣ್ಣಿನ ಸಂಬಂಧ ಕೇವಲ ಅನಿವಾರ್ಯ ಅಥವಾ ಯಾಂತ್ರಿಕ ಅಲ್ಲ. ಅದು – ಮೂಲಭೂತವಾದ ಸಂಬಂಧಗಳಲ್ಲಿ ಒಂದು/ಕಾಮವೂ ಹಸಿವು, ನೀರಡಿಕೆಗಳಂತೆ ಒಂದು ಮೂಲಭೂತ ಸಹಜ ಜೈವಿಕ ಪ್ರವೃತ್ತಿ. ಹಳೆಯದೆಲ್ಲವನ್ನು ಮರೆಸುವ ಹೊಸ ಜೀವನದ ದ್ಯೋತಕ. ಸದಾ ಬಯಕೆಯ ಆಗರ. ಸಂಕೋಚ ಕಳೆದ ಚೇತನ ಸಮರ್ಪಣೆಯ ಕ್ರಿಯೆ. ಮಾನವನ ವಿಕಾಸದೊಂದಿಗೆ ಕೃತಕ ಹಾಗೂ ಸಂಕೀರ್ಣವಾದ ಸಂಬಂಧವು ಸಾಮಾಜಿಕ, ಸಾಂಸ್ಕೃತಿಕ ಚೌಕಟ್ಟಿನೊಳಗೆ ಬಂಧಿಯಾಗಿದೆ. ಇದು ಸಾಮಾಜಿಕವೂ ಹೌದು; ವೈಯಕ್ತಿಕವೂ ಹೌದು. ಇದೊಂದು ಮನೋದೈಹಿಕ ವ್ಯಾಪಾರವಾಗಿರುವುದರಿಂದ ವ್ಯಕ್ತಿಯ ಅಂತರಂಗ ಬಹಿರಂಗಗಳೆರಡನ್ನೂ ಏಕಕಾಲದಲ್ಲಿ ಹಿಡಿದಿಡಬಲ್ಲುದು. ಲೈಂಗಿಕ ಪ್ರಶ್ನೆಯನ್ನು ಹೊಂದಿರುವ ದಾಂಪತ್ಯನೀತಿ ಬಲು ಜಿಗುಟಿನ ಸಮಸ್ಯೆ. ಅದು ಮನುಷ್ಯ ಸ್ವಭಾವದ ಪ್ರಶ್ನೆ. ಒಟ್ಟಿನಲ್ಲಿ ಅವರ ಪ್ರಕಾರ 'ಮನುಷ್ಯ ಒಬ್ಬ ಮನೋದೇಹಿ.'

ವರ್ಣವ್ಯವಸ್ಥೆಯನ್ನು ಮೀರಿ ಬೆಳೆಯುವ ಗಂಡು-ಹೆಣ್ಣಿನ ಸಂಬಂಧಗಳನ್ನು ಚದುರಂಗರ ಕಾದಂಬರಿಗಳಲ್ಲಿ ಗುರುತಿಸಬಹುದಾಗಿದೆ. ಆದರೆ ಜಾತಿಯ ಕಲ್ಪನೆಗಳು ದಟ್ಟವಾಗಿರುವ ಹಳ್ಳಿಯ ಸಮಾಜದಲ್ಲಿ ಅಂತರ್ಜಾತಿ ವಿವಾಹದಂತಹ ಬದಲಾವಣೆ ನಿರೀಕ್ಷಿಸುವುದು ಅಸಾಧ್ಯ. ಹೆಣ್ಣು ಗಂಡಿನ ಪರಸ್ಪರ ಮೋಹ ಅನಾದಿಯಾದದ್ದು. ಮಾನವ ಕುಲ ಎಲ್ಲಿಯವರೆಗೆ ಉಸಿರಾಡುತ್ತಾ ಇರುವುದೋ ಅಲ್ಲಿಯವರೆಗೆ ಸ್ಥಿರವಾಗಿ ಇರುವಂಥದ್ದು. ಆದರೆ ಹೆಣ್ಣು ಗಂಡಿನ ಸಂಬಂಧ ನ್ಯಾಯಬಾಹಿರವಾಗಿರಬಾರದು. ತನ್ನ ಗಂಡ ತನ್ನ ಹೆಂಡತಿ ಈ ವರ್ತುಲದಲ್ಲೇ ಗಂಡು ಹೆಣ್ಣು ಸುಖವನ್ನು ಪಡೆಯಬೇಕು ಎಂಬುದನ್ನು ಚದುರಂಗರು ಅನುಮೋದಿಸುವುದನ್ನು ಈ ಕಾದಂಬರಿಯಲ್ಲಿ ಗುರುತಿಸಬಹುದಾಗಿದೆ.

ಅನಂತಮೂರ್ತಿಯವರ ಕಾದಂಬರಿಗಳಲ್ಲಿ ಗಂಡು-ಹೆಣ್ಣಿನ ಸಂಬಂಧವು ಸಹಜ ಪ್ರವೃತ್ತಿ, ಒತ್ತಡ, ಸೃಷ್ಟಿಕ್ರಿಯೆಯ ಅವಶ್ಯಕ ಭಾಗವಾಗಿದೆ. ಇದು ದೇಹ ಮನಸ್ಸುಗಳಿಗೆ ಚೈತನ್ಯದಾಯಿ. ಆದರೆ ಕಾದಂಬರಿಗಳಲ್ಲಿ ವಿವಾಹದಾಚೆಗಿನ ಸಂಬಂಧಗಳಲ್ಲಿ ಸುಮಧುರತೆ, ಸೌಹಾರ್ದತೆಗಳನ್ನು ಕಾಣಬಹುದು.

ಪಿ. ಲಂಕೇಶ್ ಅವರು ಮನುಷ್ಯ ಸಂವೇದನೆಗಳ ಮಟ್ಟದಲ್ಲಿಯೇ ಸಂಬಂಧಗಳ ಶೋಧಕ್ಕೆ ಮುಂದಾದರೂ ಒಪ್ಪಿತ ನಂಬಿಕೆಗಳನ್ನು, ರೀತಿ ನೀತಿಗಳನ್ನು, ಸಿದ್ಧ ಸೂತ್ರಗಳನ್ನು ಮುರಿಯುವ ಮೂಲಕ ಉದಾರವಾದಿ ನಿಲುವನ್ನೂ ತಾಳುತ್ತಾರೆ. ಸ್ತ್ರೀ ಪುರುಷ ಬೇಧವಿಲ್ಲದೆ, ಜಾತಿ ವರ್ಗದ

ಸಂದರ್ಭದಲ್ಲಿ ಕೌಟುಂಬಿಕ ಸಂಬಂಧಗಳನ್ನು ವಿವೇಚಿಸದೆ ಕೇವಲ ಮನುಷ್ಯ ನೆಲೆಯಲ್ಲಿ ಸಂಬಂಧಗಳ ಸೂಕ್ಷ್ಮ ವಿನ್ಯಾಸವನ್ನು, ಅದರ ಅನನ್ಯತೆಯನ್ನು ಅಭಿವ್ಯಕ್ತಿಸುತ್ತಾರೆ.

ಎಸ್. ಎಲ್. ಭೈರಪ್ಪ ಅವರು ತಮ್ಮ ಕಾದಂಬರಿಗಳಲ್ಲಿ ಪ್ರೇಮವು ವೈಚಾರಿಕತೆ, ಧರ್ಮ, ಜಾತಿ, ಆಧುನಿಕತೆಗಳ ಹಿನ್ನೆಲೆಯಲ್ಲಿ ಹೊಂದುವ ವಿವಿಧ ರೂಪ, ವಿನ್ಯಾಸಗಳನ್ನು ವಿಶ್ಲೇಷಿಸಿದ್ದಾರೆ. ಭೈರಪ್ಪನವರ ಕಾದಂಬರಿಗಳು ಅನಾವರಣಗೊಳಿಸುವ ಗಂಡು-ಹೆಣ್ಣಿನ ಸಂಬಂಧದ ಗಾಢ, ಸೂಕ್ಷ್ಮ ಹಾಗೂ ಸಂಕೀರ್ಣ ಸಂಬಂಧಗಳು, ಲೈಂಗಿಕತೆಯ ವಿವಿಧ ಆಯಾಮಗಳು, ದಾಂಪತ್ಯ ಬಂಧದೊಳಗಿನ ಹಾಗೂ ದಾಂಪತ್ಯ ಬಂಧದಾಚೆಯ ಗಂಡು-ಹೆಣ್ಣಿನ ಸಂಬಂಧಗಳ ವಿವರಗಳನ್ನು ಒಳಗೊಳ್ಳುತ್ತವೆ. ಇವರ ಕಾದಂಬರಿಗಳಲ್ಲಿ ಕಾಮವು ಮಾನವ ಸಹಜ ಪ್ರವೃತ್ತಿಯಾಗಿ, ಅಸ್ತಿತ್ವವನ್ನು ಅದುಮುವ ಅದಮ್ಯ ಒತ್ತಡವಾಗಿ, ಸೃಷ್ಟಿಕ್ರಿಯೆಯ ಭಾಗವಾಗಿ, ದೇಹ ಮನಸ್ಸುಗಳಿಗೆ ಚೈತನ್ಯ ನೀಡುವ ಶಕ್ತಿಯಾಗಿ ಕಾಣಿಸಿಕೊಂಡಿದೆ. ಇದರಿಂದಾಗಿ ವೈಯಕ್ತಿಕ ಹಾಗೂ ಸಾಮಾಜಿಕ ಬದುಕಿನಲ್ಲಿ ಉಂಟಾಗುವ ತಲ್ಲಣಗಳನ್ನು ಕಾದಂಬರಿಗಳು ವಿಶ್ಲೇಷಿಸುತ್ತವೆ.

ದೇಸಾಯಿಯವರ ಕಾದಂಬರಿಗಳಲ್ಲಿ ಗಂಡು-ಹೆಣ್ಣಿನ ಸಂಬಂಧದ ಆಯಾಮಗಳು, ವ್ಯಕ್ತಿಯ ಮಾನಸಿಕ ತೊಳಲಾಟ, ಏಕಾಂಗಿತನ, ಸಾಂಪ್ರದಾಯಿಕ ಬದುಕಿನ ನೈತಿಕತೆ, ಸಂಕೀರ್ಣತೆ ಕುರಿತಂತೆ ಆಧುನಿಕ ಸಮಾಜದ ಭಿನ್ನ ಮುಖಗಳನ್ನು ಕಾಣಬಹುದು. 'ಕಾಮ' ಇವರ ಸಾಹಿತ್ಯದ ಕೇಂದ್ರ ಬಿಂದುವಾಗಿದ್ದು, ಇದುವೇ ವ್ಯಕ್ತಿತ್ವದ ಶೋಧದ ನೆಲೆಯಾಗಿರುತ್ತದೆ. ಆಧುನಿಕತೆಯ ಪರಿಣಾಮ ಛಿದ್ರಗೊಂಡ ಮನುಷ್ಯ-ಮನುಷ್ಯನ ನಡುವಿನ ಅರ್ಥಪೂರ್ಣ ಸಂಬಂಧವನ್ನು ಇವರ ಕಾದಂಬರಿಗಳಲ್ಲಿ ಗುರುತಿಸಬಹುದು. ಇವರ ಕಾದಂಬರಿಗಳಲ್ಲಿನ ನಾಯಕರು ಗಂಡು-ಹೆಣ್ಣಿನ ಸಂಬಂಧಗಳ ಮೂಲಕವೇ ಬದುಕಿನ ವಿವಿಧ ಸಾಧ್ಯತೆಗಳಿಗೆ ತೆರೆದುಕೊಳ್ಳುವುದನ್ನು ಗಮನಿಸಬಹುದಾಗಿದೆ. ಇಲ್ಲಿ ಗಂಡು-ಹೆಣ್ಣಿನ ಸಂಬಂಧ ಕೇವಲ ದೈಹಿಕ ಪಾತಳಿಯಲ್ಲಿ ಮಾತ್ರ ನಡೆಯುತ್ತಿದ್ದು ಮನಸ್ಸು-ಭಾವನೆಗಳ ಸ್ಪರ್ಶ ಇಲ್ಲದಿರುವಂತೆ ತೋರಿದರೂ, ಲೈಂಗಿಕತೆಯ ವಿಚಾರಕ್ಕೆ ಸಂಬಂಧಿಸಿದಂತೆ ಗಂಡು-ಹೆಣ್ಣಿನ ಸಂರಚನೆಯಲ್ಲಿರುವ ಮೂಲ ವ್ಯತ್ಯಾಸದತ್ತ ಅವರು ಬೆಳಕನ್ನು ಚೆಲ್ಲುತ್ತಾರೆ.

ದೇಸಾಯಿಯವರ ಕಾದಂಬರಿಗಳಲ್ಲಿ ಗಂಡು-ಹೆಣ್ಣಿನ ಸಂಬಂಧವು ಬರಿಯ ದೇಹದ ಹಸಿವೆಯಾಗಿ ಮಾತ್ರವಲ್ಲ; ಅಸ್ತಿತ್ವದ ಹುಡುಕಾಟಕ್ಕೆ ಪ್ರೇರಕ ಶಕ್ತಿಯಾಗಿ ವರ್ತಿಸುತ್ತದೆ. ಇಲ್ಲಿ ಹೆಣ್ಣು ಗಂಡಿನ ನಡುವಿನ ಸಂಘರ್ಷಕ್ಕೆ ಅವರವರ ಸ್ವಾತಂತ್ರ್ಯ ಮತ್ತು ಅಸ್ತಿತ್ವದ ಹುಡುಕಾಟವೇ ಕಾರಣ. ಇವರ ಕಾದಂಬರಿಗಳಲ್ಲಿ ಸ್ತ್ರೀಯರು ಆಧುನಿಕ ಪ್ರಜ್ಞೆಯ ಸಂಕೇತವಾಗುತ್ತಾರೆ. ಇಲ್ಲಿನ ಪುರುಷರು ಪ್ರತಿಷ್ಠಿತರಾಗಿ ಕಾಣಿಸಿಕೊಂಡರೂ ಅಂತರಾಳದಲ್ಲಿ ಒಂಟಿತನ, ಅಸಹಾಯಕತೆ, ಆಶಾವಾದವಿಲ್ಲದ

ಒತ್ತಡದ ಬದುಕುಗಳ ನಡುವೆ ತನ್ನತನವನ್ನು ಕಳೆದುಕೊಂಡಂತೆ ಬದುಕುತ್ತಿರುವ ಸಂದರ್ಭದಲ್ಲಿ ಹೆಣ್ಣನ್ನು ಜೀವನದ ಕೇಂದ್ರವಾಗಿಟ್ಟುಕೊಳ್ಳುವ ಮೂಲಕ ಅಸ್ತಿತ್ವವನ್ನು ಕಂಡುಕೊಳ್ಳುತ್ತಾರೆ.

ದಾಂಪತ್ಯ, ಕುಟುಂಬ ಎಂಬುದು ಹೆಣ್ಣು ಗಂಡಿನ ಬಾಳಿನಲ್ಲಿ ಸುಮಧುರ ಯಾತನೆಯನ್ನು ಮೂಡಿಸುವಂಥದ್ದು. ಕುಟುಂಬದ ಮೂಲಬೇರಿಲ್ಲದೆ ವ್ಯಕ್ತಿತ್ವದ ಹುಡುಕಾಟ ಅಸಾಧ್ಯ. ಆದುದರಿಂದಲೇ ಪ್ರತಿಯೊಬ್ಬ ಲೇಖಕರೂ ತಮ್ಮ ಕೃತಿಗಳಲ್ಲಿ ಕುಟುಂಬ ಹಾಗೂ ದಾಂಪತ್ಯಕ್ಕೆ ಮಹತ್ವವನ್ನು ನೀಡಿದ್ದಾರೆ. ದೇಸಾಯಿಯವರಂತೆ ಚಿತ್ತಾಲರೂ ತಮ್ಮ ಕಾದಂಬರಿಗಳಲ್ಲಿ ಹೆಣ್ಣನ್ನು ಗಂಡಿನ ಮೂಲಸೆಲೆಯಾಗಿಯೇ ನೋಡಿದ್ದಾರೆ. ಆದರೆ ದೇಸಾಯಿಯವರಿಗಿಂತ ಭಿನ್ನವಾಗಿ ಆಲೋಚಿಸುವ ಚಿತ್ತಾಲರು ಗಂಡು-ಹೆಣ್ಣಿನ ದಾಂಪತ್ಯವನ್ನು ಬಂಧನವಾಗಿಸಲು ಇಷ್ಟಪಡುವುದಿಲ್ಲ. ಸ್ವತಂತ್ರವಾಗಿ ಆಲೋಚಿಸಲು ಅವಕಾಶವನ್ನು ಕಲ್ಪಿಸುವ ಮೂಲಕ ಸಂಬಂಧದ ಗಟ್ಟಿತನವನ್ನು ರೂಪಿಸಲು ಪ್ರಯತ್ನಿಸುತ್ತಾರೆ.

ಭಾರತೀಯ ಕೌಟುಂಬಿಕ ರಚನೆಯಲ್ಲಿ ಮಾನವೀಯ ಸಂಬಂಧಗಳ ನಿಯಂತ್ರಣ ಗಟ್ಟಿಯಾಗಿದೆ. ಮಾನವ ಸಂಬಂಧ ಅರ್ಥಹೀನ, ಅಸಂಗತ ಎಂದು ಭಾವಿಸುವ ಮಾನಸಿಕ ಸ್ಥಿತಿ ಒಂದೆಡೆಯಾದರೆ, ಅದನ್ನು ಮೀರಿ ಜೀವಪರ ಹಾಗೂ ಸಮಾಜಮುಖಿ ನೆಲೆಗೆ ವ್ಯಕ್ತಿ ತನ್ನನ್ನು ತಾನು ಆಗು ಮಾಡಿಕೊಳ್ಳಬೇಕಾದ ಅಗತ್ಯತೆ ಇನ್ನೊಂದೆಡೆ ಇರುವುದನ್ನು ಯಶವಂತ ಚಿತ್ತಾಲರ ಕಾದಂಬರಿಗಳು ಚಿತ್ರಿಸುತ್ತವೆ.

ಯಶವಂತ ಚಿತ್ತಾಲರ ಕಾದಂಬರಿಗಳಲ್ಲಿ ಚಿತ್ರಿತವಾದ ದಾಂಪತ್ಯವನ್ನು ಹೀಗೆ ವಿಭಾಗಿಸಬಹುದು: ಅರ್ಥಪೂರ್ಣ ದಾಂಪತ್ಯ ಸಂಬಂಧ ಹಾಗೂ ಶಿಥಿಲ ದಾಂಪತ್ಯ ಸಂಬಂಧ. ಇಲ್ಲಿ ಪಾತ್ರಗಳ ಮಾನಸಿಕತೆಯಲ್ಲಿ ವಿಭಿನ್ನತೆಯನ್ನು ಗುರುತಿಸಬಹುದಾಗಿದೆ:

(೧) ಬದುಕಿನ ಪರಿಪೂರ್ಣತೆಯ ನೆಲೆಯಿಂದ ದಾಂಪತ್ಯವನ್ನು ಸವಾಲಾಗಿ ಪರಿಭಾವಿಸುವ ಪಾತ್ರಗಳು

(೨) ಸ್ತ್ರೀಪುರುಷರ ಅಭಿಲಾಷೆ, ಅಭಿರುಚಿ, ಮನೋಧೋರಣೆಗಳು ಸೃಷ್ಟಿಸುವ ದಾಂಪತ್ಯ ಒತ್ತಡಗಳು

(೩) ಪುರುಷ ಪ್ರಾಧಾನ್ಯತೆಯ ಕಾರಣ ಸ್ತ್ರೀಯರ ಶರಣಾಗತಿ

(೪) ಹೊಂದಿ ಬಾಳುವ ಜೀವನಕ್ರಮವನ್ನೇ ಆದರ್ಶವೆಂದು ಪರಿಭಾವಿಸುವ ಪಾತ್ರಗಳು

ಚಿತ್ತಾಲ ಮತ್ತು ದೇಸಾಯಿಯವರ ಕಾದಂಬರಿಗಳಲ್ಲಿ ವಿವಾಹಪೂರ್ವ ಲೈಂಗಿಕತೆ, ವಿವಾಹೋತ್ತರ ಲೈಂಗಿಕತೆ, ವೈವಾಹಿಕ ಸಂಬಂಧಗಳು, ಸಂಗಾತಿಯ ಆಯ್ಕೆ, ಮುಕ್ತ ಲೈಂಗಿಕತೆ, ದೈಹಿಕ ಸಂಬಂಧವನ್ನು ಮೀರಿದ ಅನುಭವಗಳು ಸಹಜ ಆಕಾಂಕ್ಷೆಗಳಾಗಿಯೇ ವ್ಯಕ್ತವಾಗುತ್ತವೆ. ಚಿತ್ತಾಲರ ಕಾದಂಬರಿಗಳಲ್ಲಿನ ಹೆಣ್ಣು ಗಂಡಿನ ಮನಸ್ಸಿನಾಳಕ್ಕಿಳಿದು ನೋಡುವ ತಾಳ್ಮೆಯನ್ನು

ಹೊಂದಿದ್ದು, ಪುರುಷರ ನಡೆವಳಿಕೆಗಳಿಗೆ ಸಹನೆಯಿಂದಲೇ ಪ್ರತಿಕ್ರಿಯಿಸಿ ತಮ್ಮ ಪರಿಸರದ ಇತರರನ್ನು ಜೀವಂತವಾಗಿ ಇಡುತ್ತಾರೆ. ಚಿತ್ತಾಲರು ತಮ್ಮ ಕಾದಂಬರಿಗಳಲ್ಲಿ ಸ್ತ್ರೀಯರಿಂದ ಪುರುಷರ ಲೈಂಗಿಕ ಶೋಷಣೆ ಮತ್ತು ಪುರುಷರಿಂದ ಸ್ತ್ರೀಯರ ಲೈಂಗಿಕ ಶೋಷಣೆಯಾಗುವುದನ್ನು ಚಿತ್ರಿಸಿದ್ದಾರೆ.

ದೇವನೂರು ಮಹಾದೇವರ 'ಕುಸುಮಬಾಲೆ'ಯಲ್ಲಿ ಗಂಡು–ಹೆಣ್ಣಿನ ಸಂಬಂಧಗಳ ವಿಶ್ಲೇಷಣೆಯ ಮೂಲಕ ಬದುಕನ್ನು ಅದಮ್ಯವಾಗಿ ಪ್ರೀತಿಸುವ ಜನಾಂಗವೊಂದರ ನೋವು–ನಲಿವು, ಅಜ್ಞಾನ ಅಸಹಾಯಕತೆ, ಶೋಷಣೆಗಳ ಚಿತ್ರಣವಿದೆ. ಲೈಂಗಿಕತೆಯ ಚಿತ್ರಣವನ್ನು ನಿರ್ವಹಿಸುವ ರೀತಿ ಅಶ್ಲೀಲತೆಯ ಸೋಂಕಿಗೆ ಒಳಗಾಗದೆ ವಾಸ್ತವವೆಂಬಂತೆ ತೆರೆದುಕೊಳ್ಳುತ್ತದೆ. ಮೇಲ್ವರ್ಗ ಕೆಳವರ್ಗದ ಗಂಡು–ಹೆಣ್ಣಿನ ಅನೈತಿಕ ಸಂಬಂಧದ ಪುನರಾವರ್ತನೆಯನ್ನು ಕಾದಂಬರಿಯುದ್ದಕ್ಕೂ ಗಮನಿಸಬಹುದಾಗಿದೆ.

ಅನುಪಮಾ ನಿರಂಜನ ಅವರ 'ಮಾಧವಿ' ಹಾಗೂ ಎಂ. ಎಸ್. ವೇದಾ ಅವರ 'ಕಪ್ಪು ಕಿವಿಯ ಬಿಳಿಯ ಕುದುರೆಗಳು' ಕಾದಂಬರಿಗಳಲ್ಲಿ ಮಾಧವಿಯ ಮೂಲಕ ದೇಹ ಮನಸ್ಸುಗಳ ಅಂತರ್‌ಸಂಬಂಧದ ವಿಶ್ಲೇಷಣೆಯಿದೆ. ಸಾರಾ ಅವರು ಹೆಣ್ಣಿನ ಅತಂತ್ರ ಸ್ಥಿತಿಯನ್ನೂ, ಗಂಡು ಭದ್ರತೆಯ ಸಂಕೇತ ಎಂಬ ಗ್ರಹಿಕೆ ಹಾಗೂ ಭಾವನೆ ಇರುವುದನ್ನು ಕಾದಂಬರಿಗಳಲ್ಲಿ ಚಿತ್ರಿಸಿದ್ದಾರೆ. ಪುರುಷರಿಗೆ ಗಂಡು–ಹೆಣ್ಣಿನ ಸಂಬಂಧವು ದೇಹ ಮೂಲದ್ದಾದರೆ ಸ್ತ್ರೀಯರಿಗೆ ಅದು ಮನೋಮೂಲದ್ದು ಎಂಬುದನ್ನು ಕಾಣಬಹುದು.

'ಅಸ್ಪೃಶ್ಯರು' ಕಾದಂಬರಿಯಲ್ಲಿ ಆ ಕಾಲದಲ್ಲಿ ಪ್ರಚಲಿತದಲ್ಲಿದ್ದ ಗಂಡ–ಹೆಂಡಿರ ಸಂಬಂಧದ ವಿಷಯದಲ್ಲೇ ಆಗಿರಲಿ, ಇಡೀ ಕುಟುಂಬಕ್ಕೆ ಸಂಬಂಧಿಸಿದ ಯಾವುದೇ ವಿಚಾರಗಳಲ್ಲೇ ಆಗಿರಲಿ ಹೆಣ್ಣು ಯಾವುದೇ ನಿರ್ಧಾರವನ್ನು ತೆಗೆದುಕೊಳ್ಳಲು ಯೋಗ್ಯಳಲ್ಲ ಎಂದು ಆಕೆಯನ್ನು ಹೊರಗಿಡುವುದನ್ನು ಚಿತ್ರಿಸಿರುವುದನ್ನು ಕಾಣಬಹುದಾಗಿದೆ. ಹಿರಿಯರು ಹೆಣ್ಣಿನ ಮನದಲ್ಲಿ ಹೆಣ್ಣೆಂದರೆ ಗಂಡು ಹೇಳಿದಂತೆ ಮನೆಯೊಳಗೇ ಇದ್ದು ಅವನನ್ನು ತೃಪ್ತಿಪಡಿಸಿ, ಮಕ್ಕಳನ್ನು ಸಾಕಿ ಮೌನವಾಗಿ ದನಿಗೊಡಬೇಕಾದವಳು ಎಂಬ ಭಾವವನ್ನು ಮನದಾಳಕ್ಕೆ ಬೇರೂರಿಸಿರುವುದನ್ನೂ ಗುರುತಿಸಬಹುದು. ಇಲ್ಲಿ ಗಂಡು–ಹೆಣ್ಣು ಲೋಕದ ನಡುವಿನ ಅಂತರವನ್ನು, ಗಂಡು–ಹೆಣ್ಣಿನ ಸಂಬಂಧದ ಸ್ವರೂಪವನ್ನು ನಿರ್ಧರಿಸುವಲ್ಲಿ ವ್ಯಕ್ತಿತ್ವ, ಬಾಲ್ಯ, ಪರಿಸರ ಎಲ್ಲವೂ ಪ್ರಮುಖ ಪಾತ್ರವನ್ನು ವಹಿಸುವುದನ್ನು ಗಂಡು–ಹೆಣ್ಣಿನ ಸಂಬಂಧದ ವಿವರಗಳು ಸ್ಪಷ್ಟಪಡಿಸುತ್ತವೆ.

ಸಮಾಜದ ವಿವಿಧ ಹಂತಗಳಲ್ಲಿ ಗಂಡು–ಹೆಣ್ಣಿನ ಸಂಬಂಧಗಳು ಅನೇಕ ಬಗೆಯವು. ಗಂಡ–ಹೆಂಡತಿ, ತಾಯಿ–ಮಗ, ತಂದೆ–ಮಗಳು, ಅಣ್ಣ–ತಂಗಿ, ಅಕ್ಕ–ತಮ್ಮ ... ಹೀಗೆ. ಗಂಡು–ಹೆಣ್ಣಿನ ಸಂಬಂಧವು ಮನುಷ್ಯನ ಒಳ ಜಗತ್ತಿನ ಸೂಕ್ಷ್ಮತೆಗಳ ಹಿನ್ನೆಲೆಯಲ್ಲಿ ನೈತಿಕತೆಯನ್ನು ಮರುವ್ಯಾಖ್ಯಾನಿಸಿರುವುದನ್ನೂ ಕಾದಂಬರಿಗಳಲ್ಲಿ ಗುರುತಿಸಬಹುದಾಗಿದೆ. ಈ ಅಧ್ಯಾಯದಲ್ಲಿ

ಕಾದಂಬರಿಗಳಲ್ಲಿ ಪ್ರಮುಖವಾಗಿ ಕಂಡು ಬರುವಂತಹ ವೈವಾಹಿಕ, ವಿವಾಹೇತರ ಮತ್ತು ವಿವಾಹಪೂರ್ವ ಸಂಬಂಧಗಳನ್ನು ಚರ್ಚಿಸಲಾಗಿದೆ.

ಅತೃಪ್ತತೆ, ಲೈಂಗಿಕ ವೈಫಲ್ಯ, ಸೂಕ್ಷ್ಮತೆ, ಸಂವೇದನಾಶೀಲತೆ, ಮಾರ್ದವತೆಯನ್ನು ಕಳೆದುಕೊಳ್ಳುವುದು, ಅದುಮಿಟ್ಟ ಭಾವನೆಗಳ ಸ್ಫೋಟ, ವಿರಸ ದಾಂಪತ್ಯದಲ್ಲಿ ನುಸುಳುವ ಲೈಂಗಿಕ ಒತ್ತಡ, ಪರಿಸ್ಥಿತಿ, ಸನ್ನಿವೇಶಗಳ ಪ್ರಭಾವ, ಮನಸ್ಸಿನ ಬಯಕೆಗಳು ಸಾಮಾಜಿಕ ಚೌಕಟ್ಟಿನೊಳಗೆ ಪೂರೈಕೆಯಾಗದಿರುವುದು, ಬಾಹ್ಯ ಪ್ರೇರಣೆಗಳು, ಅನಿವಾರ್ಯತೆಗಳು, ಒಡೆದ ಮನಸ್ಸು, ದಾಂಪತ್ಯದೊಳಗಿನ ಕ್ರೌರ್ಯ ಸಂದರ್ಭದ ಪರಿಣಾಮಗಳು, ವಯೋಸಹಜ ಬಯಕೆ, ಬಾಹ್ಯ ಒತ್ತಡಗಳ ಪರಿಣಾಮ, ಅಸಹನೀಯ ಬದುಕು, ವಿರಸ ಬಾಳು, ದಾಂಪತ್ಯದ ವಿಫಲತೆ, ನಿಗ್ರಹದ(ಸಪ್ರೆಷನ್) ಆಂತರಿಕ ಒತ್ತಡಗಳು ಅಸಹನೆಯನ್ನು ಹುಟ್ಟಿಸುವ ಪರಿಣಾಮ, ಅತೃಪ್ತ ಜೀವದ ಮಾನಸಿಕ ಕ್ಷೋಭೆಯೇ ಅನೈತಿಕ ಸಂಬಂಧಗಳಿಗೆ ಕಾರಣವಾಗಿರುವುದನ್ನು ಕಾದಂಬರಿಗಳು ವಿಶ್ಲೇಷಿಸುತ್ತವೆ.

ವಿವಾಹ ಧಾರ್ಮಿಕತೆಯ ಸ್ವರೂಪವನ್ನು ಪಡೆದು ಪವಿತ್ರ ಎಂಬ ಕಲ್ಪನೆಯಿದ್ದರೂ ಲೈಂಗಿಕ ಸಂಬಂಧದಲ್ಲಿ ಕಾಣಿಸಿಕೊಳ್ಳುವ ಸಮಸ್ಯೆಗಳು ವಿವಾಹಬಾಹಿರ ಸಂಬಂಧಗಳಿಗೆ ಕಾರಣವಾಗುತ್ತವೆ. ಆಗ ನೀತಿ–ಅನೀತಿಗಳ ದ್ವಂದ್ವದಲ್ಲಿ ತೊಳಲಾಡುವ ಪಾತ್ರಗಳನ್ನು ಪ್ರೇರೇಪಿಸುವ ಮೂಲ ಆಂತರಿಕ ಒತ್ತಡ ಯಾವುದು ಎಂಬುದರ ಶೋಧನೆ, ಕೌಟುಂಬಿಕ ಚೌಕಟ್ಟಿನೊಳಗೆ ದಾಂಪತ್ಯದ ಸ್ವರೂಪ, ಬಿಸಿ ಆರಿದ ಮೇಲೂ ನಡೆಯಬೇಕಾದ ಪೂರ್ಣ ಜೀವನ ದಾಂಪತ್ಯ ಎಂಬ ವಿಶ್ಲೇಷಣೆಯೂ ಕಾದಂಬರಿಗಳಲ್ಲಿದೆ.

ಅಧ್ಯಾಯ – ೫ 'ಕನ್ನಡ ಕಾದಂಬರಿಗಳಲ್ಲಿ ಸಾಮಾಜಿಕ ಸಂಬಂಧದ ಮನೋವೈಜ್ಞಾನಿಕ ನೆಲೆಗಳು' ಈ ಅಧ್ಯಾಯದಲ್ಲಿ ಸಾಮಾಜಿಕ ಮನಃಶಾಸ್ತ್ರೀಯ ಸಿದ್ಧಾಂತಗಳ ಹಿನ್ನೆಲೆಯಲ್ಲಿ ಕಾದಂಬರಿಗಳಲ್ಲಿ ಕಂಡುಬರುವ ಸಾಮಾಜಿಕ ಸಂಬಂಧಗಳ ಸ್ವರೂಪ ಮತ್ತು ಸಂಬಂಧಗಳ ಮೇಲೆ ಸಾಮಾಜಿಕ ಅಂಶಗಳ ಪ್ರಭಾವವನ್ನು ಚರ್ಚಿಸಲಾಗಿದೆ. ಸಾಮಾಜಿಕ ದೂರ(Social distance), ಸಾಮಾಜಿಕ ಅಸ್ಮಿತೆ(Social identity)ಗಳ ಬಗ್ಗೆ ಮನೋವೈಜ್ಞಾನಿಕ ನೆಲೆಯಲ್ಲಿ ಅಧ್ಯಯನ ನಡೆಸಲಾಗಿದೆ.

ಪ್ರತಿಯೊಂದು ಸಮಾಜಕ್ಕೂ ತನ್ನದೇ ಆದ ಸಂಸ್ಕೃತಿ, ಸಂಪ್ರದಾಯ, ಆಚಾರ–ವ್ಯವಹಾರಗಳು, ನೀತಿ–ನಿಯಮಗಳು, ಪದ್ಧತಿಗಳು ಮತ್ತು ಧರ್ಮ ಇತ್ಯಾದಿಗಳು ಇದ್ದೇ ಇರುತ್ತವೆ. ಸಮಾಜಕ್ಕೆ ಸೇರಿದ ಪ್ರತಿಯೊಂದು ವ್ಯಕ್ತಿಯೂ ತನ್ನ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳಲು, ಪ್ರಗತಿಯನ್ನು ಸಾಧಿಸಲು ಮತ್ತು ರಕ್ಷಣೆಯನ್ನು ಪಡೆಯಲು ಸಮಾಜದ ಕಟ್ಟುಪಾಡುಗಳಿಗೆ ಬದ್ಧನಾಗಿ ನಡೆದುಕೊಳ್ಳಬೇಕು.

ಅನ್ಯರ ಬಗ್ಗೆಯಾಗಲೀ ಅಥವಾ ತನ್ನ ಬಗ್ಗೆಯಾಗಲೀ ಪೂರ್ವಾಪರ ಆಲೋಚನೆಯಿಲ್ಲದೆ ಬೆಳೆಸಿಕೊಂಡ ಅಭಿಪ್ರಾಯವೇ 'ಪೂರ್ವಾಗ್ರಹ'. ಇದು ಸಾಮಾಜಿಕ ಸಂಪರ್ಕ, ಸೌಹಾರ್ದತೆ, ಸಂಘಟನೆಗಳಿಗೆ ಪೋಷಕವೂ ಅಗುತ್ತದೆ; ಪ್ರತಿಕೂಲವೂ ಆಗುತ್ತದೆ. ವ್ಯಕ್ತಿಯ ಸಾಮಾಜಿಕ ಜೀವನದಲ್ಲಿ ಪೂರ್ವಾಗ್ರಹದ ಪಾತ್ರ ಹಿರಿದಾದುದು. ಮಾನವ ಸಮಾಜವು ಜಾತಿ, ಮತ, ವರ್ಣ, ಜನಾಂಗ, ಭಾಷೆ, ಪ್ರಾಂತ್ಯ, ದೇಶ, ಸಂಸ್ಕೃತಿ ಇತ್ಯಾದಿಗಳ ಆಧಾರದಲ್ಲಿ ಛಿದ್ರ ಛಿದ್ರವಾಗಿ ಅನೇಕ ಸಣ್ಣ ಸಣ್ಣ ಸಮೂಹಗಳಾಗಿ ರೂಪುಗೊಂಡಿದೆ. ಇವುಗಳಲ್ಲಿ ಒಂದು ಸಮುದಾಯದವರು ಇನ್ನೊಂದು ಸಮುದಾಯದವರನ್ನು ವೃಥಾ ದ್ವೇಷಿಸುವುದು ಮತ್ತು ಅವರ ವಿಷಯದಲ್ಲಿ ಅನೇಕ ಪೂರ್ವಾಗ್ರಹಗಳನ್ನು ಬೆಳೆಸಿಕೊಳ್ಳುವುದು ಸರ್ವೇ ಸಾಮಾನ್ಯವಾಗಿ ಕಂಡುಬರುತ್ತದೆ. ಪೂರ್ವಾಗ್ರಹ ಅಧಾರರಹಿತ ನಿರ್ಣಯವಾಗಿರುವುದರೊಂದಿಗೆ ಇದರಲ್ಲಿ ಅನ್ಯರ ಬಗ್ಗೆ ಅಹಿತಕರ ಮನೋಭಾವಗಳು ಮತ್ತು ದ್ವೇಷಾಸೂಯೆಗಳೂ ಅಡಗಿರುತ್ತವೆ. ಇದರಿಂದ ಜನರಲ್ಲಿ ಭೇದಭಾವಗಳು ಮೂಡುತ್ತವೆ. ಇದರ ಪರಿಣಾಮವಾಗಿ ಕೆಲವರೊಡನೆ ಸಂಪರ್ಕ ಬೆಳೆಸುವುದು ನಿಷೇಧವಾಗುತ್ತದೆ.

ಭಾರತದಲ್ಲಿರುವ ವಿವಿಧ ಜಾತಿ, ಜನಾಂಗಗಳ ಜನರ ಬಾಹ್ಯರೂಪಗಳಲ್ಲಿ ಕೆಲವು ಲಕ್ಷಣಗಳು ಸ್ಪಷ್ಟವಾಗಿ ಕಂಡುಬರುತ್ತವೆ. ಬಾಹ್ಯದಲ್ಲಿ ಕಂಡುಬರುವ ಈ ಲಕ್ಷಣ ಭೇದಗಳನ್ನು ಸಮಾಜಬದ್ಧವಾದ ಉಡುಗೆ–ತೊಡುಗೆಗಳು, ಊಟ–ಉಪಚಾರಗಳು, ಮದುವೆ–ಮುಂಜಿಗಳನ್ನು ಮಾಡುವ ರೀತಿ ನೀತಿಗಳು ಮತ್ತಷ್ಟು ಎದ್ದು ಕಾಣುವಂತೆ ಮಾಡುತ್ತವೆ.

ಪೂರ್ವಾಗ್ರಹಗಳು ಸಂಪ್ರದಾಯ ಭೇದಗಳಿಂದ ಹಾಗೂ ಜೀವನದ ರೀತಿ–ನೀತಿಗಳಿಂದಲೂ ಉದ್ಭವವಾಗುತ್ತವೆ. ಹೆತ್ತವರು ಮತ್ತು ಹಿರಿಯರು ಈ ಭೇದಗಳನ್ನರಿತು ಅವುಗಳಿಗೆ ಅನುಗುಣವಾಗಿ ವರ್ತಿಸುವಂತೆ ಒತ್ತಾಯಿಸುವುದರಿಂದ ಮತ್ತು ಸಮಯೋಚಿತ ಪ್ರೋತ್ಸಾಹ ನೀಡುವುದರಿಂದ ಈ ಪೂರ್ವಾಗ್ರಹಗಳು ರೂಪುಗೊಳ್ಳುತ್ತವೆ. ಇದು ವ್ಯಕ್ತಿಯಲ್ಲಿ ಅಂತರ್ಗತವಾಗಿರುವ ಆತನ ಮತೀಯತೆ ಮತ್ತು ಸಂಪ್ರದಾಯಗಳನ್ನು ಅವಲಂಬಿಸಿದೆ. ಈ ಪೂರ್ವಾಗ್ರಹಗಳು ಸಾಮಾಜಿಕ ಅಂತರ ಮತ್ತು ಮನೋಭಾವಗಳಲ್ಲಿ ವ್ಯಕ್ತವಾಗುತ್ತವೆ. ಜನರು ಅನ್ಯರ ಬಗ್ಗೆ ಪೂರ್ವಾಗ್ರಹಪೀಡಿತ ಮಾನಸಿಕ ಚಿತ್ರಗಳನ್ನು ಹೊಂದಿರುತ್ತಾರೆ. ವ್ಯಕ್ತಿಯ ಪ್ರತ್ಯಕ್ಷಾನುಭವ ಸಂಪೂರ್ಣವಾಗಿ ನೈಜತೆಯನ್ನು ಅವಲಂಬಿಸಿದ್ದರೂ ಬಹಳ ಮಟ್ಟಿಗೆ ಆತನ ಪೂರ್ವಾನುಭವಗಳನ್ನು ಅವಲಂಬಿಸಿರುತ್ತದೆ. ಆದುದರಿಂದ ಒಬ್ಬ ವ್ಯಕ್ತಿಯನ್ನು ನೋಡುವಾಗ ಆತ ಕೇವಲ ಒಬ್ಬ ವ್ಯಕ್ತಿ ಎಂದು ನೋಡುವುದಿಲ್ಲ; ಬದಲಾಗಿ ಆತನ ಜಾತಿ, ಧರ್ಮ, ದೇಶ, ಜನಾಂಗ ಇತ್ಯಾದಿಗಳ ಹಿನ್ನೆಲೆಯಲ್ಲಿ ನೋಡುತ್ತಾರೆ. ಹೀಗೆ ವ್ಯಕ್ತಿಯನ್ನು ಸಮೂಹದ ಹಿನ್ನೆಲೆಯಲ್ಲಿ ನೋಡುವಾಗ ಆ ಸಮೂಹದ ಗುಣಗಳನ್ನು ಆತನಿಗೆ ಆರೋಪಿಸುವುದೂ ಇದೆ. ಹೀಗಾಗಿ ಒಬ್ಬ ವ್ಯಕ್ತಿಯನ್ನು ನೋಡಿದಾಗ ಆತನನ್ನು ಕೇವಲ ಒಬ್ಬ ವ್ಯಕ್ತಿ ಎಂದು ನೋಡುವ ಬದಲು ಆಯಾ ವರ್ಗಕ್ಕೆ ಸೇರಿದ ವ್ಯಕ್ತಿ ಎಂದು ಪರಿಗಣಿಸುತ್ತೇವೆ. ವ್ಯಕ್ತಿ ಯಾವ

ಗುಂಪಿಗೆ ಸೇರಿದವನೆಂಬುದನ್ನು ತಿಳಿಯಲು ಆತನ ಹೆಸರು, ಉಡುಪು, ರೂಪ, ಭಾಷೆ ಇತ್ಯಾದಿಗಳೂ ಸಹಕರಿಸುತ್ತವೆ.

ಇಲ್ಲಿ ಸಮಾಜದಲ್ಲಿ ಮಾನವ ಸಂಬಂಧ ರೂಪುಗೊಳ್ಳುವ ಬಗೆ, ಸಾಮಾಜಿಕ ಸಂಬಂಧಗಳು ಉಂಟುಮಾಡುವ ಭಾವನಾತ್ಮಕ ಸಂಘರ್ಷಗಳ ವಿಶ್ಲೇಷಣೆಗೆ 'ಶಿಕಾರಿ'(ಯಶವಂತ ಚಿತ್ತಾಲ), 'ತಬ್ಬಲಿಯು ನೀನಾದೆ ಮಗನೆ'(ಎಸ್, ಎಲ್. ಭೈರಪ್ಪ) ಕಾದಂಬರಿಗಳನ್ನು ಬಳಸಿಕೊಳ್ಳಲಾಗಿದೆ. ವ್ಯಕ್ತಿಯ ಬಾಲ್ಯ, ಕುಟುಂಬ, ಪರಿಸರ, ಸಂಸ್ಕೃತಿಗಳೆಲ್ಲವೂ ಸಾಮಾಜಿಕ ಸಂಬಂಧದ ಸ್ವರೂಪವನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ ಎಂಬುದು ಕಾದಂಬರಿಯ ವಿಶ್ಲೇಷಣೆಯ ಮೂಲಕ ದೃಢವಾಗಿದೆ.

ಯಶವಂತ ಚಿತ್ತಾಲರ ಕಾದಂಬರಿಗಳಲ್ಲಿ ಮನುಷ್ಯ ಸ್ವಭಾವದ ಕ್ರೌರ್ಯದ ಚಿತ್ರಣದೊಂದಿಗೆ ಮಾನವನ ಅಂತರಂಗದ ವಿಶ್ಲೇಷಣೆಯನ್ನೂ ಕಾಣಬಹುದಾಗಿದೆ. ಮನುಷ್ಯ ಸ್ವಭಾವ ಮತ್ತು ಸಂಬಂಧಗಳ ಶೋಧನೆಯೇ ಇವರ ಕಾದಂಬರಿಗಳ ತಿರುಳಾಗಿದ್ದು, ಇವರ ಕಾದಂಬರಿಗಳು ಮಾನವ ಸಂಬಂಧದಲ್ಲಿನ ಬಿರುಕು, ಒಂಟಿತನ, ದ್ವಂದ್ವ, ಅನಾಥಪ್ರಜ್ಞೆಯ ವಿವರಗಳಿಂದೊಡಗೂಡಿರುತ್ತವೆ. ವ್ಯಕ್ತಿಯ ವ್ಯಕ್ತಿತ್ವ ವಿಕಸನದಲ್ಲಿ ಪಾಲ್ಗೊಳ್ಳುವ ಸಾಮಾಜಿಕ, ಸಾಂಸ್ಕೃತಿಕ ಅಂಶಗಳು ಮಾನವ ಸಂಬಂಧಗಳ ಸ್ವರೂಪವನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಮನುಷ್ಯನ ವ್ಯಕ್ತಿತ್ವ ಅರಳಲು ವ್ಯಕ್ತಿ–ವ್ಯಕ್ತಿಗಳ ನಡುವೆ ಸಂಬಂಧ ಅನಿವಾರ್ಯ. ಆದರೆ ಈ ಸಂಬಂಧ ಸಫಲವಾಗಬೇಕಾದರೆ ಇಬ್ಬರ ನಡುವೆ ಸಾಮರಸ್ಯ ಅವಶ್ಯಕ. ಆದರೆ ನಗರ ಪರಿಸರದ ನಾನಾ ಒತ್ತಡಗಳು ವ್ಯಕ್ತಿಯ ಮೇಲೆ ಬೀರುವ ಪ್ರಭಾವ ಹಾಗೂ ಆಧುನಿಕತೆಯ ಪರಿಣಾಮ ವ್ಯಕ್ತಿಗಳು ಪರಸ್ಪರ ಅರ್ಥೈಸಿಕೊಳ್ಳುವಲ್ಲಿ ವಿಫಲರಾಗುತ್ತಿದ್ದಾರೆ ಎಂಬುದನ್ನು ಇವರು ಕಾದಂಬರಿಗಳಲ್ಲಿ ತೋರಿಸಿದ್ದಾರೆ.

ಆಧುನಿಕತೆಯಿಂದಾಗಿ ಕುಟುಂಬ ಹಾಗೂ ಮಾನವ ಸಂಬಂಧಗಳ ಸ್ವರೂಪ ಬದಲಾಗುತ್ತಿದೆ. ನಗರೀಕರಣದ ನವೀನ ಸಂಸ್ಕೃತಿ ಮನುಷ್ಯನನ್ನು ಸಂಕೀರ್ಣಗೊಳಿಸುತ್ತಿದೆ. ಆಧುನಿಕ ನಗರಗಳು ಮಾನವನ ಬದುಕಿನಲ್ಲಿ ಹೊಸ ಹೊಸ ಸಮಸ್ಯೆಗಳನ್ನು ಸೃಷ್ಟಿಸುತ್ತಿವೆ. ಪರಿಣಾಮ ಮನುಷ್ಯ ಸಾಂಘಿಕ ನೆಲೆಯಿಂದ ಪ್ರತ್ಯೇಕತೆಯ ಕಡೆಗೆ ಸರಿಯುತ್ತಿದ್ದಾನೆ. ಇವರ ಕಾದಂಬರಿಗಳು ಮಾನವ ಸಂಬಂಧಗಳಿಗೆ ಸಂಬಂಧಿಸಿದಂತೆ ಈ ಕೆಳಗಿನ ಅಂಶಗಳ ಮೇಲೆ ಬೆಳಕನ್ನು ಚೆಲ್ಲುವುದನ್ನು ಕಾಣಬಹುದಾಗಿದೆ:

೧. ವ್ಯಕ್ತಿ ಬೆಳೆದ ಪರಿಸರ, ಚಿಂತನಕ್ರಮ, ಜೀವನಾನುಭವಗಳು ವ್ಯಕ್ತಿಯ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರುವುದರೊಂದಿಗೆ ವ್ಯಕ್ತಿಯು ಇತರರೊಂದಿಗೆ ಹೊಂದುವ ಸಂಬಂಧದ ಸ್ವರೂಪವನ್ನು ನಿರ್ಧರಿಸುತ್ತವೆ.

೨. ನಗರದಲ್ಲಿನ ಉದ್ವೇಗ, ಭಯ, ಆತಂಕ, ಸಂಘರ್ಷಗಳ ಕಾರಣ ವ್ಯಕ್ತಿಯು ಇತರರೊಂದಿಗೆ ಧನಾತ್ಮಕ ಸಂಬಂಧವನ್ನು ಬೆಳೆಸಿಕೊಳ್ಳಲಾಗುತ್ತಿಲ್ಲ.

೩. ಆಧುನಿಕ ಮಹಾನಗರದ ಔದ್ಯಮಿಕ ಪೈಪೋಟಿಯಿಂದಾಗಿ ಕಾಣಿಸಿಕೊಂಡಿರುವ ಸ್ಪರ್ಧಾತ್ಮಕ ಮನೋಭಾವದಿಂದಾಗಿ ಮಾನವ ಸಂಬಂಧಗಳು ಕ್ರೂರ ವರ್ತನೆಯಿಂದೊಡಗೂಡಿವೆ.

೪. ವ್ಯಕ್ತಿಯ ಸಂಬಂಧಗಳ ಸಮಸ್ಯೆಯ ಮೂಲಬೇರು ಸಾಮಾಜಿಕ ಜೀವನದ ವಿಷಮತೆಯೇ ಆಗಿದೆ.

೫. ನಗರ ಪರಿಸರದ ನಾನಾ ಒತ್ತಡಗಳು ವ್ಯಕ್ತಿಯ ಮೇಲೆ ಬೀರುವ ಪರಿಣಾಮದಿಂದಾಗಿ ಆರೋಗ್ಯಪೂರ್ಣ ವ್ಯಕ್ತಿ ಸಂಬಂಧ ಹೊಂದಲು ಸಾಧ್ಯವಾಗುತ್ತಿಲ್ಲ.

೬. ಬಂಡವಾಳಶಾಹಿ ವ್ಯವಸ್ಥೆ ಮನುಷ್ಯನ ಮೇಲೆ ನಡೆಸುವ ಕ್ರೌರ್ಯದ ಪರಿಣಾಮ ಉಂಟಾದ ಮಾನವ ಸಂಬಂಧದ ಪೊಳ್ಳುತನವನ್ನು, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಮಾನವ ಸಂಬಂಧಗಳಿಗಿಂತ ಹಣವೇ ಪ್ರಧಾನವಾದುದು ಎಂಬುದನ್ನು ವಿಶ್ಲೇಷಿಸುತ್ತಾರೆ.

೭. ಆಧುನಿಕ ಜಗತ್ತಿನಲ್ಲಿ ಮಾನವ ಸಂಬಂಧಗಳ ನಡುವೆ ಉದ್ಭವಿಸಿರುವ ಗೋಡೆಗಳ ಪರಿಣಾಮ ಮನುಷ್ಯ ಒಂಟಿತನದಲ್ಲಿ ಬದುಕುತ್ತಿರುವುದರ ಚಿತ್ರಣವಿದೆ.

೮. ನಗರದ ಬದುಕಿನಲ್ಲಿ ಸಂಬಂಧಗಳಲ್ಲಿ ಬೇರು ಬಿಟ್ಟಿರುವ ಅಸಹನೀಯತೆಯ ಸ್ವರೂಪದ ಚಿತ್ರವಿದೆ.

೯. ನಗರದಲ್ಲಿ ಮಾನವರ ನಡುವೆ ಇರುವ ಮಾನವೀಯತೆಯ ಕೊರತೆಯೊಂದಿಗೆ, ನಗರದಲ್ಲಿ ಮಾನವೀಯ ಸಂಬಂಧಗಳಿಗಿಂತ ವ್ಯಾವಹಾರಿಕ ಸಂಬಂಧಕ್ಕೇ ಹೆಚ್ಚಿನ ಮಹತ್ವವಿರುವುದನ್ನು ಕಾಣಬಹುದಾಗಿದೆ.

೧೦. ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ಕಾರಣಗಳಿಂದಾಗಿ ನಿರ್ಬಂಧಿತವಾದ ಮಾನವ ಸಂಬಂಧದ ಚಿತ್ರಣವಿದೆ.

೧೧. ಮುಂಬೈ ನಗರದ ಸಂಕೀರ್ಣತೆಯೊಂದಿಗೆ ಸಂಕೀರ್ಣ ಹಾಗೂ ಸಂಕುಚಿತಗೊಂಡ ಸಾಮಾಜಿಕ, ಕೌಟುಂಬಿಕ ಸಂಬಂಧಗಳ ಚಿತ್ರಣವನ್ನೂ, ಮಾನವನ ಸಂಬಂಧದ ಸ್ವರೂಪವನ್ನು ನಿರ್ಧರಿಸುವಲ್ಲಿ ಸಾಮಾಜಿಕ ಅಂಶಗಳ ಪಾತ್ರವನ್ನೂ, ಒಬ್ಬನು ಇನ್ನೊಬ್ಬನನ್ನು ಉಪಯೋಗಿಸಿಕೊಳ್ಳುವ ಸುಳ್ಳು ಸಂಬಂಧವನ್ನೂ ವಿಶ್ಲೇಷಿಸುತ್ತಾರೆ.

ಚಿತ್ತಾಲರ 'ಶಿಕಾರಿ' ಕಾದಂಬರಿಯ ಕೇಂದ್ರ ಪಾತ್ರವಾದ ನಾಗಪ್ಪ ಆಧುನಿಕತೆ ಹಾಗೂ ಬಂಡವಾಳಶಾಹಿಯ ಪರಿಣಾಮ ಅನುಭವಿಸುವ ತುಮುಲಗಳನ್ನು ಮತ್ತು ಆತನ ಬಾಲ್ಯದ ಅನುಭವಗಳ ಮೂಲಕ ನಿಯಂತ್ರಿಸಲ್ಪಡುವ ಹಾಗೂ ಆತ ಇತರರೊಂದಿಗೆ ಹೊಂದುವ ಸಂಬಂಧವನ್ನು, ಆ ಮೂಲಕ ಕೊನೆಗೆ ತಲುಪುವ ತೀರ್ಮಾನವನ್ನು ವಿಶ್ಲೇಷಿಸುವ ಮೂಲಕ ಮಾನವ ಸಂಬಂಧದ ಸ್ವರೂಪವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಭಾರತೀಯ ಸಂಸ್ಕೃತಿಯ ಪಾರಂಪರಿಕ ಮೌಲ್ಯದ ವಿವರಗಳನ್ನೊಳಗೊಂಡ ಎಸ್. ಎಲ್. ಭೈರಪ್ಪ ಅವರ 'ತಬ್ಬಲಿಯು ನೀನಾದೆ ಮಗನೆ' ಕಾದಂಬರಿಯು ಬದಲಾದ ಕಾಲದೊಂದಿಗೆ, ಆಧುನಿಕತೆಯ ಆಗಮನದೊಂದಿಗೆ ಅರಿವಿಲ್ಲದೇ ಮೌಲ್ಯಗಳ ಬಗ್ಗೆ ಮನಸ್ಸಿನಲ್ಲಾದ ಭಾವನೆಗಳ ಬದಲಾವಣೆಯನ್ನೂ ಚಿತ್ರಿಸುತ್ತದೆ. ಇದು ಎರಡು ವಿಭಿನ್ನ ಸಂಸ್ಕೃತಿಗಳ ಮೌಲ್ಯ ಸಂವೇದನೆಗಳ ನಡುವಿನ ಸಂಘರ್ಷ ಮಾತ್ರವಲ್ಲ; ಆ ಸಂಸ್ಕೃತಿಯಲ್ಲಿ ಅಂತರ್ಗತವಾಗಿರುವ ಮೌಲ್ಯಗಳ ಘರ್ಷಣೆಯ ಕಾರಣವನ್ನೂ ವಿಶ್ಲೇಷಿಸುತ್ತದೆ. ಈ ಕಾದಂಬರಿಯಲ್ಲಿ ಸಾಂಸ್ಕೃತಿಕ ತೊಡಕಿನ ಕಾರಣದಿಂದಾಗಿ ಉದ್ಭವಿಸುವ ಭಾವನಾತ್ಮಕ ಸಂಘರ್ಷವನ್ನು ಈ ಕೆಳಗಿನ ಮಾದರಿಗಳಲ್ಲಿ ಚರ್ಚಿಸಲಾಗಿದೆ:

೧. ಪಾಶ್ಚಾತ್ಯ ಮತ್ತು ಭಾರತೀಯ ಚಿಂತನೆಗಳ ನಡುವಿನ ಭಿನ್ನತೆಗಳು

೨. ಬದಲಾದ ಸಾಂಸ್ಕೃತಿಕ ಮೌಲ್ಯ ಮತ್ತು ನಂಬಿಕೆ

೩. ಸಂಪ್ರದಾಯಸ್ಥ ಮನಸ್ಸು ಮತ್ತು ಆಧುನಿಕ ಜೀವನ ವಿಧಾನಗಳ ನಡುವಿನ ಸಂಘರ್ಷ

೪. ಸಂಪ್ರದಾಯಬದ್ಧ ವಿಚಾರ ಮತ್ತು ಆಧುನಿಕ ವಿಚಾರಧಾರೆಗಳ ನಡುವಿನ ಸಂಘರ್ಷ

೫. ಯಂತ್ರ ನಾಗರಿಕತೆಯ ಪರಿಣಾಮ

ಇದರೊಂದಿಗೆ ಇಲ್ಲಿ ಮೂರು ಮಾದರಿಯ ಪಾತ್ರಗಳನ್ನು ಗುರುತಿಸಬಹುದಾಗಿದೆ:

೧. ಸಾಂಪ್ರದಾಯಿಕ ಮೌಲ್ಯಗಳ ಪ್ರತೀಕವಾಗಿರುವ ಪಾತ್ರಗಳು

೨. ಆಧುನಿಕ ವಿಚಾರಧಾರೆಗಳ ಪ್ರತೀಕವಾಗಿರುವ ಪಾತ್ರ

೩. ಅತ್ತ ಸಾಂಪ್ರದಾಯಿಕ ಮೌಲ್ಯಗಳನ್ನು ಸಂಪೂರ್ಣ ನಿರಾಕರಿಸಲೂ ಆಗದ ಇತ್ತ ಆಧುನಿಕ ವಿಚಾರಧಾರೆಗಳಿಗೆ ಪೂರ್ತಿಯಾಗಿ ಹೊಂದಿಕೊಳ್ಳಲೂ ಆಗದ ಪಾತ್ರ

ಪೂರ್ವಾಗ್ರಹದ ಒಂದು ರೂಪ ಸಾಮಾಜಿಕ ಅಂತರ. ಈ ಪ್ರತ್ಯಯವನ್ನು ಸಮಾಜಶಾಸ್ತ್ರಜ್ಞನಾದ ಪಾರ್ಕ್ ವಿವಿಧ ಗುಂಪುಗಳ ಅಥವಾ ವಿವಿಧ ಸಮಾಜಗಳ ನಡುವೆ ಇರುವ ಸಾಮಾಜಿಕ ಸಾಮೀಪ್ಯ ಅಥವಾ ಅಂತರವನ್ನು ವಿವರಿಸಲು ಮೊದಲು ಬಳಸಿದನು. ಬೊಗಾರ್ಡಸ್ ಪ್ರಕಾರ ಪೂರ್ವಾಗ್ರಹ ಪೀಡಿತವಾದ ಒಂದು ಸಮೂಹ ಮತ್ತೊಂದು ಸಮೂಹವನ್ನು ಅಥವಾ ಸಮೂಹದ ವ್ಯಕ್ತಿಗಳನ್ನು ತಮ್ಮ ಸಮೂಹದಿಂದ ಮಾನಸಿಕವಾಗಿ ಎಷ್ಟು ದೂರದಲ್ಲಿಡುತ್ತಾರೆ ಎನ್ನುವುದೇ ಸಾಮಾಜಿಕ ಅಂತರ. ಡಾಡ್ಜ್ ಇದನ್ನೇ 'ಮಾನಸಿಕ ಸಾಮೀಪ್ಯದ ಭಾವನೆ' ಎಂದಿದ್ದಾನೆ.

ಸಾಮಾಜಿಕ ಅಂತರವು ಸಮಾಜದಲ್ಲಿನ ವಿವಿಧ ಗುಂಪುಗಳ ನಡುವಿನ ಅಂತರವನ್ನು ವಿವರಿಸುತ್ತದೆ. ಉದಾಹರಣೆಗೆ ಸಾಮಾಜಿಕ ವರ್ಗ, ಜನಾಂಗ/ಜನಾಂಗೀಯತೆಗಳು, ಲಿಂಗ, ವಿಭಿನ್ನ ಗುಂಪುಗಳು ಒಂದೇ ಗುಂಪಿನ ಸದಸ್ಯರಿಗಿಂತ ಕಡಿಮೆ ಬೆರೆಯುತ್ತಾರೆ. ಒಂದು ಗುಂಪು ಇನ್ನೊಂದು ಗುಂಪಿನ ಬಗ್ಗೆ ಹೊಂದಿರುವ ನಂಬಿಕೆ ಮತ್ತು ಸಹಾನುಭೂತಿಗಳು ಸಾಮಾಜಿಕ ಸಂಬಂಧ ಮತ್ತು ಸದಸ್ಯರ ನಡುವಿನ ಅನ್ಯೋನ್ಯತೆಯ ಮಟ್ಟವನ್ನು ನಿರ್ಧರಿಸುತ್ತವೆ. ಗುಂಪುಗಳು ಯಾರನ್ನು

ಒಳಗಿನವರು ಮತ್ತು ಯಾರನ್ನು ಹೊರಗಿವನವರು ಎಂದು ಪರಿಗಣಿಸುವ ಬಗ್ಗೆ ವ್ಯಾಪಕವಾಗಿ ಅಂಗೀಕರಿಸಲ್ಪಟ್ಟ ಸಾಮಾನ್ಯ ರೂಪುರೇಷೆಗಳನ್ನು ಪ್ರಜ್ಞಾಪೂರ್ವಕವಾಗಿ ವ್ಯಕ್ತಪಡಿಸುತ್ತಾರೆ. ಎರಡು ಗುಂಪಿನ ಸದಸ್ಯರು ಪರಸ್ಪರ ಆಗಾಗ್ಗೆ ಸಂವಹನವನ್ನು ನಡೆಸಿದರೂ ಅವರ ಸಂಬಂಧವು ಸದಾ ನಿಕಟವಾಗಿರುತ್ತದೆ ಎಂದು ಅರ್ಥವಲ್ಲ. ಸಾಮಾನ್ಯವಾಗಿ ವ್ಯಕ್ತಿಯು ತನ್ನ ಸಂಸ್ಕೃತಿಯನ್ನು ಇತರ ಎಲ್ಲ ಸಂಸ್ಕೃತಿಗಳಿಂದ ಶ್ರೇಷ್ಠ ಎಂದು ಭಾವಿಸುತ್ತಾನೆ ಮತ್ತು ಇತರ ಸಂಸ್ಕೃತಿಗಳು ಅವರ ಸಂಸ್ಕೃತಿಯಿಂದ ಭಿನ್ನವಾಗಿರುವುದರಿಂದ ಅದನ್ನು ಕೀಳು ಎಂದು ಭಾವಿಸಲಾಗುತ್ತದೆ. ಹೀಗೆ ಪ್ರತಿಯೊಬ್ಬರೂ ಅವರವರ ಸಂಸ್ಕೃತಿಯ ಬಗ್ಗೆ ಪ್ರೀತಿಯನ್ನೂ, ಇನ್ನೊಂದು ಗುಂಪಿನ ಬಗ್ಗೆ ಪೂರ್ವಾಗ್ರಹಗಳನ್ನೂ ಹೊಂದಿರುತ್ತಾರೆ. ಇದರ ಪರಿಣಾಮವಾಗಿ – ವ್ಯಕ್ತಿಗಳು ಅಥವಾ ಗುಂಪುಗಳು ಪರಸ್ಪರ ಹತ್ತಿರ ಬರುವಂತೆ ಅಥವಾ ಪರಸ್ಪರ ದೂರ ಸರಿಯುವಂತೆ ಮಾಡುತ್ತದೆ ಅಥವಾ ದ್ವಂದ್ವ ಮನೋಭಾವಗಳನ್ನು ಮೂಡಿಸುತ್ತದೆ. ಪೂರ್ವಾಗ್ರಹಪೀಡಿತ ನಂಬಿಕೆ ಮತ್ತು ಮನೋಭಾವಗಳ ಫಲವಾಗಿ ಕಾಣಿಸಿಕೊಳ್ಳುವ ವರ್ತನೆಗಳು: ಮುಖ್ಯವಾಗಿ - ದೂರ ಮಾಡುವುದು/ದೂರವಿಡುವುದು, ದೂರುವುದು, ಭೇದಭಾವ ಮಾಡುವುದು, ಆಕ್ರಮಣ ಮಾಡುವುದು, ಮನೋಭಾವ ಮಿತಿಮೀರಿದಾಗ ನಿರ್ಮೂಲನೆ ಮಾಡುವುದು.

ಸಾಮಾಜಿಕ ಅಂತರವನ್ನು ಕಾಪಾಡುವ ಜಾತಿಯು ಜನರು ಒಪ್ಪಿಕೊಂಡ ಜೀವನಕ್ರಮವಾದುದರಿಂದ ಮೇಲು–ಕೀಳಿನ ಭಾವನೆಯು ಭಾವನೆಯ ಮಟ್ಟಕ್ಕೆ ಮಾತ್ರ ಉಳಿಯದೆ ದಿನನಿತ್ಯದ ಮಾತು, ವಿಚಾರ, ಸ್ವಭಾವ, ವರ್ತನೆಗಳಲ್ಲಿ ಕಾಣಿಸಿಕೊಂಡು ಸ್ಪೃಶ್ಯ–ಅಸ್ಪೃಶ್ಯದಲ್ಲಿ ಪ್ರಕಟಗೊಳ್ಳುತ್ತದೆ. ಎಲ್ಲಾ ಜಾತಿಯಲ್ಲೂ ಮೇಲು ಹಾಗೂ ಕೆಳವರ್ಗದವರಿದ್ದಾರೆ. ಅಂತೆಯೇ ಎಲ್ಲಾ ವರ್ಗಗಳಲ್ಲೂ ಕೆಳ ಮತ್ತು ಮೇಲು ಜಾತಿಯವರಿದ್ದಾರೆ.

ಅಂತೆಯೇ ತಾನು ನಂಬಿದ ಮತವೇ ತನಗೆ ತೊಡಕು ಎನಿಸಿದಾಗ ವ್ಯಕ್ತಿಯು ಮತ್ತೊಂದು ಮತಕ್ಕೆ ಸೇರಲು ಬಯಸುತ್ತಾನೆ. ಮತಾಂತರದ ತಲ್ಲಣಗಳು ಎಲ್ಲ ತಲೆಮಾರುಗಳನ್ನು ಆವರಿಸಿಕೊಂಡು ಸಮುದಾಯದೊಳಗೆ ಸಂಚಲನಗಳನ್ನು ಸೃಷ್ಟಿಸುವುದನ್ನು ಕನ್ನಡ ಕಾದಂಬರಿಗಳು ಚಿತ್ರಿಸಿರುವುದನ್ನು ಕಾಣಬಹುದಾಗಿದೆ. ಪರಂಪರೆ ಮತ್ತು ಆಧುನಿಕ ವಿಚಾರಗಳ ನಡುವಿನ ಸಂಘರ್ಷ ಹಳೆಯ ಮತ್ತು ಹೊಸ ತಲೆಮಾರುಗಳ ಸಂಘರ್ಷಕ್ಕೂ ಕಾರಣವಾಗುತ್ತದೆ. ವೈಯಕ್ತಿಕ ತಲ್ಲಣಗಳು ಸಮುದಾಯದ ತಲ್ಲಣಗಳಾಗಿ ಮಾರ್ಪಾಡಾಗುತ್ತವೆ. ಹಿರಿಯರು ಅವರದೇ ಆದ ಕಾರಣಗಳಿಗಾಗಿ ಮತಾಂತರವನ್ನು ನಿರಾಕರಿಸುತ್ತಾರೆ. ಹಿರಿಯ ತಲೆಮಾರು ಮತಾಂತರವನ್ನು ಒಪ್ಪಿಕೊಳ್ಳುವ ಅನಿವಾರ್ಯತೆಯ ಸಂದರ್ಭ ಎದುರಾದಾಗ ಮೂಲಮತದ ಸೆಳೆತವನ್ನು ಉಳಿಸಿಕೊಂಡು ಎರಡು ಮತಗಳ ಆಚರಣೆಯನ್ನು ಸರಿದೂಗಿಸಿಕೊಳ್ಳಲು ರಾಜಿಯಾಗುತ್ತಾರೆ. ಕಟ್ಟುಪಾಡುಗಳ ಬಂಧನ, ಸಾಮಾಜಿಕ ಅಸಮಾನತೆ, ಆತ್ಮಗೌರವಕ್ಕೆ ಹಾನಿ, ವ್ಯಕ್ತಿ ಸ್ವಾತಂತ್ರ್ಯಹರಣ, ಆರ್ಥಿಕ ಪರಿಸ್ಥಿತಿ, ಆಧುನಿಕ

ಶಿಕ್ಷಣ, ಪ್ರಗತಿಪರ ಚಿಂತನೆ, ಅಧಿಕಾರ ದಾಹ ಮೊದಲಾದವು ಮತಾಂತರಕ್ಕೆ ಪ್ರೇರಣೆಯನ್ನು ಒದಗಿಸುವುದನ್ನೂ, ಅಂತರ್‌ಮತೀಯ ಅಥವಾ ಅಂತರ್‌ಜಾತಿ ವಿವಾಹದ ಸಂದರ್ಭಗಳಲ್ಲಿ ಹೆಸರಿನ ಬದಲಾವಣೆಯೂ ಸಾಂಸ್ಕೃತಿಕ ಸಂಘರ್ಷದ ರೂಪವೇ ಆಗಿರುವುದನ್ನೂ, ಮೂಲ ಮತ ಮತ್ತು ಸಂಘರ್ಷದಿಂದ ಹೊರಬಂದ ವ್ಯಕ್ತಿ ಮತಾಂತರವಾದ ನಂತರವೂ ಮತೀಯ ಕಾರಣಕ್ಕಾಗಿ ಘರ್ಷಣೆಯ ಬಲಿಪಶುವಾಗುವುದಾದರೆ ಯಾವ ಮತಗಳೂ ಮನುಷ್ಯನ ಒಳಿತಿಗಿಲ್ಲ ಎಂಬ ಭಾವ ಕಾಡುವುದನ್ನೂ ಕಾದಂಬರಿಗಳ ವಿಶ್ಲೇಷಣೆಯ ಮೂಲಕ ಗುರುತಿಸಲಾಗಿದೆ. ಅಂತೆಯೇ ಕೆಲವೊಮ್ಮೆ ಮತಾಂತರವಾದ ನಂತರ ಅಥವಾ ಬೇರೆ ಧರ್ಮವನ್ನು ಸ್ವೀಕರಿಸಿದ ನಂತರ ಆ ಮತ/ಧರ್ಮದಲ್ಲಿ ಹುಟ್ಟಿದವರಿಗಿಂತಲೂ ಹೆಚ್ಚು ನಿಷ್ಠೆಯಿಂದ ನಡೆದುಕೊಳ್ಳುವುದನ್ನು ಗಮನಿಸಬಹುದಾಗಿದೆ. ಇದು ಮಾನಸಿಕವಾಗಿ ವ್ಯಕ್ತಿಯನ್ನು ಕಾಡುವ ದ್ವಂದ್ವದ ಪರಿಣಾಮವಾಗಿದೆ. ತಾನು ಹೆಚ್ಚು ನಿಷ್ಠೆಯಿಂದ ನಡೆದುಕೊಳ್ಳುವ ಮೂಲಕ ತನ್ನ ನಿರ್ಧಾರ ಸರಿಯಾದುದೇ ಆಗಿದೆ ಎಂದು ವ್ಯಕ್ತಿ ತನ್ನನ್ನು ತಾನು ಸಮರ್ಥಿಸಿಕೊಳ್ಳುತ್ತಾನೆ.

ಮನುಷ್ಯ–ಮನುಷ್ಯರ ನಡುವಿನ ಸಂಬಂಧಕ್ಕಿಂತ ಮನುಷ್ಯ–ಸಮಾಜದ ನಡುವಿನ ಸಂಬಂಧ ಜಟಿಲವಾದುದು. ಎಲ್ಲ ಸಮಾಜದ ಸಮಸ್ಯೆಯೂ ಈ ಸಂಬಂಧವನ್ನು ಹೆಚ್ಚು ಅರ್ಥಪೂರ್ಣವಾಗಿಸುವುದು ಹೇಗೆಂಬುದೇ ಆಗಿದೆ. ವ್ಯಕ್ತಿ ತಾನೊಬ್ಬನೇ ಇದ್ದಾಗ ಯೋಚಿಸುವ ರೀತಿಗೂ ಸಮುದಾಯದಲ್ಲಿದ್ದಾಗ ಯೋಚಿಸುವ ರೀತಿಗೂ ಭಿನ್ನತೆಯಿರುತ್ತದೆ. ಸಾಮಾಜಿಕ ಸನ್ನಿವೇಶಗಳು ಮಾನವನ ವರ್ತನೆ, ಯೋಚನೆಯನ್ನು ನಿರ್ಧರಿಸುತ್ತವೆ.

ಅಸ್ಪೃಶ್ಯತೆಯ ಚಿತ್ರಣವನ್ನು ಕನ್ನಡದ ಬಹುತೇಕ ಕಾದಂಬರಿಗಳಲ್ಲಿ ಕಾಣಬಹುದಾಗಿದೆ. ಇವು ಅಸ್ಪೃಶ್ಯತೆಯನ್ನು ಆಚರಿಸುವವರ ಕ್ರೂರತೆಯನ್ನು, ಅಸ್ಪೃಶ್ಯತೆಗೆ ಒಳಗಾದವರ ಮೂಕವೇದನೆಯನ್ನು ಚಿತ್ರಿಸುತ್ತವೆ. ಮನುಷ್ಯ–ಮನುಷ್ಯರನ್ನು ದೂರೀಕರಿಸುವ ಈ ಕ್ರಿಯೆ ಮಾನಸಿಕವಾದುದು. ಮಾನಸಿಕ ಅಸ್ಪೃಶ್ಯತೆ ಅಂದರೆ ಎರಡು ಮನಸ್ಸುಗಳ ನಡುವೆ ನಡೆಯುವ ಅಂತರಂಗದ ಸಂವಾದಕ್ಕೆ ಸಂಬಂಧಿಸಿದ್ದು. ಅಂದರೆ – ಹೇರುವ ಮನಸ್ಥಿತಿ ಹಾಗೂ ಹೇರಿಸಿಕೊಳ್ಳುವ ಮನಸ್ಥಿತಿ ಅಥವಾ ತಾನು ಶ್ರೇಷ್ಠ/ಮೇಲು ಎಂದು ಭಾವಿಸಿಕೊಂಡ ಮನಸ್ಸು ಹಾಗೂ ತಾನು ಕೀಳು/ಅಸ್ಪೃಶ್ಯ ಎಂಬ ಮನಸ್ಥಿತಿ.

ಜಾತಿಪದ್ಧತಿಯಿಂದಾಗಿ ಜೀವನಕ್ರಮದಲ್ಲಿ ಭಿನ್ನತೆ, ವೈವಿಧ್ಯತೆಗಳೊಂದಿಗೆ ಸಾಮಾಜಿಕ, ಸಾಂಸ್ಕೃತಿಕ ಶ್ರೇಣೀಕರಣಗಳನ್ನು ಗುರುತಿಸಬಹುದಾಗಿದೆ. ಪ್ರತಿಯೊಂದು ಜಾತಿಯಲ್ಲೂ ಮೇಲ್ಜಾತಿ–ಕೆಳಜಾತಿ ಇದ್ದೇ ಇರುತ್ತದೆ. ಶೋಷಣೆಯ ಅರಿವು ಮೂಡಿದಾಗಲೂ ನಮ್ಮನ್ನು ಬೇರೆಯವರು ಶೋಷಿಸುತ್ತಿದ್ದಾರೆ ಎಂಬ ಅರಿವು ಮೂಡಿದಷ್ಟು ಸುಲಭವಾಗಿ ನಾವು ಇತರರನ್ನು ಶೋಷಿಸುತ್ತಿದ್ದೇವೆ ಎಂಬ ತಿಳಿವಳಿಕೆ ಮೂಡುವುದಿಲ್ಲ. ಇದನ್ನು ಕುವೆಂಪು ಅವರ ಕಾದಂಬರಿಗಳಲ್ಲಿ ಗಮನಿಸಬಹುದು. ಅಸ್ಪೃಶ್ಯತೆಗೆ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ರಾಜಕೀಯ, ಭಾಷಿಕ, ಬೌದ್ಧಿಕ, ಭೌತಿಕ

ಹಾಗೂ ಸಾಮಾಜಿಕ ಭಿನ್ನತೆಗಳು ಕಾರಣವಾಗುತ್ತವೆ. ಇವು ಮಾನಸಿಕವಾಗಿ ವ್ಯಕ್ತಿ–ವ್ಯಕ್ತಿಗಳ ನಡುವೆ ಅಂತರವನ್ನು ಮೂಡಿಸುತ್ತವೆ. ಅಸ್ಪೃಶ್ಯತೆಯನ್ನು ಆಚರಿಸುವವ ತಾನು ಮೇಲೆಂಬ ಭಾವನೆ, ಭ್ರಮೆಯಿಂದ ಹೊರಬರಲು ಇಚ್ಛಿಸುವುದಿಲ್ಲ ಹಾಗೂ ಅಸ್ಪೃಶ್ಯತೆಗೆ ಒಳಗಾಗುವವ ನೋವು, ಅಪಮಾನಗಳನ್ನು ಸಹಿಸುತ್ತಾನೆ. ಆತನಿಗೆ ಸ್ಥೈರ್ಯ, ಕೆಚ್ಚು ಇಲ್ಲದಷ್ಟು ಆತ ವ್ಯವಸ್ಥೆಯಿಂದ ದುರ್ಬಲನಾಗಿರುತ್ತಾನೆ.

ಸ್ಪೃಶ್ಯ–ಅಸ್ಪೃಶ್ಯ, ಮೇಲು–ಕೀಳು ಎಂಬ ತಾರತಮ್ಯ ಹುಟ್ಟಲು ಜೀವನ ವಿಧಾನ, ಆಹಾರ ಪದ್ಧತಿಗಳೂ ಕಾರಣವಾಗುತ್ತವೆ. ಸಸ್ಯಾಹಾರಿಗಳಿಗೆ ಮಾಂಸಾಹಾರಿಗಳು ಅಸ್ಪೃಶ್ಯರಾದರೆ, ಮಾಂಸಾಹಾರಿಗಳಲ್ಲೇ ಯಾವ ಪ್ರಾಣಿಗಳನ್ನು ತಿನ್ನುತ್ತಾರೆ ಎಂಬ ವ್ಯತ್ಯಾಸಗಳಿಂದ ಒಬ್ಬರು ಇನ್ನೊಬ್ಬರಿಗೆ ಅಸ್ಪೃಶ್ಯರಾಗುತ್ತಾರೆ. ಇಲ್ಲಿ ಪ್ರಾಣಿಗಳನ್ನು ಕೊಂದು ತಿನ್ನುವವರಿಗೆ ಸತ್ತ ಪ್ರಾಣಿಗಳನ್ನು ತಿನ್ನುವವರು ಅಸ್ಪೃಶ್ಯರಾಗುತ್ತಾರೆ. ಹೀಗೆ ಸಾಮಾಜಿಕ ಅಂತರದಲ್ಲಿ ಆಹಾರ ಪದ್ಧತಿಯ ಪ್ರಭಾವವೂ ಗಾಢವಾಗಿರುವುದನ್ನು ಗುರುತಿಸಬಹುದು.

ಸಮಾಜದ ಧ್ಯೇಯ ಹಾಗೂ ಇಡೀ ಮಾನವತೆಯ ಧ್ಯೇಯ ಒಂದೇ ಆದಾಗ ಮೇಲು–ಕೀಳಿನ ದುರಂತ ಹೋಗಲಾಡಿಸಲು ಸಾಧ್ಯವಾಗುವುದು. ಇಬ್ಬರೂ ಪರಿಸ್ಥಿತಿಯ ಸೊತ್ತುಗಳು; ತಮ್ಮ ಕೃತ್ಯಗಳನ್ನು ನಿಯಂತ್ರಿಸುವ ಶಕ್ತಿಯ ಅರಿವಿಲ್ಲ. ಇಬ್ಬರ ಸಲುವಾಗಿ ಪರಿಸ್ಥಿತಿ ಬದಲಾಗಬೇಕು; ಬದಲಾಯಿಸಲು ಸಾಧ್ಯವಿದೆ ಎಂಬುದನ್ನು ಸಾಹಿತ್ಯವು ಕಾಣಿಸುತ್ತದೆ.

ಸಮಾಜದಲ್ಲಿ ವ್ಯಕ್ತಿ–ವ್ಯಕ್ತಿಗಳ ಭಾವನೆ, ಆಲೋಚನೆ ಎಲ್ಲವೂ ಪರಸ್ಪರ ಭಿನ್ನವಾಗಿರುತ್ತವೆ. ಮನುಷ್ಯ–ಮನುಷ್ಯರ ನಡುವೆಯೇ ಕಂದಕವನ್ನುಂಟು ಮಾಡುವ ಅಸ್ಪೃಶ್ಯತೆ ಮನಸುಗಳ ಭಾವನೆಗಳ ಬೆರೆಯುವಿಕೆಗೆ ಅಡ್ಡಿಪಡಿಸುತ್ತದೆ. ಮೇಲ್ನೋಟಕ್ಕೆ ಅಸ್ಪೃಶ್ಯ ಸಮುದಾಯವೆಲ್ಲ ಒಂದೇ ಎಂದೆನಿಸಿದರೂ ಅದರೊಳಗೆ ಮತ್ತೆ ಅನೇಕ ಜಾತಿ, ಉಪಜಾತಿಗಳಿದ್ದು, ಅದರೊಳಗೇ ಸ್ಪೃಶ್ಯಾಸ್ಪೃಶ್ಯ ಆಚರಣೆಗಳು ರೂಢಿಯಲ್ಲಿ ಇರುವುದು ಕಂಡುಬರುತ್ತವೆ. ಅಷ್ಟೇ ಅಲ್ಲದೆ ನಿರ್ದಿಷ್ಟ ಜಾತಿಯವರಿಗೆ ನಿರ್ದಿಷ್ಟವಾದ ವೃತ್ತಿಗಳೂ, ವಿಶಿಷ್ಟವಾದ ಆಹಾರ ಪದ್ಧತಿಗಳೂ, ನಂಬಿಕೆಗಳೂ ಇದ್ದು ಈ ಭಿನ್ನತೆಗಳೇ ಅಂತರಕ್ಕೆ ಕಾರಣವಾಗಿವೆ. ಈ ಒಳವಿವರಗಳನ್ನು ಕಾದಂಬರಿಗಳು ಪರಿಭಾವಿಸಿರುವ ರೀತಿಯನ್ನು ಗಮನಿಸಬಹುದಾಗಿದೆ.

ಅಂತರಂಗದಲ್ಲಿ ಅಂಕುರಿಸಿ ಬೆಳೆಯುವ ಆಲೋಚನೆ, ಭಾವನೆ, ಕ್ರಿಯೆಗಳನ್ನು ಪ್ರೇರೇಪಿಸುವ ಜೈವಿಕ ಪ್ರಚೋದನೆಗಳು ಹಾಗೂ ಭಾವರಸಗಳು ಮತ್ತು ಪರಿಸರದಿಂದ ಆಗುವ ಪ್ರಭಾವಗಳು ಅಂದರೆ ಬಾಹ್ಯ ಜಗತ್ತಿನ ಭೌತಿಕ, ಸಾಂಸ್ಕೃತಿಕ ಆಗುಹೋಗು, ಆಚಾರ–ವ್ಯವಹಾರ, ಕಟ್ಟುಕಟ್ಟಳೆ, ಸಂಘರ್ಷಗಳ ನಡುವೆ ಹಾಗೂ ಅವುಗಳೊಳಗೇ ನಡೆಯುವ ಘರ್ಷಣೆಗಳು ವ್ಯಕ್ತಿ–ಸಮೂಹದ ವ್ಯವಹಾರಕ್ಕೆ ಪ್ರೇರಣೆಗಳಾಗುತ್ತವೆ.

ಸಮೂಹದ ವರ್ತನೆ ವ್ಯಕ್ತಿಯ ವರ್ತನೆಯ ಮೇಲೆ ತನ್ನ ಪ್ರಭಾವವನ್ನು ಬೀರುತ್ತದೆ. ಅಂತೆಯೇ ಸಾಮಾಜಿಕ ಆವರಣವು ವ್ಯಕ್ತಿಯ ವರ್ತನೆಯ ಮೇಲೆ ಬೀರುವ ಪ್ರಭಾವದ ಪರಿಣಾಮ ಬದಲಾಗುತ್ತ ಹೋಗುವ ಜೀವನದೃಷ್ಟಿಯನ್ನು ಗಮನಿಸಬಹುದಾಗಿದೆ. ಜಾತಿಯ ತೊಡಕುಗಳು ಸಮಾಜದಲ್ಲಿ ಆಳವಾಗಿ ಬೇರೂರಿರುವ ಬಗೆಯಿಂದಾಗಿ ಕೀಳರಿಮೆ, ಸಮಾಜದ ವಿರುದ್ಧ ಸಿಟ್ಟು, ಕೆಲವೊಮ್ಮೆ ಅಂತರ್ಮುಖಿಯಾಗುವ ಕ್ಷಣಗಳು, ವಿವೇಕ, ವಿವೇಚನೆ ಬಳಸಿ ಕಠಿಣ ಪರಿಸ್ಥಿತಿಗಳನ್ನು ನಿಭಾಯಿಸುವ ರೀತಿ, ಅವರ ತುಮುಲ, ದ್ವಂದ್ವಗಳು, ಅನುಭವಿಸುವ ದುಃಖ, ಮಾನಸಿಕ ಯಾತನೆ, ಆಧುನಿಕ ಬದುಕಿನಿಂದಾಗಿ ಬದಲಾದ ಸಾಮುದಾಯಿಕ ಮೌಲ್ಯ, ಬದುಕಿನ ಸ್ಥಿತ್ಯಂತರಗಳು, ಮಾನವ ಸಂಬಂಧದ ಏರುಪೇರುಗಳು, ಬದಲಾದ ಜೀವನದೃಷ್ಟಿ, ಅವಿಭಕ್ತ ಕುಟುಂಬಗಳು ವಿಭಕ್ತ ಕುಟುಂಬಗಳಾಗಲು ಕಾರಣ, ತಲೆಮಾರುಗಳ ನಡುವಿನ ವೈಚಾರಿಕ ಅಂತರ, ಹೊಂದಾಣಿಕೆಯ ಕೊರತೆ, ಸ್ವಾರ್ಥ, ದುರಾಸೆ, ಮನುಷ್ಯ-ಮನುಷ್ಯರ ಸಂಬಂಧದ ನಡುವಿನ ಸೂಕ್ಷ್ಮತೆಯ ಚಿತ್ರಗಳನ್ನು ಕಾದಂಬರಿಗಳಲ್ಲಿ ಕಾಣಬಹುದಾಗಿದೆ. ಕುಟುಂಬದಲ್ಲೇ ಒಬ್ಬೊಬ್ಬರ ನಡುವೆ ಅಂತರವಿರುವಾಗ ಸಮಾಜದ ವರ್ಗಗಳಲ್ಲಿ ಅಂತರವಿರುವುದು ಸಹಜ. ಒಂದು ಕಾಲಘಟ್ಟದಲ್ಲಿ ಒಂದು ಸಮುದಾಯ ಕ್ರಮಿಸಿದ ಬದುಕಿನ ಪಯಣ, ಆ ಬದುಕಿಗೆ ವಿಶಿಷ್ಟ ಆಚರಣೆ-ನಂಬಿಕೆ, ಆಹಾರ-ಪಾನೀಯ, ರೀತಿ-ರಿವಾಜು ಎಲ್ಲವೂ ಇವುಗಳ ಮೇಲೆ ಪರಿಣಾಮವನ್ನು ಬೀರುತ್ತವೆ.

ಮನುಷ್ಯ ಸಂಬಂಧಗಳು ಭಾವನೆಗಳ ಮೇಲೆ ನಿರ್ಧಾರವಾಗುವುದಕ್ಕಿಂತ ಸಾಮಾಜಿಕ ನಿಲುವುಗಳ ಮೇಲೆ ನಿರ್ಮಾಣವಾಗುತ್ತವೆ. ಮೇಲು ಮತ್ತು ಕೀಳು ಜಾತಿ ಎಂದು ಭಾವಿಸಲಾದ ಎರಡು ಜಾತಿಯವರಿಗೂ ಅವರವರದ್ದೇ ಆದ ತೀರ ವಿಭಿನ್ನ ಅನುಭವದ ಕಕ್ಷೆ ಇರುತ್ತದೆ. ಇದು ಅದನ್ನು ಪ್ರತ್ಯಕ್ಷ ಕಂಡವರಿಗೆ, ಅದನ್ನು ಸದಾ ಪ್ರಜ್ಞೆಯಲ್ಲಿ ಇಟ್ಟುಕೊಂಡವರಿಗೆ ಅಲ್ಲದೆ ಬೇರೆಯವರಿಗೆ ಅರ್ಥವಾಗದಂಥದ್ದು. ಜಾತಿಪದ್ಧತಿಯು ಮಾನವ-ಮಾನವರ ಮಧ್ಯೆ ಕಂದರವನ್ನು ಸೃಷ್ಟಿಸಿದೆ. ಇದು ಪ್ರಗತಿಗೆ ಮಾರಕವಾಗಿದ್ದು, ಸಾಮಾಜಿಕ ಮುಂಚಲನೆಗೆ ತಡೆಯನ್ನುಂಟು ಮಾಡುತ್ತದೆ. ಅಸ್ಪೃಶ್ಯತೆಯು ಆಚರಣೆಯ ಸಮಸ್ಯೆ ಮಾತ್ರವಲ್ಲ; ಮನೋಭಾವ, ನಂಬಿಕೆಗಳ ಸಮಸ್ಯೆಯೂ ಆಗಿದೆ. ಇದರ ಹಿಂದೆ ಅನೇಕ ಆರ್ಥಿಕ, ಸಾಮಾಜಿಕ, ಧಾರ್ಮಿಕ ಕಾರಣಗಳಿವೆ. ಮೇಲು-ಕೀಳಿನ ಭಾವನೆಯಿಂದಾಗಿ ಅಮಾನವೀಯ ಗುಣಗಳು ಬೆಳೆವಣಿಗೆಯಾಗುವುದನ್ನೂ ಕಾಣಬಹುದು. ದಲಿತರ ದುಃಸ್ಥಿತಿಗೆ ಉಳ್ಳವರ ಶೋಷಣೆಯೊಂದೇ ಕಾರಣವಲ್ಲ; ಅವರ ಅಜ್ಞಾನ, ಒಳಜಗಳಗಳೂ ಕಾರಣಗಳಾಗಿರುವುದನ್ನು, ಅಸಮಾನತೆಯು ವ್ಯಕ್ತಿಪ್ರಜ್ಞೆಯೊಳಗೆ ರೂಪುಗೊಳ್ಳುವ ಬಗೆಯನ್ನು ಕಾದಂಬರಿಗಳಲ್ಲಿ ಗುರುತಿಸಬಹುದಾಗಿದೆ. ಅಂತೆಯೇ ವೃತ್ತಿ, ಆಹಾರ ಪದ್ಧತಿಯಲ್ಲಿನ ವ್ಯತ್ಯಾಸಗಳು ಮನುಷ್ಯ ಮನುಷ್ಯನ ನಡುವೆ ಹೇಗೆ ಬೇಲಿಯನ್ನು ನಿರ್ಮಿಸುತ್ತವೆ ಎಂಬುದನ್ನು ಕನ್ನಡ ಕಾದಂಬರಿಗಳು ವಿಶ್ಲೇಷಿಸುತ್ತವೆ.

ಕನ್ನಡ ಕಾದಂಬರಿಗಳು ಕೇವಲ ವರ್ಗ–ವರ್ಣ–ಜಾತಿ–ಮೇಲು–ಕೀಳಿನಿಂದ ಕೂಡಿದ ಸಮಾಜದ ಚಿತ್ರಣವನ್ನು ನೀಡುವುದರೊಂದಿಗೆ ಕೆಳವರ್ಗ, ಕೆಳಜಾತಿಯವರೆನಿಸಿಕೊಂಡವರ ಮನದಲ್ಲಿರುವ ಕೀಳರಿಮೆಯ ಭಾವ, ಅವರ ಸಿಟ್ಟು, ಆಕ್ರೋಶ, ಮನಸ್ಸಿನ ಯಾತನೆಗಳನ್ನೂ ಚಿತ್ರಿಸುತ್ತವೆ. ಕಾದಂಬರಿಗಳಲ್ಲಿ ಶೋಷಣೆಯನ್ನು ಒಪ್ಪಿಕೊಂಡ ಪಾತ್ರಗಳು ಮತ್ತು ಮುಕ್ತರಾಗಬೇಕೆಂಬ ತುಡಿತವುಳ್ಳ ಪಾತ್ರಗಳನ್ನು ಕಾಣಬಹುದು. ಅಂತೆಯೇ ಅಸ್ಪೃಶ್ಯತೆ ಎನ್ನುವುದು ಭಾವನೆ, ಸಂವೇದನೆ ಮತ್ತು ವಿಚಾರಗಳಿಗೂ ಸಂಬಂಧಿಸಿದೆ ಎನ್ನುವುದನ್ನು ವೈದೇಹಿಯವರ 'ಅಸ್ಪೃಶ್ಯರು' ಕಾದಂಬರಿಯು ಚಿತ್ರಿಸುವುದನ್ನು ಕಾಣಬಹುದಾಗಿದೆ.

ಸಾಮಾಜಿಕ ಅಂತರವು ಸಮಾಜದಲ್ಲಿನ ವಿವಿಧ ಗುಂಪುಗಳ ನಡುವಿನ ಅಂತರವನ್ನು ವಿವರಿಸುತ್ತದೆ. ಉದಾಹರಣೆಗೆ ಸಾಮಾಜಿಕ ವರ್ಗ, ಜನಾಂಗ/ಜನಾಂಗೀಯತೆಗಳು, ಲಿಂಗ, ವಿಭಿನ್ನ ಗುಂಪುಗಳು ಒಂದೇ ಗುಂಪಿನ ಸದಸ್ಯರಿಗಿಂತ ಕಡಿಮೆ ಬೆರೆಯುತ್ತಾರೆ. ಒಂದು ಗುಂಪು ಇನ್ನೊಂದು ಗುಂಪಿನ ಬಗ್ಗೆ ಹೊಂದಿರುವ ನಂಬಿಕೆ ಮತ್ತು ಸಹಾನುಭೂತಿಗಳು ಸಾಮಾಜಿಕ ಸಂಬಂಧ ಮತ್ತು ಸದಸ್ಯರ ನಡುವಿನ ಅನ್ಯೋನ್ಯತೆಯ ಮಟ್ಟವನ್ನು ನಿರ್ಧರಿಸುತ್ತವೆ. ಗುಂಪುಗಳು ಯಾರನ್ನು ಒಳಗಿನವರು ಮತ್ತು ಯಾರನ್ನು ಹೊರಗಿನವರು ಎಂದು ಪರಿಗಣಿಸುವ ಬಗ್ಗೆ ವ್ಯಾಪಕವಾಗಿ ಅಂಗೀಕರಿಸಲ್ಪಟ್ಟ ಸಾಮಾನ್ಯ ರೂಪುರೇಷೆಗಳನ್ನು ಪ್ರಜ್ಞಾಪೂರ್ವಕವಾಗಿ ವ್ಯಕ್ತಪಡಿಸುತ್ತಾರೆ. ಎರಡು ಗುಂಪಿನ ಸದಸ್ಯರು ಪರಸ್ಪರ ಆಗಾಗ್ಗೆ ಸಂವಹನವನ್ನು ನಡೆಸಿದರೂ ಅವರ ಸಂಬಂಧವು ಸದಾ ನಿಕಟವಾಗಿರುತ್ತದೆ ಎಂದು ಅರ್ಥವಲ್ಲ. ಸಾಮಾನ್ಯವಾಗಿ ವ್ಯಕ್ತಿಯು ತನ್ನ ಸಂಸ್ಕೃತಿಯನ್ನು ಇತರ ಎಲ್ಲ ಸಂಸ್ಕೃತಿಗಳಿಂದ ಶ್ರೇಷ್ಠ ಎಂದು ಭಾವಿಸುತ್ತಾನೆ ಮತ್ತು ಇತರ ಸಂಸ್ಕೃತಿಗಳು ಅವರ ಸಂಸ್ಕೃತಿಯಿಂದ ಭಿನ್ನವಾಗಿರುವುದರಿಂದ ಅದನ್ನು ಕೀಳು ಎಂದು ಭಾವಿಸಲು ಕಾರಣಗಳನ್ನು ಕಂಡುಕೊಳ್ಳಲಾಗಿದೆ.

ಇಲ್ಲಿ 'ಚೋಮನ ದುಡಿ'(ಕೆ. ಶಿವರಾಮ ಕಾರಂತ), 'ಕಾನೂರು ಹೆಗ್ಗಡತಿ', 'ಮಲೆಗಳಲ್ಲಿ ಮದುಮಗಳು'(ಕುವೆಂಪು), 'ಅಸ್ಪೃಶ್ಯರು'(ವೈದೇಹಿ), 'ತಬ್ಬಲಿಯು ನೀನಾದೆ ಮಗನೆ', 'ದಾಟು', 'ಧರ್ಮಶ್ರೀ'(ಎಸ್, ಎಲ್. ಭೈರಪ್ಪ) ಕಾದಂಬರಿಗಳನ್ನು ವಿಶ್ಲೇಷಣೆಗೆ ಬಳಸಿಕೊಳ್ಳಲಾಗಿದೆ. ಇವುಗಳೊಂದಿಗೆ ಈ ಕಾದಂಬರಿಗಳಲ್ಲಿನ ಸನ್ನಿವೇಶಗಳಿಗೆ ಪೂರಕವಾಗಿ ಕಂಡುಬರುವ ಸನ್ನಿವೇಶಗಳನ್ನೊಳಗೊಂಡ ಇತರ ಕಾದಂಬರಿಗಳನ್ನೂ ವಿಶ್ಲೇಷಣೆಗೆ ಅಲ್ಲಲ್ಲಿ ಬಳಸಿಕೊಳ್ಳಲಾಗಿದೆ. ಸಾಮಾಜಿಕ ಅಂತರದ ಸ್ವರೂಪವು ವೈವಿಧ್ಯಮಯವಾಗಿದ್ದು, ಇದು ದೈಹಿಕ ಹಾಗೂ ಮಾನಸಿಕವಾಗಿ ವ್ಯಕ್ತಿಗಳನ್ನು ದೂರವಿಡುವುದನ್ನು ಕಾದಂಬರಿಗಳು ವಿಶ್ಲೇಷಿಸುತ್ತವೆ. ವ್ಯಕ್ತಿಯ ಬಾಲ್ಯ, ಕೌಟುಂಬಿಕ ಆವರಣ, ಪರಿಸರ, ವಿದ್ಯೆ, ಉದ್ಯೋಗ ಮೊದಲಾದ ಅಂಶಗಳು ಅಂತರವನ್ನು ನಿರ್ದೇಶಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ.

ಕುವೆಂಪು ಅವರ ಕಾದಂಬರಿಗಳಲ್ಲಿ ಸಾಮಾಜಿಕ ಜಾತಿ ವ್ಯವಸ್ಥೆಯಾದ ಬ್ರಾಹ್ಮಣರು, ಗೌಡರು–ಒಕ್ಕಲಿಗರು, ಮುಸ್ಲಿಮರು, ಕ್ರಿಶ್ಚಿಯನ್ನರು ಇವರ ವರ್ಗ ಸ್ವಭಾವದ ವಿವರಗಳನ್ನು ಕಾಣಬಹುದಾಗಿದೆ. ಊಳಿಗಮಾನ್ಯ ಪದ್ಧತಿಯ ಮುಖಗಳಾದ ಜೀತಪದ್ಧತಿ, ಲೈಂಗಿಕ ಶೋಷಣೆಯ ಮುಖಗಳನ್ನೂ ಗುರುತಿಸಬಹುದಾಗಿದೆ. ಇವರ ಕಾದಂಬರಿಗಳಲ್ಲಿ ಸಂಬಂಧಗಳ ಸ್ವರೂಪವು ಸಾಮಾಜಿಕ ಮುಖವನ್ನು ಹೊಂದಿದೆ. ಅಂದರೆ ಮನುಷ್ಯ ಸಂಬಂಧಗಳ ಮೂಲಕ ವ್ಯಕ್ತಗೊಳ್ಳುವ ಸಾಮಾಜಿಕ ವಿನ್ಯಾಸಗಳು ಹಾಗೂ ಸಂಬಂಧಗಳ ಆಶಯಗಳನ್ನು ಗುರುತಿಸಬಹುದಾಗಿದೆ. ಇಲ್ಲಿ ಅಸ್ಪೃಶ್ಯತೆಯು ಕೇವಲ ಪ್ರಜ್ಞಾಸ್ತರದಲ್ಲಿ ಮಾತ್ರ ಅನುಸರಿಸುವ ನಿಬಂಧನೆಯಾಗಿದ್ದು, ಕಟ್ಟುನಿಟ್ಟಾಗಿದ್ದ ಅಸ್ಪೃಶ್ಯತೆಯು ಮಾನವೀಯ ಸಂಬಂಧ ಮತ್ತು ಜೈವಿಕ ಸನ್ನಿವೇಶಗಳು ಅಂದರೆ ಹೆಣ್ಣು–ಗಂಡಿನ ನಿಸರ್ಗ ಸಹಜ ಕಾಮನೆಗಳ ಸಂದರ್ಭದಲ್ಲಿ ಮುರಿದು ಬೀಳುವುದನ್ನು ಕಾಣಬಹುದು.

ನಿರ್ಬಂಧಿಸುವುದು ಸಾಮಾಜಿಕ ಅಂತರದ ಒಂದು ಮುಖವಾದರೆ, ಅಂತಹ ಕ್ರಮವನ್ನು ಇತರರು ಒಪ್ಪಿಕೊಂಡು ಆಚರಿಸುತ್ತಿದ್ದುದು ಇನ್ನೊಂದು ಮುಖವಾಗಿದೆ. ಸಮಾಜದಲ್ಲಿ ಮೇಲು ವರ್ಗದವರ ಬಗ್ಗೆ ಕೆಳ ವರ್ಗದವರು ಎಷ್ಟೇ ತಿರಸ್ಕಾರ, ಅಸಹನೆಗಳನ್ನು ಹೊಂದಿದ್ದರೂ, ಗೊತ್ತಿದ್ದೋ ಗೊತ್ತಿಲ್ಲದೆಯೋ ಮೇಲು ವರ್ಗದವರನ್ನು ಅನುಸರಿಸುತ್ತಿರುವುದನ್ನೂ ಕಾದಂಬರಿಗಳು ಚಿತ್ರಿಸುತ್ತವೆ.

ಭಾಷೆಯೂ ಸಾಮಾಜಿಕ ಅಂತರವನ್ನು ಸೂಚಿಸಬಲ್ಲ ಸೂಕ್ಷ್ಮತೆಗಳನ್ನು ಒಳಗೊಂಡಿದ್ದು, ಭಾಷಾ ನೆಲೆಯಲ್ಲಿ ಕಂಡು ಬರುವ ಅಂತರವನ್ನು 'ಅಸ್ಪೃಶ್ಯರು', 'ದಾಟು', 'ಕಾನೂರು ಹೆಗ್ಗಡತಿ' ಮೊದಲಾದ ಕಾದಂಬರಿಗಳಲ್ಲಿ ಗಮನಿಸಬಹುದಾಗಿದೆ. ಹೀಗೆ ಸಾಮಾಜಿಕ ಅಂತರವು ಪೂರಕವೂ ಪೋಷಕವೂ ಆಗಿ ಸ್ತರಗಳಿಂದ ಸ್ತರಗಳಿಗೆ ಪ್ರವೇಶಿಸುವುದನ್ನು ಕಾಣಬಹುದಾಗಿದೆ.

ವೈದೇಹಿ ಅವರ 'ಅಸ್ಪೃಶ್ಯರು' ಕಾದಂಬರಿಯಲ್ಲಿ ಅಸ್ಪೃಶ್ಯತೆಯಲ್ಲಿ ವಿವಿಧ ಆಯಾಮಗಳನ್ನು ಗುರುತಿಸಬಹುದು: ಸಾಮಾಜಿಕವಾದುದು(ವರ್ಣ–ಜಾತಿ–ವರ್ಗ ನೆಲೆಯಲ್ಲಿ ಆಚರಣೆ – ಬಾಹ್ಯ ಅಸ್ಪೃಶ್ಯತೆ) ಮತ್ತು ಲಿಂಗ ಆಧಾರಿತವಾದುದು(ಹೆಣ್ಣು–ಗಂಡಿನ ನಡುವೆ – ಆಂತರಿಕ–ದೈಹಿಕ ಅಥವಾ ಭಾವನಾತ್ಮಕ ನೆಲೆಯಲ್ಲಿ). ಕಾದಂಬರಿಯಲ್ಲಿ ಕಂಡುಬರುವ ಮಹಿಳಾ ಪಾತ್ರಗಳು ಬೌದ್ಧಿಕ ಹಾಗೂ ಜೈವಿಕ ಎಂಬ ಎರಡು ರೀತಿಯ ನೆಲೆಗಳಲ್ಲಿ ಅಸ್ಪೃಶ್ಯತೆಯನ್ನು ಅನುಭವಿಸುತ್ತವೆ. ಇಲ್ಲಿ ಅಸ್ಪೃಶ್ಯತೆಯ ಪ್ರಶ್ನೆಯನ್ನು ದೇಹದ ನೆಲೆಯಲ್ಲಿ ಮಾತ್ರ ನೋಡದೆ ಮಾನಸಿಕ ನೆಲೆಯಲ್ಲಿಯೂ ನೋಡಲು ಪ್ರಯತ್ನಿಸಲಾಗಿದೆ.

ಕಾದಂಬರಿಗಳ ವಿಶ್ಲೇಷಣೆಯ ಮೂಲಕ ಈ ಅಂಶಗಳು ದೃಢವಾಗಿವೆ: ಸಾಮಾಜಿಕ ಅಂತರ ಕಡಿಮೆಯಾಗುತ್ತಾ ಬಂದಿದೆ ಎಂಬಂತೆ ಭಾಸವಾದರೂ ಹಾಗಾಗಿಲ್ಲ ಎಂಬುದೇ ನಿಜ. ಹಿಂದೆ ಜಾತಿ–ಧರ್ಮ–ಲಿಂಗಾಧಾರಿತ ಅಂತರಗಳು ಕಂಡು ಬಂದರೆ ಇಂದು ಸಾಮಾಜಿಕ ಅಂತರಗಳ ವಿಚಾರಗಳು ಬದಲಾಗಿವೆ ಅಷ್ಟೆ. ಇವೆಲ್ಲವುಗಳೊಂದಿಗೆ ಇಂದು ಬೌದ್ಧಿಕ ಅಂತರವನ್ನೂ ಗುರುತಿಸಬಹುದಾಗಿದೆ.

ಈ ಮೇಲರಿಮೆ ಕೀಳರಿಮೆಗಳಿಗೆ ಕಾರಣವಾಗುವ ಅಂಶ ಯಾವುದು? ಜಾತಿಯೇ? ಬಣ್ಣವೇ? ಆಕಾರವೇ? ಹೆಸರೇ? ಅಂತಸ್ತೇ? ಎಂದು ನೋಡಿದಾಗ ಇವೆಲ್ಲವೂ ಒಂದಕ್ಕೊಂದು ಸೇರಿಕೊಂಡಿವೆ ಎಂಬುದು ತಿಳಿಯುತ್ತದೆ. ಹೀಗೆ ವರ್ಗ, ವರ್ಣ, ಜಾತಿ, ಲಿಂಗ, ಆರ್ಥಿಕ, ಸಾಮಾಜಿಕ, ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಅಂಶಗಳು ಸಾಮಾಜಿಕ ಅಂಶವನ್ನು ಹಾಗೂ ಸಾಮಾಜಿಕ ಸಂಬಂಧದ ಸ್ವರೂಪವನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತವೆ.

ವ್ಯಕ್ತಿಯ ಮನದಲ್ಲಿ ಸಾಮಾಜಿಕ ಅಂತರದ ಭಾವವನ್ನು ಮೂಡಿಸುವಲ್ಲಿ ಕುಟುಂಬ, ಪರಿಸರ ಎಲ್ಲವೂ ಪ್ರಮುಖ ಪಾತ್ರವನ್ನು ವಹಿಸುತ್ತವೆ. ಒಟ್ಟಿನಲ್ಲಿ ಬದಲಾಗಬೇಕಾಗಿರುವುದು ಹೊರಗಿನ ವಿಚಾರಗಳು ಮಾತ್ರವಲ್ಲ; ಮುಖ್ಯವಾಗಿ ಬದಲಾಗಬೇಕಾಗಿರುವುದು ಪ್ರತಿಯೊಬ್ಬರ ಮನಸ್ಸೇ ಆಗಿದೆ ಎಂಬುದನ್ನು ಮನಮುಟ್ಟಿಸುವಲ್ಲಿ ಕಾದಂಬರಿಗಳು ಪ್ರಮುಖ ಪಾತ್ರವನ್ನು ವಹಿಸುತ್ತವೆ.

ವ್ಯಕ್ತಿಯು ತನ್ನನ್ನು ಒಂದು ಪ್ರತ್ಯೇಕ ಅಸ್ತಿತ್ವವೆಂದು ಗ್ರಹಿಸಲು ಒಂದು ರೀತಿಯ ಗುರುತನ್ನು ಹೊಂದಿರುತ್ತಾನೆ. ಆ ಮೂಲಕ ವ್ಯಕ್ತಿಯು ಅನನ್ಯವಾಗಲು ಒಲವನ್ನು ತೋರುತ್ತಾನೆ ಹಾಗೂ ವ್ಯಕ್ತಿಯ ಜೀವನದ ವಿಭಿನ್ನ ಅಂಶಗಳು ಸಮಗ್ರವಾಗಲು ಒಲವನ್ನು ತೋರುತ್ತವೆ. 'ಗುರುತು' ಎಂದರೆ ಒಬ್ಬ ವ್ಯಕ್ತಿಯು ಆತನನ್ನು ಮತ್ತು ಇತರರು ಆತನನ್ನು ವ್ಯಾಖ್ಯಾನಿಸುವ ವಿಧಾನ/ಮಾದರಿಯಾಗಿದೆ. ಈ ಗುರುತುಗಳು ಕಾಲಕಾಲಕ್ಕೆ ಬದಲಾಗುತ್ತವೆ ಮತ್ತು ಅವುಗಳು ಬಹಳ ಸಂಕೀರ್ಣವಾದವುಗಳಾಗಿದ್ದು, ಸಮಾಜದಲ್ಲಿನ ವಿಭಿನ್ನ ಪ್ರಭಾವಗಳಿಂದ ರೂಪುಗೊಳ್ಳುತ್ತವೆ.

ಎರಿಕ್ ಎರಿಕ್‌ಸನ್ ಅವರ ಪ್ರಕಾರ ಪ್ರತಿಯೊಬ್ಬ ವ್ಯಕ್ತಿಯು ತನ್ನ ಜೀವಿತಾವಧಿಯಲ್ಲಿ ಅನೇಕ ಬಿಕ್ಕಟ್ಟುಗಳನ್ನು ಅಥವಾ ಸಂಘರ್ಷಗಳನ್ನು ಅನುಭವಿಸುತ್ತಾನೆ. ಗುರುತಿಗೆ ಸಂಬಂಧಿಸಿದ ನಿರ್ದಿಷ್ಟ ಹಂತವು ಹದಿಹರೆಯದಲ್ಲಿ ನಡೆಯುತ್ತದೆ. ಇದನ್ನು 'ಐಡೆಂಟಿಟಿ ವರ್ಸಸ್ ರೋಲ್ ಕನ್ಫ್ಯೂಷನ್' ಎಂದು ಕರೆಯಲಾಗುತ್ತದೆ. ಹದಿಹರೆಯದಲ್ಲಿ ವ್ಯಕ್ತಿಯು ತನ್ನ ಜೀವನದುದ್ದಕ್ಕೂ ಸಾಮಾಜಿಕ ಮತ್ತು ಔದ್ಯೋಗಿಕ ವಿಷಯಗಳಿಗೆ ಸಂಬಂಧಿಸಿದ ಮೂಲ ಗುರುತುಗಳನ್ನು ರೂಪಿಸುವ ಸಲುವಾಗಿ ಅವನು/ಅವಳು ಯಾರೆಂದು ಕಂಡುಹಿಡಿಯಲು ಪ್ರಯತ್ನಿಸುತ್ತಾನೆ. ಈ ಬಿಕ್ಕಟ್ಟು ಬಗೆಹರಿಯದಿದ್ದರೆ ಹದಿಹರೆಯದವರು ಭವಿಷ್ಯದ ಯೋಜನೆಗಳ ಬಗ್ಗೆ ಗೊಂದಲವನ್ನು ಎದುರಿಸಬೇಕಾಗುತ್ತದೆ. ಎರಿಕ್ ಎರಿಕ್‌ಸನ್ ಅವರ ಪ್ರಕಾರ ವ್ಯಕ್ತಿಯ ಮನೋ-ಸಾಮಾಜಿಕ ಅಭಿವೃದ್ಧಿಯಲ್ಲಿ ಈ ಹಂತವು ಜೀವನದ ಒಂದು ಪ್ರಮುಖ ನಿರ್ಣಾಯಕ ಘಟ್ಟವಾಗಿದೆ. ವ್ಯಕ್ತಿಯು ತನ್ನ ಗುರುತಿನ ಬಿಕ್ಕಟ್ಟನ್ನು ಪರಿಹರಿಸದೆ ಯಾವುದೇ ಗುರಿ ಅಥವಾ ಮೌಲ್ಯಗಳಿಗೆ ಬದ್ಧರಾಗಲು ಮತ್ತು ಭವಿಷ್ಯದ ಜೀವನವನ್ನು ನಿರ್ದೇಶಿಸುವಲ್ಲಿ ಮತ್ತು ಸ್ಥಾಪಿಸುವಲ್ಲಿ ವಿಫಲವಾದಲ್ಲಿ ಅದು ಅಸ್ತವ್ಯಸ್ತವಾಗಿರುವ ಆಲೋಚನೆ, ಮುಂದೂಡುವಿಕೆ, ಸಮಸ್ಯೆಗಳಿಗೆ ಕಾರಣವಾಗಿ ಕ್ರಿಯೆಯನ್ನು ತಪ್ಪಿಸುತ್ತದೆ. ಪೋಷಕರೊಂದಿಗೆ

ಸಕಾರಾತ್ಮಕ ಸಂಬಂಧವನ್ನು ಹೊಂದಿದ್ದಾಗ ಐಡೆಂಟಿಟಿಯನ್ನು ರೂಪಿಸಿಕೊಳ್ಳುವುದು ಸುಲಭವಾಗುತ್ತದೆ.

ಸ್ವಗುರುತು ವ್ಯಕ್ತಿಯ ಜ್ಞಾನ ಮತ್ತು ಸ್ವಯಂ ತಿಳಿವಳಿಕೆಯ ಮೊತ್ತವಾಗಿದೆ. ಇದು ಸ್ವಪ್ರಜ್ಞೆಯಿಂದ ಭಿನ್ನವಾಗಿದ್ದು, ದೈಹಿಕ, ಮಾನಸಿಕ ಮತ್ತು ಸಾಮಾಜಿಕ ಗುಣಲಕ್ಷಣಗಳನ್ನು ಒಳಗೊಂಡಿರುತ್ತದೆ. ಇದು ವ್ಯಕ್ತಿಯ ವರ್ತನೆ, ಅಭ್ಯಾಸ, ನಂಬಿಕೆ ಮತ್ತು ಆಲೋಚನೆಗಳಿಂದ ಪ್ರಭಾವಿತವಾಗಿರುತ್ತದೆ.

ಈ ಸಾಮಾಜಿಕ ಗುರುತು ಎನ್ನುವುದನ್ನು ವ್ಯಕ್ತಿಯು ತನ್ನ ಅಸ್ಮಿತೆಯನ್ನು ಸಮಾಜದಲ್ಲಿ ಮೂಡಿಸಲು ಪ್ರಯತ್ನಿಸುವುದರಲ್ಲೂ, ಆತನ ಬಾಹ್ಯ ರೂಪುರೇಷೆಗಳನ್ನಾಧರಿಸಿ ಸಮಾಜವು ಅಸ್ಮಿತೆಯನ್ನು ನೀಡುವುದರಲ್ಲೂ ಗಮನಿಸಬಹುದಾಗಿದೆ.

ಸಮಾಜದಲ್ಲಿ ವ್ಯಕ್ತಿಗಳ ಗುರುತುಗಳನ್ನು ರೂಪಿಸುವ ಅಂಶಗಳು:

(೧) ಸಂಸ್ಕೃತಿ: ಯಾವ ಸಂಸ್ಕೃತಿಗೆ ಸೇರಿದವರು ಎಂಬುದನ್ನು ಆಧರಿಸಿ

(೨) ಜನಾಂಗ/ ಜನಾಂಗೀಯತೆ/ ರಾಷ್ಟ್ರ: ನಿರ್ದಿಷ್ಟ ಜನಾಂಗ (ಜನಾಂಗದ ವಿಶಿಷ್ಟ ಸಂಸ್ಕೃತಿ, ನಡೆವಳಿಕೆ, ಭಾಷೆ, ಆಚರಣೆ, ಧಾರ್ಮಿಕ ಗುಣಲಕ್ಷಣಗಳಿಗೆ ಸಂಬಂಧಿಸಿ) ಅಥವಾ ರಾಷ್ಟ್ರದೊಂದಿಗೆ ಗುರುತಿಸುವುದು. ಇದು ಒಬ್ಬ ವ್ಯಕ್ತಿಯ ಪದ್ಧತಿ, ಸಾಂಸ್ಕೃತಿಕ ಆಚರಣೆಗಳು, ಭಾಷೆ, ಆಹಾರ ಮತ್ತು ವೇಷಭೂಷಣಗಳು ಜನಾಂಗೀಯ ಗುಂಪಿನೊಂದಿಗೆ ಸಂಬಂಧಿಸಿರುವುದನ್ನು ಸೂಚಿಸುತ್ತದೆ.

(೩) ಧರ್ಮ: ಯಾವ ಧರ್ಮಕ್ಕೆ ಸೇರಿದವರು ಎಂಬುದನ್ನು ಆಧರಿಸಿ.

(೪) ವೃತ್ತಿ: ವೃತ್ತಿಯೊಂದಿಗೆ ಗುರುತಿಸುವಿಕೆ

(೫) ಲಿಂಗ: ಗಂಡು–ಹೆಣ್ಣು ಎಂಬುದನ್ನು ಆಧರಿಸಿ.

ಇಲ್ಲಿ 'ಶಿಕಾರಿ' (ಯಶವಂತ ಚಿತ್ತಾಲ), 'ಮುಕ್ತಿ', 'ಸಂಬಂಧ', 'ಅಂತರಾಳ', 'ಓಂಣಮೋ' (ಶಾಂತಿನಾಥ ದೇಸಾಯಿ), 'ಭವ' (ಯು. ಆರ್. ಅನಂತಮೂರ್ತಿ), 'ಅಸ್ಪೃಶ್ಯರು' (ವೈದೇಹಿ), 'ಕೇವಲ ಮನುಷ್ಯರು', 'ಮರಳಿ ಮಣ್ಣಿಗೆ' (ಕೆ. ಶಿವರಾಮ ಕಾರಂತ), 'ಬಾಮಣ್' (ನಾ. ಡಿಸೋಜ), 'ಕಶೀರ' (ಸಹನಾ ವಿಜಯಕುಮಾರ್), 'ಧರ್ಮಶ್ರೀ', 'ದಾಟು', 'ಆವರಣ', 'ಕವಲು' (ಎಸ್. ಎಲ್. ಭೈರಪ್ಪ) ಕಾದಂಬರಿಗಳನ್ನು ಐಡೆಂಟಿಟಿಯ ವಿವಿಧ ರೂಪಗಳ ವಿಶ್ಲೇಷಣೆಗೆ ಬಳಸಿಕೊಳ್ಳಲಾಗಿದೆ.

ತನ್ನ ಭೂತಕಾಲದ ಅನುಭವಗಳು ಮತ್ತು ತಾನು ಪಡೆದ ಆ ಅನುಭವಗಳಿಂದಲೇ ರೂಪುತಳೆದ ವ್ಯಕ್ತಿತ್ವದ ಸೆರೆಮನೆಯಲ್ಲಿ ಬಂಧಿತನಾದ ವ್ಯಕ್ತಿತ್ವ ಹೊಂದಿದ ನಾಗಪ್ಪನು ಆಕಸ್ಮಿಕವಾಗಿ ಒದಗಿದ ಮಾನಸಿಕ ಆಘಾತವೊಂದರಿಂದ (ಬೆಂಕಿಯ ಅವಘಡ) ಹಠಾತ್ತನೆ ಜಾಗೃತನಾಗಿ ತನ್ನ

ಅಂತರಂಗವನ್ನು ತಾನೇ ಮತ್ತೆ ಮತ್ತೆ ಪರೀಕ್ಷಿಸುತ್ತಾ, ವಿಶ್ಲೇಷಿಸುತ್ತಾ ಬುದ್ಧಿಪೂರ್ವಕವಾದ ತೀರ್ಮಾನಗಳನ್ನು ಕೈಗೊಳ್ಳುತ್ತಾ ಕ್ರಿಯಾಶೀಲನಾಗುವ ಮೂಲಕ ಹೊಸದೊಂದು ವ್ಯಕ್ತಿತ್ವವನ್ನು ಪಡೆದುಕೊಳ್ಳುವುದನ್ನು, ಈ ರೀತಿ ಒಬ್ಬ ವ್ಯಕ್ತಿಯ ವ್ಯಕ್ತಿತ್ವದಲ್ಲಿ ಸಮಗ್ರ ಪರಿವರ್ತನೆಗೊಳಗಾಗುವ ಮೂಲಕ ವ್ಯಕ್ತಿತ್ವ ಬದಲಾಗಿ ಐಡೆಂಟಿಟಿ ಕಂಡುಕೊಳ್ಳಲು ಸಾಧ್ಯ ಎಂಬುದನ್ನು ವಿವರಿಸಲು ನಾಗಪ್ಪನ ವೈಯಕ್ತಿಕ ಅನುಭವಗಳಿಗೆ ಪೂರಕವಾಗಿ ಕೆಲವು ಮನಃಶಾಸ್ತ್ರೀಯ ಸಿದ್ಧಾಂತಗಳೂ ಬಳಕೆಯಾಗಿರುವುದನ್ನು ಗುರುತಿಸಬಹುದಾಗಿದೆ.

ನಾಯಕ ಗೌರೀಶನ ಆತ್ಮಕತೆಯನ್ನು ನಿರೂಪಿಸಿ ಅವನ ಗತಜೀವನದ ಆತ್ಮಶೋಧವನ್ನು ಮಾಡುವ ವಿಶಿಷ್ಟ ಕಾದಂಬರಿ ಶಾಂತಿನಾಥ ದೇಸಾಯಿಯವರ **'ಮುಕ್ತಿ'**ಯ ಗೌರೀಶನು ದಿನಚರಿಯ ಮೂಲಕವೇ ತನ್ನ ಗತ ಜೀವನಕ್ಕೆ ಒಂದು ಆಕಾರವನ್ನು ಕೊಡುವುದನ್ನು, ಕಲೆಯ ಮೂಲಕ ವ್ಯಕ್ತಿತ್ವವನ್ನು ಕಂಡುಕೊಳ್ಳುವುದನ್ನು ವಿಶ್ಲೇಷಿಸಲಾಗಿದೆ.

ವೇಷಭೂಷಣಗಳು, ಜಮೀನು ಅಥವಾ ಭೌತಿಕ ವಸ್ತುಗಳನ್ನು ಹೊಂದುವ ವಿಚಾರ, ಸಮಾಜದಲ್ಲಿ ಜಾತಿಯ ಮೂಲಕ ಸಾಮಾಜಿಕ ಗುರುತುಗಳಾಗಿರುವುದನ್ನು, ಬಣ್ಣವು ಜನಾಂಗ ಹಾಗೂ ಜಾತಿಯ ಗುರುತಾಗಿ, ಸಂಸ್ಕೃತಿ/ಸಂಪ್ರದಾಯ ವಿಚಾರಗಳು ಸಾಮಾಜಿಕ ಗುರುತುಗಳಾಗಿರುವುದನ್ನು ಕಾದಂಬರಿಗಳಲ್ಲಿ ಗುರುತಿಸಲಾಗಿದೆ.

ವ್ಯಕ್ತಿಯು ಸಾಮಾಜಿಕ ಗುರುತನ್ನು ಹರೆಯದಲ್ಲಿ ಹೊಂದಲು ವಿಫಲನಾದರೆ ಆತನ ಮುಂದಿನ ಬದುಕು ತೊಂದರೆಗೊಳಗಾಗುತ್ತದೆ. ಪರಿಣಾಮ ಆತನು ಸಮಾಜದ ಇತರರೊಂದಿಗೆ ಆರೋಗ್ಯಕರ ಸಂಬಂಧವನ್ನು ಹೊಂದಲು ವಿಫಲನಾಗುವುದನ್ನು ಗಮನಿಸಲಾಗಿದೆ. ಜೊತೆಗೆ ವ್ಯಕ್ತಿಯ ಬಾಹ್ಯ ಗುರುತುಗಳ ಮೂಲಕ ಆತನ ಅಸ್ಮಿತೆಯನ್ನು ಇತರರು ಹೇಗೆ ಗುರುತಿಸುತ್ತಾರೆ ಎಂಬುದನ್ನೂ ವಿಶ್ಲೇಷಿಸಲಾಗಿದೆ.

ಹೀಗೆ ಸಾಮಾಜಿಕ ಗುರುತು ಎಂಬುದು ವ್ಯಕ್ತಿಯು ತನ್ನನ್ನು ತಾನು ಸಮಾಜದಲ್ಲಿ ಗುರುತಿಸಿಕೊಳ್ಳುವುದನ್ನೂ, ಸಮಾಜವು ವ್ಯಕ್ತಿಯ ಬಾಹ್ಯ ಗುರುತುಗಳ ಮೂಲಕ ವ್ಯಕ್ತಿಯನ್ನು ಗುರುತಿಸುವುದನ್ನೂ ಸೂಚಿಸುತ್ತದೆ. ವ್ಯಕ್ತಿಯು ತನ್ನ ಗುರುತು/ಅಸ್ಮಿತೆಯನ್ನು ಸಮಾಜದಲ್ಲಿ ಹೊಂದುವಲ್ಲಿ ಆತನ ಬಾಲ್ಯ, ಹರೆಯ, ಹೆತ್ತವರು ಹಾಗೂ ಸುತ್ತಲಿನ ಪರಿಸರ ಪ್ರಮುಖ ಪಾತ್ರವನ್ನು ವಹಿಸುವುದನ್ನೂ, ಹರೆಯದಲ್ಲಿ ಉದ್ಭವಿಸುವ ಗೊಂದಲಗಳ ಪರಿಣಾಮ ವ್ಯಕ್ತಿಯು ಮುಂದಿನ ಬದುಕಿನಲ್ಲಿ ತೊಂದರೆಗೊಳಗಾಗುವುದನ್ನು ಕಾದಂಬರಿಗಳು ಚಿತ್ರಿಸುತ್ತವೆ. ಇದರೊಂದಿಗೆ ವ್ಯಕ್ತಿಯ ಬಾಹ್ಯ ರೂಪವೂ ಸಮಾಜದಲ್ಲಿ ವ್ಯಕ್ತಿಯ ಗುರುತಿಗೆ ಹೇಗೆ ಕಾರಣವಾಗುತ್ತದೆ ಎಂಬುದನ್ನು ಕಾದಂಬರಿಗಳ ವಿಶ್ಲೇಷಣೆಯು ಸ್ಪಷ್ಟಪಡಿಸಿದೆ.

'ಸಮಾರೋಪ'ದಲ್ಲಿ ಅಧ್ಯಯನದ ಫಲಿತಗಳು ಹಾಗೂ ಮುಂದಿನ ಅಧ್ಯಯನದ ಸಾಧ್ಯತೆಗಳನ್ನು ನೀಡಲಾಗಿದೆ:

ಮನೋವಿಜ್ಞಾನಿ ಕಾರ್ಲ್‌ಯೂಂಗ್ ಗುರುತಿಸಿರುವಂತೆ ಕೆಲವು ಸಾಹಿತ್ಯ ಕೃತಿಗಳ ವಸ್ತು ಬಹುಮಟ್ಟಿಗೆ ಜಾಗೃತಪ್ರಜ್ಞೆಯ ವಿಸ್ತೃತ ಸ್ತರಗಳಿಂದಲೇ ರೂಪು ಪಡೆದಿರುತ್ತದೆ. ಇವೆಲ್ಲ ಸ್ವಯಂ ಸ್ಪಷ್ಟವಾದ ಕೃತಿಗಳೇ ಆಗಿರುತ್ತವೆ. ಏಕೆಂದರೆ ಇವುಗಳ ಪ್ರಕ್ರಿಯೆಗಳೆಲ್ಲ ಪರಿಚಿತವಾದ ನಡೆವಳಿಕೆಗಳ ಅರ್ಥ ವಿಸ್ತಾರದೊಳಗೇ ಓಡಾಡುತ್ತಿರುತ್ತವೆ. ಇಂಥ ಕೃತಿಗಳ ವಿಶ್ಲೇಷಣೆಗೆ ಮನೋವಿಜ್ಞಾನದ ಸಹಾಯ ಬೇಕಾಗಿಲ್ಲ. ಆದರೆ ಎರಡನೆಯ ವಿಧದ ಸಾಹಿತ್ಯ ಕೃತಿಗಳ ವಿಶ್ಲೇಷಣೆಗೆ ಮನೋವಿಜ್ಞಾನದ ಸಹಾಯ ಬೇಕಾಗುತ್ತದೆ. ಈ ಕೃತಿಗಳು ಓದುಗರನ್ನು ವಿಸ್ಮಯಗೊಳಿಸುತ್ತವೆ. ಅವುಗಳು ಹೇಳಲಾಗದ ಅಂಜಿಕೆ, ಭಯ, ಆತಂಕ, ಹಿಂಜರಿಕೆ, ಅಸಹ್ಯದತ್ತ ಓದುಗರನ್ನು ನೂಕುತ್ತವೆ. ಇವುಗಳು ಮನದಲ್ಲಿ ವಿಹ್ವಲತೆ, ಭ್ರಾಂತಿ, ಕನಸನ್ನು ಕವಿಯುತ್ತವೆ. ಅವು ಮನದಾಳಕ್ಕೆ ಪ್ರವೇಶ ಮಾಡಿದಂತೆ ಕಂಡುಬರುತ್ತವೆ.

ಮನೋವೈಜ್ಞಾನಿಕ ಕಾದಂಬರಿಗಳು ಕೆಲವು ಸಿದ್ಧಾಂತಗಳಿಗೆ ಅನುಗುಣವಾಗಿ ಅವುಗಳಿಗೆ ಬದ್ಧವಾಗಿಯೇ ರೂಪುಗೊಳ್ಳುತ್ತವೆ. ಇಂತಹ ಕಾದಂಬರಿಗಳಲ್ಲಿ ವ್ಯಕ್ತಿಯ ಮಾನಸಿಕ ತುಮುಲಗಳನ್ನು ಪ್ರಧಾನವಾಗಿ ಪರಿಗಣಿಸಲಾಗಿರುತ್ತದೆ. ಯಾವ ಕಾದಂಬರಿಕಾರನೂ ವೈಜ್ಞಾನಿಕ ಸಿದ್ಧಾಂತಗಳಿಗೆ ಅನುಗುಣವಾಗಿಯೇ ಕೃತಿರಚನೆ ಮಾಡಲು ತೊಡಗುವುದಿಲ್ಲ. ಸೃಜನಶೀಲ ಸಾಹಿತ್ಯದೊಳಗೆ ಇಂಥ ಸಂಗತಿಗಳು ಆನುಷಂಗಿಕವಾಗಿ ಬೆರೆತು ಮನೋವೈಜ್ಞಾನಿಕ ಒಳನೋಟಗಳನ್ನು ನೀಡಬಹುದು. ಕಾದಂಬರಿಯಲ್ಲಿ ಪಾತ್ರಗಳ ಆಂತರಿಕ ತಾಕಲಾಟಗಳ ಪ್ರಮಾಣ ಅಧಿಕವಾಗಿದ್ದಾಗ ಅವುಗಳ ಒಳಮನಸ್ಸನ್ನು ಗ್ರಹಿಸಲು ವರ್ತನೆಗಳನ್ನು ವಿಶ್ಲೇಷಿಸಬೇಕಾಗುತ್ತದೆ. ಮನುಷ್ಯ ಸ್ವಭಾವದ ಒಳಹೊರಗುಗಳ ದ್ವಂದ್ವಗಳನ್ನು ಪರಿಭಾವಿಸಿದ ಲೇಖಕ ಮನೋವೈಜ್ಞಾನಿಕ ಸಿದ್ಧಾಂತಗಳನ್ನು ಆಶ್ರಯಿಸದೆಯೇ ಉತ್ತಮ ಪಾತ್ರ, ಸನ್ನಿವೇಶಗಳನ್ನು ಸೃಷ್ಟಿಸುತ್ತಾನೆ. ಅನ್ಯಶಿಸ್ತೀಯ ಅಧ್ಯಯನ ಕ್ರಮವನ್ನು ಅಳವಡಿಸಿಕೊಳ್ಳುವುದು ಎಲ್ಲ ಸಂದರ್ಭಗಳಲ್ಲೂ ಸಾಧ್ಯವಾಗಲಾರದು. ಕಲಾಕೃತಿಯೇ ಆ ಬಗೆಯ ಮಾನದಂಡಗಳನ್ನು ರೂಪಿಸಿಕೊಡುವ ಸತ್ತ್ವವನ್ನು ಪಡೆದಾಗ ಮಾತ್ರ ಹೆಚ್ಚಿನ ಹೊಳಹುಗಳು ಲಭ್ಯವಾಗಲು ಸಾಧ್ಯ.

ಫಲಿತಗಳು:

ಇವುಗಳೊಂದಿಗೆ ಮಹಾಪ್ರಬಂಧದ ವಿಷಯದ ಪ್ರಧಾನ ನೆಲೆಯಲ್ಲಿ ಕಾದಂಬರಿಗಳನ್ನು ಮನೋವೈಜ್ಞಾನಿಕ ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ಅಧ್ಯಯನ ನಡೆಸಿದಾಗ ಕಂಡುಕೊಂಡ ಫಲಿತಗಳು ಹೀಗಿವೆ:

(೧) ಕಾದಂಬರಿ ಸಾಹಿತ್ಯದಲ್ಲಿ ಮನೋವಿಜ್ಞಾನದ ಪರಿಕಲ್ಪನೆಗಳು ಲೇಖಕರ ಅರಿವಿದ್ದೂ ಅಥವಾ ಇಲ್ಲದೆಯೇ ಅಥವಾ ಉದ್ದೇಶಪೂರ್ವಕವಾಗಿಯೂ ಬಳಕೆಯಾದುದನ್ನು ಗಮನಿಸಬಹುದಾಗಿದೆ.

(೨) ಉದ್ದೇಶಪೂರ್ವಕವಾಗಿ ಅಥವಾ ಲೇಖಕರ ಅರಿವಿಗೆ ಬಂದು ಬಳಕೆಯಾದ ಕಡೆಗಳಲ್ಲಿ ಮನೋವೈಜ್ಞಾನಿಕ ವಿಶ್ಲೇಷಣೆಯ ಅವಶ್ಯಕತೆಗಳು ಹೆಚ್ಚಾಗಿ ಕಂಡುಬರುವುದಿಲ್ಲ. ಉದಾ: ತ್ರಿವೇಣಿಯವರ ಕಾದಂಬರಿಗಳು

(೩) ಆದರೆ ಲೇಖಕರಿಗೆ ಅರಿವಿಲ್ಲದೆ ಅಥವಾ ಕಥಾವಸ್ತುವು ತಾನಾಗಿ ಬಳಸಿಕೊಂಡ, ಬಳಕೆಯಾದ ಮನೋವಿಜ್ಞಾನದ ಪರಿಕಲ್ಪನೆಗಳನ್ನು ಗುರುತಿಸಲು ಅವುಗಳನ್ನು ವಿಶ್ಲೇಷಿಸಬೇಕಾದ ಅನಿವಾರ್ಯತೆಯಿದೆ. ಉದಾ: ಕೆ. ಶಿವರಾಮ ಕಾರಂತರ 'ಮೂಕಜ್ಜಿಯ ಕನಸುಗಳು'

(೪) ಮನೋವಿಜ್ಞಾನ ಮತ್ತು ಸಾಹಿತ್ಯದ ನಡುವೆ ಅವಿನಾಭಾವ ಸಂಬಂಧವಿರುವುದಂತೂ ಸತ್ಯ. ಸಾಹಿತ್ಯವು ವ್ಯಕ್ತಿಯ ಮನೋವಿಕಾಸದ ಸೃಷ್ಟಿಯಾಗಿರುವುದರಿಂದ ಅಲ್ಲಿ ಮನಸ್ಸಿನ ಪ್ರಭಾವ ಇದ್ದೇ ಇರುತ್ತದೆ.

(೫) ಮನುಷ್ಯ ಸಂಬಂಧಗಳು, ಅತ್ಯಂತ ಸೂಕ್ಷ್ಮ ಹಾಗೂ ಸಂಕೀರ್ಣವಾದ ಅಂತರಂಗದ ಸ್ವರೂಪ ಮತ್ತು ಸಾಮಾಜಿಕ ಅಂಶಗಳಿಂದ ಪ್ರಭಾವಿತವಾಗಿ ಪರಿಸ್ಥಿತಿಗೆ ತಕ್ಕಂತೆ ರೂಪುಗೊಳ್ಳುವ ಮಾನವ ಸಂಬಂಧ ಹಾಗೂ ವ್ಯಕ್ತಿತ್ವಗಳನ್ನು ಅರ್ಥೈಸಿಕೊಳ್ಳಲು ಸಹಕಾರಿಯಾಗುತ್ತದೆ.

(೬) ಸಾಹಿತ್ಯ ಮತ್ತು ಮನೋವಿಜ್ಞಾನದ ಸಂಬಂಧಗಳನ್ನು, ಸಾಹಿತ್ಯಸೃಷ್ಟಿಯ ಪ್ರಕ್ರಿಯೆಯನ್ನು ಸ್ಪಷ್ಟಪಡಿಸಿಕೊಳ್ಳಲು ಸಾಧ್ಯವಾಗುತ್ತದೆ.

(೭) ಮನೋವಿಜ್ಞಾನದ ಬೆಳಕಿನಲ್ಲಿ ಸಾಹಿತ್ಯದ ಅರಿವು–ಆಸ್ವಾದಗಳು ಹೆಚ್ಚು ಅರ್ಥಪೂರ್ಣವಾಗುತ್ತವೆ. ಅಂದರೆ ಸಾಹಿತ್ಯದ ಮನೋವೈಜ್ಞಾನಿಕ ಅಧ್ಯಯನವು ಸಾಹಿತ್ಯವನ್ನು ಅರ್ಥೈಸಿಕೊಳ್ಳಲು ಒಂದು ವಿಭಿನ್ನ ಆಯಾಮವನ್ನು ಒದಗಿಸಿ ಕೊಡುತ್ತದೆ.

ಹೊಸ ಸಾಧ್ಯತೆಗಳು/ಮುಂದಿನ ಅಧ್ಯಯನಕ್ಕೆ ಅವಕಾಶಗಳು:

(೧) ಸಾಹಿತ್ಯದ ಒಂದೊಂದು ಪ್ರಕಾರವನ್ನು ಅಥವಾ ಒಬ್ಬೊಬ್ಬರು ಸಾಹಿತಿಗಳನ್ನು ಅಥವಾ ಒಂದೊಂದು ಕಾಲಘಟ್ಟವನ್ನು ಆಯ್ದುಕೊಂಡು ಮನೋವೈಜ್ಞಾನಿಕ ಅಧ್ಯಯನವನ್ನು ನಡೆಸುವ ಮೂಲಕ ಸಾಹಿತ್ಯ ಕ್ಷೇತ್ರದ ಅಧ್ಯಯನದ ಅವಕಾಶಗಳನ್ನು ವಿಸ್ತರಿಸಿಕೊಳ್ಳಬಹುದಾಗಿದೆ.

(೨) ಮನೋವಿಜ್ಞಾನದ ಯಾವುದಾದರೂ ಒಂದು ಪರಿಕಲ್ಪನೆಯನ್ನು ಅಥವಾ ಸಿದ್ಧಾಂತವನ್ನು ಮಾತ್ರ ಆಯ್ದುಕೊಂಡು ಅದನ್ನು ಕೃತಿಗಳಲ್ಲಿ ವಿಶ್ಲೇಷಣೆಗೆ ಒಳಪಡಿಸಬಹುದಾಗಿದೆ.

(೩) ಸಾಹಿತ್ಯ ಮತ್ತು ಲೇಖಕ/ಕಿ ಮನಸ್ಥಿತಿಯ ಅಧ್ಯಯನ ನಡೆಸಬಹುದಾಗಿದೆ.

(೪) ಒಂದು ಸಾಹಿತ್ಯವು ಓದುಗ/ಸಹೃದಯರ ಮೇಲೆ ಬೀರಿದ ಪರಿಣಾಮದ ಅಧ್ಯಯನವನ್ನು ಮಾಡಬಹುದಾಗಿದೆ.

(೫) ಲೇಖಕನ/ಲೇಖಕಿಯ ವೈಯಕ್ತಿಕ ಬದುಕು ಆತ/ಆಕೆಯ ಸಾಹಿತ್ಯದ ಮೇಲೆ ಬೀರಿರುವ ಪ್ರಭಾವವನ್ನು ಅವರ ಜೀವನ ಮತ್ತು ಸಾಹಿತ್ಯವನ್ನು ಹೋಲಿಸುವುದರ ಮೂಲಕ ಅಧ್ಯಯನಕ್ಕೆ ಒಳಪಡಿಸಬಹುದಾಗಿದೆ.

‘ಅನುಬಂಧ’ದಲ್ಲಿ ಮೂಲ ಪಠ್ಯಗಳು ಅಂದರೆ ಈ ಅಧ್ಯಯನಕ್ಕೆ ಪ್ರಧಾನ ಆಕರಗಳೆಂದು ಪರಿಗಣಿಸಿರುವ ಕಾದಂಬರಿಗಳ ವಿವರಗಳಿವೆ. ಜೊತೆಗೆ ಪರಾಮರ್ಶನಕ್ಕೆ ಬಳಸಿಕೊಂಡ ಕನ್ನಡ ಗ್ರಂಥಗಳು, ಕನ್ನಡ ಲೇಖನಗಳು ಮತ್ತು ಇಂಗ್ಲಿಷ್ ಗ್ರಂಥಗಳು ಹಾಗೂ ಇಂಗ್ಲಿಷ್ ಲೇಖನಗಳ ಪಟ್ಟಿಯನ್ನು ನೀಡಲಾಗಿದೆ.